ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 । ಸಂಚಿಕೆ51 । ಡಿಸೆಂಬರ್14–20, 2020 । ಪುಟ 16 । ರೂ. 10

https://janashakthi.wordpress.com e-mail : js_weekly@yahoo.com

ಆರೆಸ್ಸೆಸ್ ಅಜೆಂಡಾ ಅನುಷ್ಠಾನದ ಸಂಭ್ರಮ



ಯಾಮಾರಿಸುವ ರಾಜಕಾರಣವೂ ಕಾರ್ಪೊರೇಟ್ ಕೃಷಿ ಕಾಯ್ದೆಗಳೂ



ಮುಂದಿದೆ ಒಂದು ದೀರ್ಘ ಹೋರಾಟ







ಚಾರಿತ್ರಿಕ ಭಾರತ್ ಬಂದ್ – ಜನತೆಯ ಅಪೂರ್ವ ಸ್ಪಂದನೆ

ಕೋವಿಡ್ –19 ಲಸಿಕೆಯ ಸುತ್ತ ಪ್ರಶ್ನೆಗಳ ಹುತ್ತ



ಮೊಂಡುತನ ಬಿಟ್ಟು ದೇಶದ ಅನ್ನದಾತರು ಎತ್ತಿರುವ ಬೇಡಿಕೆಗಳನ್ನು ಸ್ವೀಕರಿಸುವಂತೆ 'ನಿಮ್ಮ ಸರಕಾರದ' ಮನವೊಲಿಸಿ–ರಾಷ್ಟ್ರಪತಿಗಳಿಗೆ ಪ್ರತಿಪಕ್ಷಗಳ ಮನವಿ ಪತ್ರ

ಡಿಸೆಂಬರ್ 9 ರಂದು, ಈಗ ನಡೆಯುತ್ತಿರುವ ಭಾರತೀಯ ರೈತಾಪಿ ಜನಗಳ ಚಾರಿತ್ರಿಕ ಹೋರಾಟಕ್ಕೆ ತಮ್ಮ ಸೌಹಾರ್ದವನ್ನು ವ್ಯಕ್ತಪಡಿಸಿರುವ ಇಪ್ಪತ್ತಕ್ಕೂ ಹೆಚ್ಚು ರಾಜಕೀಯ ಪಕ್ಷಗಳ ಪರವಾಗಿ ರಾಷ್ಟ್ರಪತಿಗಳಿಗೆ ಒಂದು ಮನವಿ ಪತ್ರವನ್ನು ಸಲ್ಲಿಸಲಾಯಿತು. ಕೊವಿಡ್ ನಿರ್ಬಂಧಗಳಿಂದಾಗಿ ಈ ಪಕ್ಷಗಳ ಪರವಾಗಿ ಐವರು ಹಿರಿಯ ಮುಖಂಡರ ನಿಯೋಗ ರಾಷ್ಟ್ರಪತಿ ಭವನಕ್ಕೆ ಹೋಗಿ ಈ ಮನವಿ ಪತ್ರವನ್ನು ಸಲ್ಲಿಸಿತು, 'ನಿಮ್ಮ ಸರಕಾರ', "ಭಾರತದ ಅನ್ನದಾತರು ಎತ್ತಿರುವ ಬೇಡಿಕೆಗಳನ್ನು ಸ್ವೀಕರಿಸುವಂತೆ ಮನವೊಲಿಸಬೇಕು" ಎಂದು ಪತ್ರದಲ್ಲಿ ರಾಷ್ಟ್ರಪತಿಗಳನ್ನು ಮನವಿ ಮಾಡಲಾಗಿದೆ.

ರಾಹುಲ್ ಗಾಂಧಿ (ಕಾಂಗ್ರೆಸ್), ಶರದ್ ಪವಾರ್(ಎನ್.ಸಿ.ಪಿ.). ಸೀತಾರಾಂ ಯೆಚುರಿ (ಸಿಪಿಐ(ಎಂ)), ಡಿ.ರಾಜ (ಸಿಪಿಐ) ಮತ್ತು ಟಿ ಕೆ ಎಸ್ ಇಳಂಗೋವನ್(ಡಿಎಂಕೆ) ಈ ನಿಯೋಗದಲ್ಲಿದ್ದರು. ಅವರು ಸಲ್ಲಿಸಿದ ಮನವಿ ಪತ್ರದ ಪೂರ್ಣ ಪಾಟವನ್ನು ಸಿಪಿಐ(ಎಂ)ನ ಕೇಂದ್ರ ಕಚೇರಿಯಲ್ಲಿ ಮಾಧ್ಯಮಗಳಿಗೆ ಬಿಡುಗಡೆ ಮಾಡಲಾಯಿತು. ಅದನ್ನು ಈ ಮುಂದೆ ಕೊಡಲಾಗಿದೆ:

ಪ್ರಿಯ ರಾಷ್ಟ್ರಪತಿಗಳೇ,

ಇಪ್ಪತ್ತಕ್ಕೂ ಹೆಚ್ಚು ರಾಜಕೀಯ ಪಕ್ಷಗಳು, ರಾಜ್ಯ ಸರಕಾರಗಳನ್ನು ನಡೆಸುವ ಹಲವು ಪಕ್ಷಗಳನ್ನೂ ಸೇರಿ, ಈಗ ನಡೆಯುತ್ತಿರುವ ಭಾರತೀಯ ರೈತಾಪಿ ಜನಗಳ ಚಾರಿತ್ರಿಕ ಹೋರಾಟಕ್ಕೆ ತಮ್ಮ ಸೌಹಾರ್ದವನ್ನು ವ್ಯಕ್ತಪಡಿಸಿವೆ ಮತ್ತು ನಿನ್ನೆಯ, ಪ್ರತಿಗಾಮಿ ಕೃಷಿ ಕಾನೂನುಗಳನ್ನು ಮತ್ತು ವಿದ್ಯುತ್ ತಿದ್ದುಪಡಿ ಮಸೂದೆಯನ್ನು ರದ್ದುಪಡಿಸಬೇಕೆಂದು ಆಗ್ರಹಿಸುವ ಡಿಸೆಂಬರ್ 8ರ ಭಾರತ ಬಂದ್ ಕರೆಗೆ ಹೃದಯಾಂತರಾಳದ ಬೆಂಬಲವನ್ನು ಕೊಟ್ಟಿವೆ.

ಸಂಸತ್ತಿನಲ್ಲಿ ಪ್ರಜಾಪ್ರಭುತ್ವ–ವಿರೋಧಿ ರೀತಿಯಲ್ಲಿ ಒಂದು ಸಂರಚನಾತ್ಮಕ ಚರ್ಚೆ ಮತ್ತು ಮತದಾನ ನಡೆಯದಂತೆ ತಡೆದು ಪಾಸು ಮಾಡಿಕೊಂಡ ಈ ಹೊಸ ಕೃಷಿ ಕಾಯ್ದೆಗಳು ಭಾರತದ ಆಹಾರ ಭದ್ರತೆಗೆ ಬೆದರಿಕೆ ಒಡ್ಡಿವೆ, ಭಾರತೀಯ ಕೃಷಿ ಮತ್ತು ನಮ್ಮ ರೈತರನ್ನು ಧ್ವಂಸ ಮಾಡುತ್ತವೆ, ಕನಿಷ್ಟ ಬೆಂಬಲ ಬೆಲೆ(ಎಂ.ಎಸ್.ಪಿ.)ಯ ನಿರ್ಮೂಲನಕ್ಕೆ ಬುನಾದಿ ಹಾಕಿ ಕೊಡುತ್ತವೆ ಮತ್ತು ಭಾರತೀಯ ಕೃಷಿಯನ್ನು ಹಾಗೂ ನಮ್ಮ ಮಾರುಕಟ್ಟೆಗಳನ್ನು ಬಹುರಾಷ್ಟ್ರೀಯ ಕೃಷಿ ವ್ಯಾಪಾರೀ ಕಾರ್ಪೊರೇಟ್‌ಗಳ ಮತ್ತು ದೇಶೀ ಕಾರ್ಪೊರೇಟ್‌ಗಳ ಚಪಲಗಳಿಗೆ ಒತ್ತೆ ಇಡುತ್ತವೆ.

'ನಿಮ್ಮ ಸರಕಾರ' ಮೊಂಡುತನ ಬಿಟ್ಟು, ಭಾರತದ ಅನ್ನದಾತರು ಎತ್ತಿರುವ ಬೇಡಿಕೆಗಳನ್ನು ಸ್ವೀಕರಿಸುವಂತೆ ಮನವೊಲಿಸಬೇಕು ಎಂದು ಭಾರತೀಯ ಸಂವಿಧಾನದ ಸಂರಕ್ಷರಾಗಿರುವ ತಮ್ಮನ್ನು ಆಗ್ರಹಿಸುತ್ತೇವೆ.



ಡಿಸೆಂಬರ್ 14 ರಂದು ಮತ್ತೊಂದು 'ದಿಲ್ಲಿ ಚಲೋ': ದೇಶಾದ್ಯಂತ ಪ್ರತಿಭಟನೆ

ಜಿಯೊ ಉತ್ಪನ್ನಗಳ, ಅಂಬಾನಿ-ಅದಾನಿ ಮಾಲ್‌ಗಳ, ಪೆಟ್ರೋಲ್ ಬಂಕ್‌ಗಳ ಬಹಿಷ್ಕಾರಕ್ಕೆ ಕರೆ

ಭಾರತ ಬಂದ್‌ನ ಅಭೂತಪೂರ್ವ ಯಶಸ್ಸಿನ ನಂತರ, ಅದೇ ದಿನ ರಾತ್ರಿ ಗೃಹಮಂತ್ರಿ ಅಮಿತ್ ಷಾ ಸಭೆಯನ್ನು ಕರೆದರೂ ಆ ಸಭೆಯಲ್ಲೂ ಸರಕಾರದ ಸ್ಪಂದನೆಯಲ್ಲಿ ಹೊಸತೇನೂ ಕಾಣಲಿಲ್ಲ. ರೈತ ಮುಖಂಡರು ಮೂರು ಕಾಯ್ದೆಗಳು ಮತ್ತು ವಿದ್ಯುತ್ ಮಸೂದೆಯ ಬಗ್ಗೆ ತಮ್ಮ ನಿಲುವನ್ನು ಮತ್ತೆ ಸ್ಪಷ್ಟಪಡಿಸಿದ ಮೇಲೆ ಮರುದಿನ ಸರಕಾರದ ಕಡೆಯಿಂದ ಪ್ರಸ್ತಾವಗಳನ್ನು ಲಿಖಿತವಾಗಿ ಕಳಿಸಲಾಗುವುದು ಎಂದು ಹೇಳಲಾಯಿತು. ಡಿಸೆಂಬರ್ 9ರಂದು ಕೇಂದ್ರ ಸರಕಾರ 'ಹೊಸದು' ಎಂದು ಕಳಿಸಿದ ಲಿಖಿತ ಪ್ರಸ್ತಾವಗಳನ್ನು ಎಲ್ಲ ರೈತ ಸಂಘಟನೆಗಳು ಖಂಡಿಸಿವೆ ಮತ್ತು ತಿರಸ್ಕರಿಸಿವೆ. ಏಕೆಂದರೆ ಅವು ಹಳೆಯ ಪ್ರಸ್ತಾವಗಳಿಗೇ ಹೊಸ ರೂಪ ತೊಡಿಸಿರುವಂತವುಗಳು ಎಂದು ಅವು ಹೇಳಿವೆ.

ಇವು ಮೋದಿ ಸರಕಾರದ ಅಪ್ರಾಮಾಣಿಕತೆ ಮತ್ತು ಅಹಂಕಾರವನ್ನು ಪ್ರದರ್ಶಿಸುತ್ತವೆ ಎಂದು ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ ಹೇಳಿದೆ. ಎಲ್ಲ ರೈತ ಸಂಘಟನೆಗಳು ಮೂರು ಕೃಷಿ ಕಾಯ್ದೆಗಳನ್ನು ಮತ್ತು ವಿದ್ಯುತ್ ತಿದ್ದುಪಡಿ ಮಸೂದೆಯನ್ನು ರದ್ದು ಮಾಡಬೇಕೆಂಬ ತಮ್ಮ ಮೂಲ ಬೇಡಿಕೆಯನ್ನು ಪುನರುಚ್ಚರಿಸಿವೆ. ಮತ್ತು ತಮ್ಮ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿವೆ. ಸರಕಾರ ತನ್ನ ಮೊಂಡುತನ ಬಿಡದಿದ್ದರೆ ಈ ಮುಂದಿನ ಕ್ರಮಗಳನ್ನು ಕೈಗೊಳ್ಳಲು ರೈತ ಸಂಘಟನೆಗಳು ನಿರ್ಧರಿಸಿವೆ:

1. ಡಿಸೆಂಬರ್ 12: ದೇಶಾದ್ಯಂತ ಟೋಲ್ ಪ್ಲಾಝಾಗಳು ಶುಲ್ಕ ಮುಕ್ತವಾಗಿರುತ್ತವೆ.
2. ಡಿಸೆಂಬರ್ 12 ರಂದು ದಿಲ್ಲಿ– ಜೈಪುರ ರಾಷ್ಟ್ರೀಯ ಹೆದ್ದಾರಿಯನ್ನು ಜಾಮ್ ಮಾಡಲಾಗುವುದು.
3. ಡಿಸೆಂಬರ್ 14 ರಂದು ಉತ್ತರ ಭಾರತದ ರೈತರ ಮತ್ತೊಂದು 'ದಿಲ್ಲಿ ಚಲೋ'.
4. ಇತರ ರಾಜ್ಯಗಳಲ್ಲಿ ಪ್ರತಿಭಟನಾ ಕಾರ್ಯಾಚರಣೆಗಳು
5. ಜಿಯೊ ಉತ್ಪನ್ನಗಳ, ಅಂಬಾನಿ–ಅದಾನಿ ಮಾಲ್‌ಗಳು ಮತ್ತು ಪೆಟ್ರೋಲ್ ಬಂಕ್‌ಗಳ ಬಹಿಷ್ಕಾರ

"ಸರ್ಕಾರ್ ಕೀ ಅಸ್ಲಿ ಮಜ್ಬೂರಿ/ ಅಂಬಾನಿ–ಅದಾನಿ ಜಮಾಖೋರಿ"

(ಸರಕಾರದ ನಿಜವಾದ ಅಸಹಾಯಕತೆ– ಅಂಬಾನಿ–ಅದಾನಿ ಜಮಾಕೋರತೆ) ಎಂಬ ರಾಷ್ಟ್ರವ್ಯಾಪಿ ಪ್ರಚಾರಾಂದೋಲನವನ್ನು ಆರಂಭಿಸಲು ನಿರ್ಧರಿಸಿರುವುದಾಗಿ ಎ.ಐ.ಕೆ.ಎಸ್.ಸಿ.ಸಿ. ಹೇಳಿದೆ. ಪ್ರತಿಭಟನೆಗಳು ಮುಂದುವರೆಯುತ್ತವೆ, ಹೆಚ್ಚೆಚ್ಚು ರೈತರು ದಿಲ್ಲಿಗೆ ಬರುತ್ತಾರೆ, ಚಳುವಳಿಯನ್ನು ತೀವ್ರಗೊಳಿಸುತ್ತಾರೆ ಎಂದಿರುವ ಎ.ಐ.ಕೆ. ಎಸ್.ಸಿ.ಸಿ. ಎಲ್ಲ ಜಿಲ್ಲೆಗಳಲ್ಲಿ ಮತ್ತು ರಾಜ್ಯಗಳ ರಾಜಧಾನಿಗಳಲ್ಲಿ ನಿರಂತರ ಧರಣಿಗಳನ್ನು ಇತರ ಬೆಂಬಲಿಗ ಸಂಘನೆಗಳೊಂದಿಗೆ ಸಂಘಟಿಸಬೇಕು ಎಂದು ಕರೆ ನೀಡಿದೆ.

ಭಾರತ ಬಂದ್‌ಗೆ ಜನತೆಯ ಅಭೂತಪೂರ್ವ ಬೆಂಬಲ : ಎಡಪಕ್ಷಗಳ ಅಭಿನಂದನೆ

ರೈತ ಸಂಘಟನೆಗಳ ಸಂಯುಕ್ತ ವೇದಿಕೆಯು ಭಾರತ–ವಿರೋಧಿ, ರೈತ–ವಿರೋಧಿ ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳಲು ಕೇಂದ್ರ ಸರಕಾರ ನಿರಾಕರಿಸಿದ್ದಕ್ಕೆ ಎದುರಾಗಿ ನೀಡಿದ ಭಾರತ್ ಬಂದ್ ಕರೆಗೆ ಭಾರತದಾದ್ಯಂತ ಅಭೂತಪೂರ್ವ ಸ್ಪಂದನೆ ಸಿಕ್ಕಿದೆ. ಜನಗಳ ಸ್ವಯಂಸ್ಫೂರ್ತ ಸ್ಪಂದನೆ ಭಾರತದ ರೈತರ ಹೋರಾಟಕ್ಕೆ ಎಷ್ಟರ ಮಟ್ಟಿನ ಜನತೆಯ ಬೆಂಬಲ ಇದೆ ಎಂಬುದನ್ನು ತೋರಿಸಿದೆ ಎಂದು ಐದು ಎಡಪಕ್ಷಗಳು ಹೇಳಿವೆ.

ಅದಕ್ಕಾಗಿ ಅವು ಭಾರತದ ರೈತರನ್ನು ಮತ್ತು ಜನತೆಯನ್ನು ಅಭಿನಂದಿಸಿವೆ. ರೈತರು ತಮ್ಮ ದೃಢವಾದ ಹೋರಾಟಕ್ಕೆ ಮತ್ತು ತ್ಯಾಗಕ್ಕೆ ಅಭಿನಂದನಾರ್ಹರು ಮತ್ತು ಇಂದು ಅವರಿಗೆ ತೋರಿಸಿದ ಬೃಹತ್ ಬೆಂಬಲ ಮತ್ತು ಸೌಹಾರ್ದಕ್ಕಾಗಿ ಜನತೆಗೆ ಅಭಿನಂದನೆಗಳು ಎಂದು ಜಂಟಿ ಹೇಳಿಕೆಯೊಂದರಲ್ಲಿ ಎಡಪಕ್ಷಗಳು ಹೇಳಿವೆ.

ಕೇಂದ್ರ ಸರಕಾರ ಈ ರೈತ ಹೋರಾಟದ ನ್ಯಾಯಬದ್ಧ ಆಗ್ರಹಗಳನ್ನು ಸ್ವೀಕರಿಸಬೇಕು ಎಂದು ಎಡಪಕ್ಷಗಳು ಈ ಹೇಳಿಕೆಯಲ್ಲಿ ಕರೆ ನೀಡಿವೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜ, ಸಿಪಿಐ(ಎಂಎಲ್) ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಎಐಎಫ್‌ಬಿ ಯ ಪ್ರಧಾನ ಕಾರ್ಯದರ್ಶಿ ದೇಬಬ್ರತ ಬಿಸ್ವಾಸ್ ಮತ್ತು ಆರ್‌ಎಸ್‌ಪಿ ಯ ಪ್ರಧಾನ ಕಾರ್ಯದರ್ಶಿ ಮನೋಜ್ ಭಟ್ಟಾಚಾರ್ಯ ಈ ಜಂಟಿ ಹೇಳಿಕೆಯನ್ನು ನೀಡಿದ್ದಾರೆ.

ಭಾರತ ಬಂದ್ ಕರೆಗೆ ಚಾರಿತ್ರಿಕ ಸ್ಪಂದನೆ–ಎಐಕೆಎಸ್ ಬಹುಪಾಲು ರಾಜ್ಯಗಳಲ್ಲಿ ಸಂಪೂರ್ಣ ಬಂದ್: ಸರಕಾರಕ್ಕೆ ಸ್ಪಷ್ಟ ಸಂದೇಶ

ಸಂಯುಕ್ತ ಕಿಸಾನ್ ಮೋರ್ಚಾ(ಎಸ್.ಕೆ.ಎಂ.) ಕರೆ ನೀಡಿದ ಭಾರತ ಬಂದ್ ಗೆ ದೇಶಾದ್ಯಂತ ಭವ್ಯ ಬೆಂಬಲ ದೊರೆತಿದೆ. ಪಂಜಾಬ್, ಹರ್ಯಾಣ, ಪಶ್ಚಿಮ ಬಂಗಾಲ, ತ್ರಿಪುರ, ಬಿಹಾರ, ಝಾರ್ಖಂಡ, ಒಡಿಶ, ಅಸ್ಸಾಂ, ಆಂಧ್ರ ಪ್ರದೇಶ, ತೆಲಂಗಾಣ, ತಮಿಳುನಾಡು, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಸುಮಾರಾಗಿ ಸಂಪೂರ್ಣ ಬಂದ್ ಆಗಿದೆ. ಬೇರೆಲ್ಲ ರಾಜ್ಯಗಳಲ್ಲಿ ಜನಗಳಿಂದ ಒಳ್ಳೆಯ ಸ್ಪಂದನ ದೊರೆತಿದೆ. ಕೇರಳದಲ್ಲಿ ಸ್ಥಳೀಯ ಸಂಸ್ಥೆಗಳು ಚುನಾವಣೆಗಳಿಂದಾಗಿ ಬಂದ್ ಆಚರಿಸಲಾಗಲಿಲ್ಲ. ಆದರೆ ಕೇಂದ್ರ ಸರಕಾರದ ಕಚೇರಿಗಳ ಮುಂದೆ ಬೃಹತ್ ಮತಪ್ರದರ್ಶನಗಳು ನಡೆದವು, ವ್ಯಾಪಾರಸ್ಥರು ತಮ್ಮ ಅಂಗಡಿಗಳನ್ನು ಮುಚ್ಚಿದರು ಎಂದು ಅಖಿಲ ಭಾರತ ಕಿಸಾನ್ ಸಭಾ ಹೇಳಿದೆ.

ಬಿಜೆಪಿ ಆಳ್ವಿಕೆಯ ರಾಜ್ಯಗಳಾದ ಉತ್ತರಪ್ರದೇಶ, ಗುಜರಾತ ಮತ್ತು ಹರ್ಯಾಣದಲ್ಲಿ ನೂರಾರು ಕಾರ್ಯಕರ್ತರನ್ನು ಬಂಧಿಸಲಾಗಿದೆ. ಸಿಪಿಐ(ಎಂ) ರಾಜ್ಯಸಭಾ ಸದಸ್ಯರೂ ಆಗಿರುವ ಎಐಕೆಎಸ್‌ನ ಜಂಟಿ ಕಾರ್ಯದರ್ಶಿ ಕೆ.ಕೆ. ರಾಗೇಶ್, ಎಐಕೆಎಸ್ ಹಣಕಾಸು ಕಾರ್ಯದರ್ಶಿ ಪಿ.ಕೃಷ್ಣಪ್ರಸಾದ್, ಎಐಡಿಡಬ್ಲ್ಯುಎ ಪ್ರಧಾನ ಕಾರ್ಯದರ್ಶಿ ಮರಿಯಂ ಧವಳೆ, ಎಐಎಡಬ್ಲ್ಯುಯು ಜಂಟಿ ಕಾರ್ಯದರ್ಶಿ ವಿಕ್ರಂ ಸಿಂಗ್, ಸಿಐಟಿಯು ಹರ್ಯಾಣ ರಾಜ್ಯ ಅಧ್ಯಕ್ಷೆ ಸುರೇಖ, ಮತ್ತು ಕಟ್ಟಡ ಕಾರ್ಮಿಕರ ಒಕ್ಕೂಟ(ಸಿ.ಡಬ್ಲ್ಯು.ಎಫ್.ಐ.) ರಾಜ್ಯ ಅಧ್ಯಕ್ಷ ಸುಖಬೀರ್ ಸಿಂಗ್ ಪ್ರಭಾತ್ ಮತ್ತು ಇನ್ನತರ 250 ಮಂದಿಯನ್ನು ಹರ್ಯಾಣದ ಗುರುಗ್ರಾಮ್ ಬಳಿಯ ಬಿಲಾಸ್‌ಪುರದಲ್ಲಿ ಬಂಧಿಸಲಾಯಿತು. ಗುಜರಾತದಲ್ಲಿ ರಾಜ್ಯ ಸಿಐಟಿಯು ಅಧ್ಯಕ್ಷ ಅರುಣ್ ಮೆಹ್ತಾ, ಎಐಕೆಎಸ್ ರಾಜ್ಯ ಅಧ್ಯಕ್ಷ ದಯಾಬಾಯ್ ಗಜೆರಾ ಮತ್ತು ಇನ್ನೂ ಹಲವರನ್ನು ಬಂಧಿಸಲಾಗಿದೆ. ಎಐಕೆಎಸ್ ಈ ಬಂಧನಗಳನ್ನು ಖಂಡಿಸುತ್ತ ಅವರನ್ನೆಲ್ಲ ತಕ್ಷಣವೇ ಬಿಡುಗಡೆ ಮಾಡಬೇಕು ಮತ್ತು ಅವರ ಮೇಲಿನ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಎಐಕೆಎಸ್ ಆಗ್ರಹಿಸಿದೆ.

ಭಾರತ ಬಂದ್ ಸರಕಾರ ರೈತರ ಮೇಲೆ ನಡೆಸಿರುವ ದಮನದ ವಿರುದ್ಧ ಮತ್ತು ರೈತ–ವಿರೋಧಿ, ಕಾರ್ಪೊರೇಟ್–ಪರ ಕಾಯ್ದೆಗಳ ಬಗ್ಗೆ ಜನರ ನಡುವೆ ಬಹಳ ದೊಡ್ಡ ಮಟ್ಟದ ಸಿಟ್ಟು ಇದೆ ಎಂಬುದನ್ನು ತೋರಿಸಿದೆ. ಅಲ್ಲದೆ ಜನಗಳಲ್ಲಿ ಜಾತಿ, ಮತ, ಭಾಷೆಗಳನ್ನು ಮೀರಿದ ಐಕ್ಯತೆ ಇದೆ ಎಂಬುದನ್ನೂ ಕೂಡ ತೋರಿಸಿದೆ ಎಂದು ಅಭಿಪ್ರಾಯ ಪಟ್ಟಿರುವ ಎಐಕೆಎಸ್ ಭಾರತ ಬಂದ್‌ನ ಚಾರಿತ್ರಿಕ ಯಶಸ್ಸಿಗೆ ಭಾರತದ ಜನತೆಯನ್ನು ಹಾರ್ದಿಕವಾಗಿ ಅಭಿನಂದಿಸಿದೆ.





ಕೆ.ಕೆ ರಾಗೇಶ್ ಮತ್ತು ಮರಿಯಂ ಧವಳೆ ಅವರನ್ನು ಎಳೆದೊಯ್ಯಲು ಪ್ರಯತ್ನಿಸುತ್ತಿರುವ ಹರ್ಯಾಣ ಪೋಲಿಸರು

ಸಂಪಾದಕೀಯ

ಆರೆಸ್ಸೆಸ್ ಅಜೆಂಡಾ ಅನುಷ್ಠಾನದಲ್ಲಿ ಸಂಭ್ರಮಿಸುತ್ತಿರುವ ಯಡಿಯೂರಪ್ಪ

ಭಾರತೀಯ ಜನತಾ ಪಕ್ಷ ಗುರುವಾರ (ಡಿ. 10) ರಾಜ್ಯಾದ್ಯಂತ ಗೋವುಗಳ ಪೂಜೆ ಮಾಡಿ ಸಂಭ್ರಮಿಸಿದೆ. 'ಕರ್ನಾಟಕ ಗೋಹತ್ಯೆ ನಿಯಂತ್ರಣ ಮತ್ತು ಜಾನುವಾರು ಸಂರಕ್ಷಣೆ ವಿಧೇಯಕ'–2020 ಬುಧವಾರ ರಾಜ್ಯ ವಿಧಾನಸಭೆಯಲ್ಲಿ, ಯಾವುದೇ ಚರ್ಚೆ ಇಲ್ಲದೆ ಧ್ವನಿ ಮತದ ಮೂಲಕ ಅಂಗೀಕಾರವಾಗಿರುವುದು ಈ ಸಂಭ್ರಮಕ್ಕೆ ಕಾರಣ. ಗೋಹತ್ಯೆ ನಿಷೇಧ ಮಸೂದೆಯನ್ನು ವಿಧಾನಸಭೆಯಲ್ಲಿ ಪಶುಸಂಗೋಪನೆ ಸಚಿವರಾದ ಪ್ರಭು ಚವ್ಹಾಣ್ ಅವರು ವಿಧಾನಸೌಧದ ಆವರಣದಲ್ಲಿ ಗೋಪೂಜೆ ನೆರವೇರಿಸಿದರು. ಮುಖ್ಯ ಮಂತ್ರಿ ಯಡಿಯೂರಪ್ಪ ಅವರು ಸಹ ತಮ್ಮ ನಿವಾಸದಲ್ಲಿ ಗೋಪೂಜೆ ಮಾಡಿ ಸಂತಸ ವ್ಯಕ್ತಪಡಿಸಿದರು ಎನ್ನಲಾಗಿದೆ. ಮಸೂದೆ ವಿಧಾನಸಭೆಯಲ್ಲಿ ಅಂಗೀಕಾರವಾಗುತ್ತಿದ್ದಂತೆ ಬಿಜೆಪಿ ಶಾಸಕರು ಮತ್ತು ಸಚಿವರು 'ಗೋ ಮಾತೆಗೆ ಜೈ' 'ಜೈ ಶ್ರೀರಾಮ' ಮೊದಲಾದ ಘೋಷಣೆಗಳನ್ನು ಕೂಗಿದರು.

ವಿಧೇಯಕಕ್ಕೆ ವಿಧಾನ ಪರಿಷತ್‌ನಲ್ಲೂ ಅಂಗೀಕಾರ ದೊರೆತು ನಂತರ ರಾಜ್ಯ ಪಾಲರ ಸಹಿ ಬಿದ್ದರೆ ಅದು ಕಾನೂನು ಆಗಲಿದೆ. ವಿಧಾನ ಪರಿಷತ್‌ನಲ್ಲಿ ಬಿಜೆಪಿಗೆ ಬಹುಮತ ಇಲ್ಲ. ಬಿಜೆಪಿ ಜೊತೆಯಲ್ಲಿ ಜೆಡಿ(ಎಸ್) ಕೈ ಜೋಡಿಸಿದರೆ ಮಾತ್ರ ಈ ವಿಧೇಯಕವನ್ನು ವಿಧಾನ ಪರಿಷತ್ತಿನಲ್ಲಿ ಪಾಸ್ ಮಾಡಲು ಸಾಧ್ಯವಿತ್ತು. ಜೆಡಿ(ಎಸ್) ನಿಂದ ಭೂಸುಧಾರಣಾ ತಿದ್ದುಪಡಿ ವಿಧೇಯಕವನ್ನು ಪಾಸ್ ಮಾಡಲು ಬೆಂಬಲ ದೊರೆತಂತೆ ಗೋಹತ್ಯೆ ನಿಷೇಧ ಮಸೂದೆಗೆ ಜೆಡಿ(ಎಸ್) ಬೆಂಬಲ ದೊರೆಯದಿರಬಹುದು ಎಂಬ ಅನುಮಾನದಿಂದ ವಿಧಾನ ಪರಿಷತ್ತಿನಲ್ಲಿ ಮಸೂದೆ ಮಂಡನೆ ಆಗುವ ಮೊದಲೇ ಸಭಾಪತಿ ಪ್ರತಾಪ್ ಚಂದ್ರ ಶೆಟ್ಟಿ ಅನಿರ್ದಿಷ್ಟಾವಧಿಗೆ ವಿಧಾನ ಪರಿಷತ್ ಕಲಾಪಗಳನ್ನು ಮುಂದೂಡಿದರು.

ಕರ್ನಾಟಕದಲ್ಲಿ 1964 ರಿಂದಲೇ 'ಕರ್ನಾಟಕ ಜಾನುವಾರು ಹತ್ಯೆ ನಿಷೇಧ ಮತ್ತು ಅವುಗಳ ರಕ್ಷಣೆ' ಎಂಬ ಒಂದು ಕಾನೂನು ಜಾರಿಯಲ್ಲಿದೆ. 1964 ರ ಕಾಯ್ದೆ ಗೋವುಗಳನ್ನು ಹೊರತುಪಡಿಸಿ ಹೋರಿಗಳು, ಎತ್ತುಗಳು, ಎಮ್ಮೆಗಳು ಮತ್ತು ಕೋಣಗಳನ್ನು ಮಾಂಸಕ್ಕಾಗಿ ವಧಿಸಲು ಅನುಮತಿ ನೀಡುತ್ತದೆ. ಆದರೆ ಆ ಜಾನುವಾರುಗಳಿಗೆ 12 ವರ್ಷಗಳಿಗಿಂತ ಹೆಚ್ಚು ವಯಸ್ಸಾಗಿರಬೇಕು ಅಥವ ಅವುಗಳು ಸಾಕಲು ಯೋಗ್ಯವಲ್ಲದವು ಅಥವ ಹಾಲು ಕೊಡದಿರುವ ಜಾನುವಾರುಗಳಾಗಿರಬೇಕು. 2010 ರಲ್ಲಿ ಯಡಿಯೂರಪ್ಪ ಮೊದಲ ಬಾರಿಗೆ ರಾಜ್ಯದ ಮುಖ್ಯ ಮಂತ್ರಿಯಾಗಿದ್ದಾಗ 'ಕರ್ನಾಟಕ ಜಾನುವಾರು ಹತ್ಯೆ ನಿಷೇಧ ಮತ್ತು ಅವುಗಳ ರಕ್ಷಣೆ' ಎಂಬ ಮಸೂದೆಯನ್ನು ಮಂಡಿಸಿ ಅಂಗೀಕರಿಸಿತು. ಆದರೆ ರಾಷ್ಟ್ರಪತಿ ಅವರಿಂದ ಅಗತ್ಯ ಅನುಮೋದನೆ ದೊರೆಯಲಿಲ್ಲ. ನಂತರ ಅಧಿಕಾರಕ್ಕೆ ಬಂದ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅದನ್ನು ಬದಿಗಿಟ್ಟು 1964 ರ ಕಾಯ್ದೆಯನ್ನು ಜಾರಿಯಲ್ಲಿ ಉಳಿಸಿತು. ಈಗ ಜಾರಿಯಲ್ಲಿರುವ 1964 ರ ಕಾಯ್ದೆಗಿಂತ ಕಠಿಣವಾದ ಕಾಯ್ದೆಯನ್ನು ತರುವುದು ಯಡಿಯೂರಪ್ಪ ನೇತೃತ್ವದ ಬಿಜೆಪಿಯ ಉದ್ದೇಶವಾಗಿದೆ. 2010 ರ ಮಸೂದೆಯನ್ನು ಇನ್ನಷ್ಟು ಬಿಗಿಗೊಳಿಸುವುದು ಪ್ರಸಕ್ತ ತಿದ್ದುಪಡಿ ವಿಧೇಯಕದ ಉದ್ದೇಶವಾಗಿದೆ. ಗುಜರಾತ್ ಮತ್ತು ಉತ್ತರ ಪ್ರದೇಶದಲ್ಲಿ ಅನುಷ್ಠಾನಗೊಂಡಿರುವ ಕಾಯ್ದೆಗಳಲ್ಲಿ ಇರುವ ಅಂಶಗಳನ್ನು ಇದರಲ್ಲಿ ಸೇರಿಸಲಾಗಿದೆ ಎಂದು ಹೇಳಲಾಗುತ್ತದೆ.

ಬಿಜೆಪಿಯ ಪ್ರಸಕ್ತ ವಿಧೇಯಕ ಹಸು, ಕರು, ಹೋರಿ, ಎತ್ತು, ಎಮ್ಮೆ, ಕೋಣ, ಎಮ್ಮೆ ಕರುಗಳ ಹತ್ಯೆ ಹಾಗೂ ಹತ್ಯೆಗೆ ನೀಡುವುದನ್ನು ನಿಷೇಧಿಸುತ್ತದೆ. ಈ ಜಾನುವಾರುಗಳ ಮಾಂಸ ಮಾರಾಟ, ಸೇವನೆ ಹಾಗೂ ಅದನ್ನು ಹೊಂದಿರುವುದು ಸಹ ನಿಷಿದ್ದ. ಹತ್ಯೆಗಾಗಿ ಜಾನುವಾರುಗಳ ಸಾಗಣೆ ನಿಷೇಧಿಸಲ್ಪಡಲಿದೆ. ತಪ್ಪಿತಸ್ಥರಿಗೆ 3 ರಿಂದ 7 ವರ್ಷ ಜೈಲು, 50 ಸಾವಿರ ರೂ. ಯಿಂದ 5 ಲಕ್ಷ ರೂ. ವರೆಗೆ ದಂಡ ಅಥವ ಎರಡನ್ನೂ ವಿಧಿಸಲು ಅವಕಾಶವಿದೆ. ಪುನರಾವರ್ತಿತ ಅಪರಾಧಕ್ಕೆ 1 ಲಕ್ಷ ರೂ. ಯಿಂದ 5 ಲಕ್ಷ ರೂ. ವರೆಗೆ ದಂಡ ಹಾಗೂ 7 ವರ್ಷ ಜೈಲು ಶಿಕ್ಷೆ ವಿಧಿಸಬಹುದಾಗಿದೆ. ವಿಧೇಯಕವು ಇನ್ನೂ ಹಲವಾರು ಕಠಿಣ ನಿಯಮಗಳನ್ನು ಒಳಗೊಂಡಿದೆ.

ಗೋಮಾಂಸ ಸೇವನೆಯನ್ನು ನಿಷೇಧಿಸುವುದು ತಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯ ಭಾಗವಾಗಿತ್ತು ಎಂದು ಬಿಜೆಪಿ ಹೇಳಿಕೊಂಡಿದೆ. ಆದರೆ ವಾಸ್ತವವಾಗಿ ಗೋಹತ್ಯೆ ನಿಷೇಧ ಆರೆಸ್ಸೆಸ್ ನ ಪ್ರಮುಖ ಅಜೆಂಡಾಗಳಲ್ಲಿ ಒಂದಾಗಿದೆ. ಜಮ್ಮು ಕಾಶ್ಮೀರಕ್ಕೆ ಸಂಬಂಧಪಟ್ಟ ಸಂವಿಧಾನದ 370 ನೇ ಕಲಂ ರದ್ದುಗೊಳಿಸುವುದು, ಬಾಬರಿ ಮಸೀದಿಯನ್ನು ಧ್ವಂಸಮಾಡಿ ಅಲ್ಲಿ ದೇವಸ್ಥಾನ ಕಟ್ಟುವುದು, ಮಥುರಾ ಹಾಗೂ ವಾರಾಣಾಸಿಯಲ್ಲಿ ಮಸೀದಿಗಳನ್ನು ನಾಶಮಾಡುವುದು, ಸಾಮಾನ್ಯ ನಾಗರಿಕ ಸಂಹಿತೆಯನ್ನು ಜಾರಿಗೆ ತರುವುದು, ಮೂರು ಬಾರಿ ತಲಾಖ್ ಕೂಗಿ ವಿವಾಹ ವಿಚ್ಛೇಧನ ಪಡೆಯುವುದು ಮುಂತಾದವುಗಳು ಆರೆಸ್ಸೆಸ್ ನ ಕೆಲವು ಅಜೆಂಡಾಗಳು. ಅವುಗಳಲ್ಲಿ ಕೆಲವು ಅಜೆಂಡಾಗಳು ಈಗಾಗಲೇ ಜಾರಿಗೆ ಬಂದು ಬಿಟ್ಟಿವೆ.



ಆರೆಸ್ಸೆಸ್ ತನ್ನನ್ನು ಒಂದು ಸಾಂಸ್ಕೃತಿಕ ಸಂಘಟನೆ ಎಂದು ಕರೆದುಕೊಳ್ಳುತ್ತದೆ. ದೇಶವನ್ನು ಹಿಂದೂ ರಾಷ್ಟ್ರವಾಗಿ ಪರಿವರ್ತಿಸುವುದು ಮತ್ತು ಆ ಮೂಲಕ ಸನಾತನ ಸಂಸ್ಕೃತಿಯನ್ನು ರಕ್ಷಿಸುವುದು ತನ್ನ ಉದ್ದೇಶವಾಗಿದೆ ಎಂದು ಅದು ಹೇಳುತ್ತದೆ. ಹೀಗೆ ಹೇಳುತ್ತಾ ಈ ದೇಶದ ಮುಗ್ಧ ಯುವಜನರನ್ನು ಅದು ದಾರಿತಪ್ಪಿಸುತ್ತಾ ಬಂದಿದೆ. ಈ ದೃಷ್ಟಿಯಿಂದ ಆರೆಸ್ಸೆಸ್ ಪಕ್ಕಾ ಒಂದು ರಾಜಕೀಯ ಸಂಘಟನೆಯಾಗಿದೆ.

ಹಿಂದೂ ರಾಷ್ಟ್ರ ಕಟ್ಟುವ ಗುರಿ ಸ್ಪಷ್ಟವಾಗಿ ರಾಜಕೀಯ ಗುರಿಯಾಗಿದೆ. ಆ ಹಿಂದೂ ರಾಷ್ಟ್ರದಲ್ಲಿ ಹಿಂದುಯೇತರರಿಗೆ ಅವಕಾಶವಿಲ್ಲ. ಅದೊಂದು ಫ್ಯಾಸಿಸ್ಟ್ ಮಾದರಿಯ ರಾಷ್ಟ್ರವನ್ನು ಪ್ರತಿಪಾದಿಸುತ್ತದೆ. ಅದು ಪ್ರತಿಪಾದಿಸುವ ಸಂಸ್ಕೃತಿ ನಮ್ಮ ನೆಲದ ಬಹುಸಂಸ್ಕೃತಿಯನ್ನು ನಿರಾಕರಿಸುತ್ತದೆ. ಧಾರ್ಮಿಕ ಭಾವನೆಗಳನ್ನು ಕೆರಳಿಸಿ, ಅದನ್ನು ಅವರ ರಾಜಕೀಯವನ್ನು ಬಲಪಡಿಸಲು ಅದು ಬಳಸುತ್ತಾ ಬಂದಿದೆ.

ಕರ್ನಾಟಕದಲ್ಲಿ ವಿವಿಧ ಹಂತದ ಚುನಾವಣೆಗಳು ಸಮೀಪಿಸುತ್ತಿವೆ. ಗೋಹತ್ಯೆ ನಿಷೇದ ಕಾಯ್ದೆಯನ್ನು ತರುವ ಮೂಲಕ ಆರೆಸ್ಸೆಸ್ ತನ್ನ ಹಿಂದು ಓಟ್ ಬ್ಯಾಂಕ್‌ನ್ನು ಬಲಪಡಿಸಲು ಹೊರಟಿದೆ. ನಮ್ಮ ದೇಶದ ಹಿಂದೂಗಳಲ್ಲಿ ಬಹುಸಂಖ್ಯಾತರು ಮುಗ್ಧರು. ಅವರಿಗೆ ಗೋವಿನ ಮೇಲೆ ಭಕ್ತಿ ಇದೆ. ಅವರು ಗೋವನ್ನು ಮಾತೆ ಎಂತಲೂ ದೇವರು ಎಂತಲೂ ಪೂಜ್ಯವಾಗಿ ಕಾಣುತ್ತಾರೆ. ಹಿಂದುಗಳ ಈ ನಂಬಿಕೆಯನ್ನು, ಈ ಮುಗ್ಧ ಭಕ್ತಿಯನ್ನು ಆರೆಸ್ಸೆಸ್ ಚುನಾವಣೆಗೆ ಬಳಕೆ ಮಾಡಲು ಬಯಸುತ್ತದೆ. ಆರೆಸ್ಸೆಸ್/ಬಿಜೆಪಿ ಜನರ ನಡುವೆ ಪ್ರಭಾವವನ್ನು ಕಳೆದುಕೊಳ್ಳುತ್ತಾ ಬರುತ್ತಿದೆ. ಬಿಜೆಪಿಗಾಗಲಿ, ಆರೆಸ್ಸೆಸ್‌ಗಾಗಲಿ ದೇಶದಲ್ಲಿ ಹೆಚ್ಚುತ್ತಿರುವ ಬಡತನ, ನಿರುದ್ಯೋಗ, ದಲಿತರ ಮೇಲಿನ ದೌರ್ಜನ್ಯ, ಮಹಿಳೆಯರ ಮೇಲಿನ ಅತ್ಯಾಚಾರದಂತಹ ಜ್ವಲಂತ ಪ್ರಶ್ನೆಗಳ ಬಗ್ಗೆ ಆಸಕ್ತಿ ಇಲ್ಲ. ಬಿಜೆಪಿ ಹೆಚ್ಚು ಹೆಚ್ಚಾಗಿ ಉದಾರೀಕರಣ, ಖಾಸಗೀಕರಣ ನೀತಿಗಳನ್ನು ಅನುಸರಿಸುವಂತೆ ಆರೆಸ್ಸೆಸ್ ನಿರ್ದೇಶನ ನೀಡುತ್ತಿದೆ. ಗೋಹತ್ಯೆ ನಿಷೇಧ ಮಸೂದೆಯನ್ನು ತರಾತುರಿಯಲ್ಲಿ ಮಂಡಿಸಲು ಆರೆಸ್ಸೆಸ್ ಆದೇಶವೇ ಕಾರಣವಾಗಿದೆ. ತನ್ನ ರಾಜಕೀಯ ಪ್ರಭಾವವನ್ನು ಹೆಚ್ಚಿಸುವುದೇ ಅವರ ಉದ್ದೇಶವಾಗಿದೆ.

ಗೋಹತ್ಯೆ ನಿಷೇಧದ ಹಿಂದಿನ ರಾಜಕೀಯ ಲೆಕ್ಕಾಚಾರಗಳನ್ನು ನಾವು ತಿಳಿಯುವುದು ಅಗತ್ಯವಾಗಿದೆ. ರಾಜಸ್ತಾನ ಮತ್ತು ಉತ್ತರ ಪ್ರದೇಶದಲ್ಲಿ ಜಾರಿಗೆ ತಂದಿರುವ ಈ ಕಾಯ್ದೆಯನ್ನು, ಈಗ ಕರ್ನಾಟಕದಲ್ಲಿ ಅನುಷ್ಠಾನಗೊಳಿಸಲು ಹೊರಟಿರುವ ಕಾಯ್ದೆಯನ್ನು ಗೋವಾ, ಅಸ್ಸಾಂ, ಮಿಜೋರಾಮ್ ಮೊದಲಾದ ರಾಜ್ಯಗಳಲ್ಲಿ ಬಿಜೆಪಿ ಏಕೆ ಜಾರಿ ಮಾಡಲು ಮುಂದಾಗುತ್ತಿಲ್ಲ? ಅಲ್ಲಿಯೂ ಬಿಜೆಪಿ ಸರ್ಕಾರಗಳಿವೆಯಲ್ಲ? ಇದರ ಒಳಗುಟ್ಟು ನಿಗೂಢವಾದದ್ದು ಅಲ್ಲ. ಅಲ್ಲಿ ಬಹುಸಂಖ್ಯಾತರು ಗೋಮಾಂಸ ಸೇವನೆ ಮಾಡುತ್ತಾರೆ. ಅವರ ಮತಗಳ ಮೇಲೆ ಕಣ್ಣಿಟ್ಟಿರುವ ಬಿಜೆಪಿಗೆ ಅಲ್ಲಿ ಇದೇ ಕಾಯ್ದೆಯನ್ನು ಜಾರಿಗೆ ತರಲಾಗುವುದಿಲ್ಲ. ಆರೆಸ್ಸೆಸ್ ಮಾಡುತ್ತಿರುವುದು ಹಿಂದೂ ಸಂಕುಚಿತ ರಾಜಕೀಯ. ಅಧಿಕಾರ ಗಿಟ್ಟಿಸಿಕೊಳ್ಳುವುದಕ್ಕೇ ಅದರ ತಂತ್ರಗಾರಿಕೆ.

ದನದ ಮಾಂಸ ರಫ್ತು ಮಾಡುವ ದೇಶಗಳಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ. ಬಿಜೆಪಿ ಅಧಿಕಾರಕ್ಕೆ ಬಂದು ವರ್ಷಗಳೇ ಕಳೆದವು. ಆರೆಸ್ಸೆಸ್ ದನದ ಮಾಂಸ ರಫ್ತು ಮಾಡುವುದನ್ನು ನಿಲ್ಲಿಸಲಿಲ್ಲ. ಇಲ್ಲಿಯೂ ಆರೆಸ್ಸೆಸ್/ಬಿಜೆಪಿಯ ಓಟಿನ ರಾಜಕೀಯ ಕೆಲಸ ಮಾಡುತ್ತದೆ. ಈ ಮಸೂದೆಯನ್ನು ಅಂಗೀಕರಿಸುವ ಮೂಲಕ ಆರೆಸ್ಸೆಸ್ ಜನರನ್ನು ಧರ್ಮದ ಆಧಾರದಲ್ಲಿ ಒಡೆಯಲು ಬಯಸುತ್ತದೆ. ಬಹುಸಂಖ್ಯಾತ ಹಿಂದುಗಳು ಒಂದಾಗಬೇಕು. ಹಿಂದುಯೇತರರಲ್ಲಿ ಗೋಮಾಂಸ ಸೇವನೆ ಮಾಡುವವರನ್ನು ಶತ್ರುಗಳಾಗಿ ಕಾಣುವಂತೆ ಮಾಡಿ ಪರಸ್ಪರ ದ್ವೇಷವನ್ನು ಬೆಳೆಸುವುದು ಆರೆಸ್ಸೆಸ್ ಉದ್ದೇಶವಾಗಿದೆ.

ಗೋಮಾಂಸ ಸೇವನೆಯಿಂದ ಹಿಂದೂಗಳ ಭಾವನೆಗಳಿಗೆ ನೋವಾಗುತ್ತಿದೆ ಎಂದು ಹೇಳಲಾಗುತ್ತದೆ. ಅದು ಕೆಲಮಟ್ಟಿಗೆ ನಿಜವಿರಬಹುದು. ಆದರೆ ಗೋಮಾಂಸ ಸೇವನೆ ಮಾಡುವವರ ಮೇಲೆ ಹಲ್ಲೆ ಮಾಡಿ, ಅವರನ್ನು ಹತ್ಯೆ ಮಾಡುವುದು ಎಷ್ಟು ಸರಿ? ಇಲ್ಲಿ ಮನುಷ್ಯರಿಗಿಂತ ಪಶುಗಳೇ ಹೆಚ್ಚು ಸುರಕ್ಷಿತ ಎಂಬಂತೆ ಕಾಣುತ್ತಿಲ್ಲವೆ? ಗೋಮಾಂಸ ಸೇವನೆ ಮಾಡುವುದು ಅವರವರ ಹಕ್ಕು. ಅದನ್ನು ಕಾನೂನಿನ ಮೂಲಕ ಕಿತ್ತುಕೊಳ್ಳುವುದು ತಪ್ಪು. ದನದ ಮಾಂಸ ತಿನ್ನುವವರು ಮತ್ತು ತಿನ್ನದಿರುವವರು ಮೊದಲು ಪರಸ್ಪರ ಸ್ನೇಹ ಭಾವನೆಯಿಂದ ಉತ್ತಮ ನೆರೆಹೊರೆಯವರಾಗಿ ಬದುಕಲು ಸಾಧ್ಯವಾಗಬೇಕು. ಅವರ ಪೌಷ್ಠಿಕ ಆಹಾರ ಅಗತ್ಯತೆಯನ್ನು ಉಳಿದವರೂ ಅರ್ಥಮಾಡಿಕೊಳ್ಳಬೇಕು. ಪರ್ಯಾಯ ವ್ಯವಸ್ಥೆ ಅವರಿಗಾಗಿ ಮಾಡಬೇಕು. ಆಗ ಮಾತೆ ಎಂದು ಪೂಜಿಸಲ್ಪಡುವ ಗೋವಿನ ಮಾಂಸ ಸೇವನೆ ಮಾಡುವುದನ್ನು ಅವರು ಸ್ವಯಂ ಪ್ರೇರಣೆಯಿಂದ ನಿಲ್ಲಿಸಬಹುದು. ಈಗಾಗಲೇ ಸಮಾಜದಲ್ಲಿ ಗೋಮಾಂಸ ಸೇವಿಸುವ ಅನೇಕ ಜನ ಅದನ್ನು ಬಿಟ್ಟಿದ್ದಾರೆ. ಆದರೆ ಬಲವಂತದಿಂದ ಹಾಗೇ ಮಾಡುವುದು ಅವರ ಭಾವನೆಗಳಿಗೂ ನೋವು ಉಂಟುಮಾಡುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಮುಖ್ಯಮಂತ್ರಿ ಯಡಿಯೂರಪ್ಪ ವಿಧಾನಸೌಧದ ಆವರಣಕ್ಕೆ ಗೋವುಗಳನ್ನು ತರುವ ಅಗತ್ಯ ಇಲ್ಲ. ●

ಭಾರತ ಬಂದ್ ಬೆಂಬಲಿಸಿ ಕರಾವಳಿ ಜಿಲ್ಲೆಗಳಲ್ಲಿ ರಸ್ತೆ ತಡೆ





ಕೇಂದ್ರ ಸರಕಾರವು ಅಂಗೀಕರಿಸಿ ಜಾರಿ ಮಾಡಿದ 3 ಕೃಷಿ ಕಾಯ್ದೆಗಳನ್ನು ಹಿಂತೆಗೆಯಬೇಕೆಂದು ಆಗ್ರಹಿಸಿ ದೇಶಾದ್ಯಂತ ಭಾರತ್ ಬಂದ್ ನಡೆಸಲು ರಾಷ್ಟ್ರದ ರೈತ ಸಂಘಟನೆಗಳ ಒಕ್ಕೂಟವಾದ ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ ಕರೆ ನೀಡಿದ ಮೇರೆಗೆ, ಡಿಸೆಂಬರ 8 ರಂದು ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಬಂದ್ ಬೆಂಬಲಿಸಿ ಅಲ್ಲಲ್ಲಿ ರಸ್ತೆ ತಡೆ ಪ್ರತಿಭಟನೆಗಳು ನಡೆದುವು. ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆಯ ವಿವಿಧ ಬಣಗಳು ಪ್ರತಿಭಟನೆಯಲ್ಲಿ ಪ್ರಧಾನ ಪಾತ್ರ ವಹಿಸಿದ್ದವು. ಕಾಂಗ್ರೆಸ್, ಜೆಡಿಎಸ್, ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳು ಈ ಪ್ರತಿಭಟನೆಗೆ ಬೆಂಬಲ ಸೂಚಿಸಿದ್ದವು.

ಮಂಗಳೂರಿನ ನಂತೂರು ವೃತ್ತದಲ್ಲಿ ಹೆದ್ದಾರಿ ತಡೆ ನಡೆಸಿದಾಗ, ಸುಮಾರು 500 ಮಂದಿ ಪ್ರದರ್ಶನಕಾರರು ಭಾಗವಹಿಸಿದ್ದರು. ರೈತ ಸಂಘಗಳು, ಕಾರ್ಮಿಕ ಸಂಘಗಳು, ರಾಷ್ಟ್ರೀಯ ಪಕ್ಷಗಳ ಕಾರ್ಯಕರ್ತರಲ್ಲದೆ ಡಿವೈಎಫ್ಐ, ಕಿಸಾನ್ ಕಾಂಗ್ರೆಸ್, ಜನವಾದಿ ಮಹಿಳಾ ಸಂಘದ ಕಾರ್ಯಕರ್ತರು ಭಾಗವಹಿಸಿದ್ದರು. ರಾಜ್ಯ ರೈತ ಸಂಘ ಹಸಿರುಸೇನೆಯ ಜಿಲ್ಲಾಧ್ಯಕ್ಷ ಓಸ್ವಾಲ್ಡ್ ಪ್ರಕಾಶ್ ಫೆರ್ನಾಂಡೀಸ್ ಪ್ರತಿಭಟನೆಯನ್ನು ಉದ್ಘಾಟಿಸಿದರು. ಪ್ರಾಂತ ರೈತ ಸಂಘದ ಯಾದವ ಶೆಟ್ಟಿ, ಸಿಐಟಿಯುವಿನ ಜೆ.ಬಾಲಕೃಷ್ಣ ಶೆಟ್ಟಿ, ಹಸಿರುಸೇನೆಯ ಮನೋಹರ ಶೆಟ್ಟಿ, ಸಿಪಿಐ(ಎಂ)ನ ವಸಂತ ಆಚಾರಿ, ಜೆಡಿಎಸ್‌ನ ಎಂ.ಬಿ.ಸದಾಶಿವ, ಕಾಂಗ್ರೆಸ್ಸಿನ ಐವನ್ ಡಿಸೋಜ ಮತ್ತು ಮೊಯಿದಿನ್ ಬಾವಾ, ನಿವೃತ್ತ ಪ್ರಾಧ್ಯಾಪಕ ಪ್ರೊ.ಶ್ರೀಕುಮಾರ್ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಪ್ರತಿಭಟನೆಯಲ್ಲಿ ಸಿಐಟಿಯುವಿನ ಸುನಿಲ್ ಕುಮಾರ್ ಬಜಾಲ್, ರಾಮಣ್ಣ ವಿಟ್ಲ, ಪ್ರಾಂತ ರೈತ ಸಂಘದ ದ.ಕ.ಜಿಲ್ಲಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ವಾಸುದೇವ ಉಚ್ಚಿಲ, ರಾಜ್ಯ ರೈತ ಸಂಘದ ಶ್ರೀಧರ ಶೆಟ್ಟಿ ಬೈಲಗುತ್ತು, ಆಲ್ವಿನ್ ಮಿನೇಜಸ್, ಸನ್ನಿ ಡಿಸೋಜ, ಡಿವೈಎಫ್ಐನ ಮುನೀರ್ ಕಾಟಿಪಳ್ಳ, ಬಿ.ಕೆ.ಇಮ್ತಿಯಾಜ್, ಸಂತೋಷ್ ಬಜಾಲ್, ಜೆಎಂಎಸ್‌ನ ಜಯಂತಿ ಬಿ.ಶೆಟ್ಟಿ, ಭಾರತಿ ಬೋಳಾರ್, ನ್ಯಾಯವಾದಿ ಯಶವಂತ ಮರೋಳಿ, ಸಾಮಾಜಿಕ ಕಾರ್ಯಕರ್ತ ಪ್ರೊ.ರೀಟಾ ನೊರೊನ್ಹಾ, ವಿದ್ಯಾ ದಿನಕರ್ ಭಾಗವಹಿಸಿದ್ದರು.

ಮಂಗಳೂರು ನಗರದ ಹಳೆ ಬಂದರು ಪ್ರದೇಶದಲ್ಲಿ ಇನ್ನೊಂದು ಪ್ರತಿಭಟನಾ ಪ್ರದರ್ಶನ ನಡೆಯಿತು. ಮಾರುಕಟ್ಟೆಯಲ್ಲಿ ಸಗಟು ವಹಿವಾಟು ಆರಂಭಗೊಳ್ಳುತ್ತಿದ್ದಂತೆ, ಬಂದರು ಶ್ರಮಿಕ ಸಂಘಕ್ಕೆ ಸೇರಿದ್ದ (ಸಿಐಟಿಯು) 50ಕ್ಕೂ ಮೀರಿ ಕಾರ್ಮಿಕರು ಕೆಲಸ ಸ್ಥಗಿತಗೊಳಿಸಿ ಹಳೆಬಂದರು ಕಾರ್ಮಿಕರ ಕಟ್ಟೆ ಬಳಿ ಜಮಾಯಿಸಿ ಪ್ರತಿಭಟನೆ ನಡೆಸಿದರು. ಸಂಘದ ಅಧ್ಯಕ್ಷ ವಿಲ್ಲಿ ವಿಲ್ಸನ್, ಕಾರ್ಯದರ್ಶಿ ಬಿ.ಕೆ.ಇಮ್ತಿಯಾಜ್, ನಗರಪಾಲಿಕೆ ಸದಸ್ಯ ಅಬ್ದುಲ್ ಲತೀಫ್ ಈ ಪ್ರತಿಭಟನೆಗೆ ನೇತೃತ್ವ ನೀಡಿದ್ದರು.

ಉಡುಪಿ ಅಜ್ಜರಕಾಡು ಹುತಾತ್ಮ ಸ್ಮಾರಕದ ಎದುರು ನಡೆದ ಪ್ರತಿಭಟನೆಯನ್ನು ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಕೆ.ಶಂಕರ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ, ಜಿಲ್ಲಾ ಮುಸ್ಲಿಂ ಒಕ್ಕೂಟದ ಯಾಸೀನ್ ಮಲ್ಪೆ, ದಸಂಸ (ಅಂಬೇಡ್ಕರ್‌ವಾದ)ದ ಜಿಲ್ಲಾ ಸಂಚಾಲಕ ಸುಂದರ ಮಾಸ್ತರ್, ಜೆಡಿಎಸ್ ಜಿಲ್ಲಾಧ್ಯಕ್ಷ ಯೋಗೀಶ್ ಶೆಟ್ಟಿ, ಕಿಸಾನ್ ಕಾಂಗ್ರೆಸ್ಸಿನ ಶಶಿಧರ ಶೆಟ್ಟಿ ಎರ್ಮಾಳ್, ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ಅಣ್ಣಯ್ಯ ಶೇರಿಗಾರ್, ಸಿಐಟಿಯು ಮುಖಂಡ ವಿಶ್ವನಾಥ ರೈ ಮಾತನಾಡಿದರು. ಪ್ರತಿಭಟನೆಯ ಮಧ್ಯೆ ಕೇಂದ್ರ ಸರಕಾರ ಹಾಗೂ ಪ್ರಧಾನಿಯ ಪ್ರತಿಕೃತಿಯನ್ನು ದಹಿಸಿ ಆಕ್ರೋಶ ವ್ಯಕ್ತಪಡಿಸಲಾಯಿತು.

ಕುಂದಾಪುರದಲ್ಲಿ ಶಾಸ್ತ್ರಿ ವೃತ್ತದಲ್ಲಿ ನಡೆದ ಪ್ರತಿಭಟನೆಯಲ್ಲಿ ಕೇಂದ್ರ ಸರಕಾರ ಹಾಗೂ ಕಾರ್ಪರೇಟ್ ಸಂಸ್ಥೆಗಳ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಲಾಯಿತು. ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಪ್ರಾಂತ ರೈತ ಸಂಘದ ಮಹಾಬಲ ವಡೇರಹೋಬಳಿ, ಸಿಐಟಿಯು ಮುಖಂಡರಾದ ಸಂತೋಷ್ ಹೆಮ್ಮಾಡಿ, ಬಲ್ಕೀಸು ಬಾನು, ಸುಶೀಲಾ ನಾಡ ಉಪಸ್ಥಿತರಿದ್ದರು.

ಬೈಂದೂರಿನಲ್ಲಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ, ಸಿಐಟಿಯು ಹಾಗೂ ಪ್ರಾಂತ ರೈತ ಸಂಘಗಳ ಒಕ್ಕೂಟ ಪ್ರತಿಭಟನಾ ಪ್ರದರ್ಶನ ನಡೆಸಿತು. ಪ್ರತಿಭಟನೆಯನ್ನುದ್ದೇಶಿಸಿ ಕೃಷಿಕೂಲಿಕಾರರ ಸಂಘದ ಮುಖಂಡರಾದ ವೆಂಕಟೇಶ್ ಕೋಣಿ ಮಾತನಾಡಿದರು. ರೈತ ಕಾರ್ಮಿಕ ಸಂಘಗಳ ರೊನಾಲ್ಡ್ ರಾಜೇಶ್ ಕ್ವಾಡ್ರಸ್, ಗಣೇಶ್ ತೊಂಡೆಮಕ್ಕಿ, ಮಾಧವ ದೇವಾಡಿಗ, ರಾಮ ಕಂಬದ ಕೋಣೆ, ಆದಿವಾಸಿ ಹಕ್ಕುಗಳ ಸಮಿತಿಯ ಶ್ರೀಧರ ನಾಡ ಭಾಗವಹಿಸಿದ್ದರು.

ಸುಳ್ಯದಲ್ಲಿ ಸಿಐಟಿಯು, ರಾಜ್ಯ ರೈತ ಸಂಘಗಳ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ ನಡೆಯಿತು. ಪೊರತಿಭಟನಾ ಧರಣಿಯಲ್ಲಿ ಸಿಐಟಿಯು ಕಟ್ಟಡ ಕಾರ್ಮಿಕ ಮುಖಮಡ ಕೆ.ಪಿ.ಜಾನಿ, ರಾಜ್ಯ ರೈತ ಸಂಘದ ಅಶೋಕ ಎಡಮಲೆ, ದಿವಾಕರ ಪೈ ಭಾಗವಹಿಸಿದ್ದರು. ಧರಣಿಗೂ ಮೊದಲು ಸುಳ್ಯದ ಜ್ಯೋತಿ ವೃತ್ತದಿಂದ ಗಾಂಧಿನಗರದ ವರೆಗ ಮೌನ ಮೆರವಣಿಗೆ ನಡೆಸಲಾಯಿತು.

ಬೆಳ್ತಂಗಡಿ ತಾಲೂಕು ಕಚೇರಿ ಮುಂದೆ ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಸಿಐಟಿಯು, ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಸೇರಿದ ಕಾರ್ಯಕರ್ತರು ಭಾಗವಹಿಸಿದ್ದರು. ಸಿಐಟಿಯು ತಾಲೂಕು ಮುಖಂಡರಾದ ಎಸ್.ಎಂ.ಶಿವಕುಮಾರ್ ಪ್ರತಿಭಟನೆಯುನ್ನುದ್ದೇಶಿಸಿ ಮಾತನಾಡಿದರು. ಬೆಳ್ತಂಗಡಿಯಲ್ಲಿ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ನಡೆದ ಇನ್ನೊಂದು ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘವು ಜೊತೆಗೂಡಿತ್ತು. ಮಾಜಿ ಶಾಸಕ ವಸಂತ ಬಂಗೇರ, ರಾಜ್ಯ ರೈತ ಸಂಘದ ಸುರೇಶ್ ಭಟ್ ಕೊಜಂಬೆ ಈ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಬಳಿಕ ರಸ್ತೆ ತಡೆ ನಡೆಸಿದರು.

ಉಪ್ಪಿನಂಗಡಿಯಲ್ಲಿ ನಡೆದ ಹೆದ್ದಾರಿ ರಸ್ತೆ ತಡೆಯಲ್ಲಿ ರಾಜ್ಯ ರೈತ ಸಂಘದ ಕಾರ್ಯಕರ್ತರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಒಟ್ಟಾಗಿ ಪ್ರತಿಭಟನೆ ನಡೆಸಿದರು. ಮಾಜಿ ಶಾಸಕಿ ಶಕುಂತಳಾ ಶೆಟ್ಟಿ, ರಾಜ್ಯ ರೈತ ಸಂಘದ ಸುರೇಶ್ ಭಟ್ ಕೊಜಂಬೆ, ರೂಪೇಶ್ ರೈ ಅಲಿಮಾರ್, ವಿನೋದ್ ಭಟ್ ಪಾದೆಕಲ್ಲು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ದ.ಕ.ಜಿಲ್ಲೆಯಲ್ಲಿ ಅಲ್ಲಲ್ಲಿ ಪ್ರತಿಭಟನೆ ರಸ್ತೆತಡೆಗಳು ನಡೆದ ಹೊರತಾಗಿಯೂ ಎಲ್ಲಿಯೂ ವ್ಯಾಪಾರ ವಹಿವಾಟುಗಳು ನಿಲುಗಡೆಯಾಗಿರುವುದಿಲ್ಲ. ■

ವರದಿ: ವಾ.ಉ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಡಿತಗೊಳಿಸಲಾದ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಲು ಒತ್ತಾಯ

ಮಾನ್ಯ ಶ್ರೀ . ಬಿ.ಎಸ್. ಯಡಿಯೂರಪ್ಪನವರು,
ಮುಖ್ಯಮಂತ್ರಿಗಳು,

ರಾಜ್ಯದಲ್ಲಿ ಅಲ್ಪಸಂಖ್ಯಾತ ಸಮುದಾಯಗಳು ಹಿಂದುಳಿದಿರುವ ಹಿನ್ನೆಲೆಯಲ್ಲಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೂಲಕ ಸರಕಾರವು ಈ ಸಮುದಾಯಗಳ ಅಭಿವೃದ್ದಿಗಾಗಿ ಜಾರಿಯಲ್ಲಿಟ್ಟಿರುವುದು ಸರಿಯಷ್ಟೇ. ರಾಜ್ಯದ ಸಮಗ್ರ ಅಭಿವೃದ್ಧಿಯ ದೃಷ್ಟಿಯಲ್ಲಿ ಇಂತಹ ವಿಶೇಷ ಆದ್ಯತಾ ಯೋಜನೆಗಳು ಅವಶ್ಯಕವಾಗಿವೆ ಹಾಗೂ ಅಲ್ಪಸಂಖ್ಯಾತ ಸಮುದಾಯಗಳ ಅಭಿವೃದ್ಧಿ ಸಮಾನವಾಗಿ ಸಾಧ್ಯವಾಗುವವರೆಗೂ ಈ ಯಾವ ಯೋಜನೆಗಳೂ ಯಾವುದೇ ಕಾರಣಗಳಿಗೆ ಸ್ಥಗಿತಗೊಳ್ಳಬಾರದು ಬದಲಿಗೆ, ಹಿಂದುಳಿದಿರುವಿಕೆಯನ್ನು ತೊಡೆದು ಹಾಕಲು ಅವುಗಳು ಮತ್ತಷ್ಟು ಬಲಗೊಳ್ಳುವುದು ಅವಶ್ಯವಿದೆ ಎಂದು ಆಗ್ರಹಿಸುತ್ತೇವೆ.

ಕರ್ನಾಟಕ ರಾಜ್ಯದಲ್ಲಿ ತಮ್ಮ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದ ನಂತರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ತನ್ನ ಮೂಲಕ ರಾಜ್ಯದ ಅಲ್ಪಸಂಖ್ಯಾತ ಸಮುದಾಯಗಳಾದ ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಬೌದ್ಧ, ಪಾರ್ಸಿ ಮತ್ತು ಜೈನ ಸಮುದಾಯಗಳ ಜನಪರ ಕಲ್ಯಾಣ ಯೋಜನೆಗಳಿಗೆ ನಿಗದಿಗೊಳಿಸಲಾದ ಅನುದಾನ ಕಡಿತಗೊಳಿಸಿರುವದನ್ನು ಭಾರತ ಕಮ್ಯುನಿಷ್ಟ ಪಕ್ಷ (ಮಾರ್ಕ್ಸವಾದಿ) ದ ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ.

ತಮ್ಮ ನೇತೃತ್ವದ ಸರಕಾರ ಬಂದ ಮೇಲೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಈ ಹಿಂದೆ ನಿಗದಿಗೊಳಿಸುತ್ತ ಬಂದಿರುವ ಅನುದಾನ ಕಡಿತಗೊಳಿಸಿದ್ದಲ್ಲದೇ ಹಲವು ಯೋಜನೆಗಳನ್ನು ರದ್ದು ಮಾಡಲಾಗಿದೆ.

2019–20ನೇ ಸಾಲಿನಲ್ಲಿ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದ ಸರಕಾರ ಬಜೆಟ್ಟಲ್ಲಿ ಘೋಷಿಸಿದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅನುದಾನವನ್ನು 1867 ಕೋಟಿ ರೂ. ಗಳಿಂದ 1570 ಕೋಟಿ ರೂ. ಗೆ ಕಡಿತ ಗೊಳಿಸಿದೆ. 2020–21ನೇ ಸಾಲಿನಲ್ಲಿ ತಮ್ಮ ನೇತೃತ್ವದ ಸರಕಾರ ಮಂಡಿಸಿದ ಬಜೆಟ್ಟಲ್ಲಿ 1177 ಕೋಟಿ ರೂ. ಗಳಷ್ಟಿದ್ದ ಅನುದಾನವನ್ನು ಮತ್ತೆ ಕಡಿತಗೊಳಿಸಿ 1055 ಕೋಟಿ ರೂ. ಗಳಿಗೆ ನಿಗದಿಗೊಳಿಸಿದೆ. ಇತ್ತೀಚಿಗೆ ಮತ್ತೆ ಅದರಲ್ಲಿ 50 ಕೋಟಿ ರೂ. ಅನುದಾನ ಕಡಿತಗೊಳಿಸಿದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ಕಳೆದ 5 ವರ್ಷಗಳಿಂದ ಜಾರಿಯಲ್ಲಿಟ್ಟಿದ್ದ ಹಲವು ಜನಪರ ಕಲ್ಯಾಣ ಯೋಜನೆಗಳನ್ನು ಈಗ ಅನುದಾನ ಕಡಿತಗೊಳಿಸಿರುವುದರಿಂದ ಜಾರಿಗೊಳಿಸದೆ ನಿಲ್ಲಿಸಿದೆ.

ಹಿಂದಿನ ಸರಕಾರಗಳು ಜಾರಿಯಲ್ಲಿಟ್ಟಿದ್ದ ಕಾಲೋನಿ ಅಭಿವೃದ್ಧಿ ಯೋಜನೆ, ಶಾದಿಭಾಗ್ಯ ಯೋಜನೆಗಳನ್ನು ರದ್ದುಗೊಳಿಸಿದೆ. ಇವೆಲ್ಲಕ್ಕಿಂತ ಪ್ರಮುಖ ಯೋಜನೆಗಳಾದ, ವಿದೇಶದಲ್ಲಿ ಉನ್ನತ ವ್ಯಾಸಂಗದ ಯೋಜನೆ, ನಾಗರೀಕ ಸೇವಾ ತರಬೇತಿ ಯೋಜನೆ, ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ, ಮೆರಿಟ್–ಕಮ್ ಮೀನ್ಸ್ ವಿದ್ಯಾರ್ಥಿ ವೇತನ, ಶುಲ್ಕ ವಿನಾಯತಿ, ವಿದ್ಯಾಸಿರಿಯಂತಹ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಪೂರಕವಾದಂತಹ ಯೋಜನೆಗಳ 2019–20 ನೇ ಸಾಲಿನ ಅನುದಾನ ಸರಕಾರ ಇಲ್ಲಿಯವರೆಗೆ ಬಿಡುಗಡೆಗೊಳಿಸದೇ ಇರುವದು ವಿದ್ಯಾರ್ಥಿಗಳಿಗೆ ಸಾಕಷ್ಟು ಆರ್ಥಿಕ ತೊಂದರೆ ನೀಡುವ ಕ್ರಮವಾಗಿದೆ. ರಾಜ್ಯದಲ್ಲಿ 2016–17ರಿಂದ ಜಾರಿಯಲ್ಲಿರುವ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳು ಸಂಶೋಧನೆ (ಪಿ.ಎಚ್.ಡಿ./ಎಂ.ಫಿಲ್) ಕೈಗೊಳ್ಳಲು ಪ್ರತಿ ತಿಂಗಳು ನೀಡಲಾಗುತ್ತಿದ್ದ ಪ್ರೋತ್ಸಾಹಧನ 25,000 ರೂ. ಗಳನ್ನು 8333 ರೂ. ಗಳಿಗೆ ಕಡಿತಗೊಳಿಸಿದ್ದರಿಂದ ಯಾರೂ ಸಂಶೋಧನೆಯನ್ನು ಪೂರ್ಣಗೊಳಿಸದಂತಹ ವಾತಾವರಣ ನಿರ್ಮಾಣ ಗೊಂಡಿದೆ.

2020–21ನೇ ಸಾಲಿನಲ್ಲಿ ರಾಜ್ಯಾದ್ಯಂತ ಸುಮಾರು 300 ವಿದ್ಯಾರ್ಥಿಗಳು ಸಂಶೋಧನೆಯ ಕಾರ್ಯದಲ್ಲಿ ತೊಡಗಿದವರು ಅಗತ್ಯ ಪ್ರೋತ್ಸಾಹ ಧನವಿಲ್ಲದೆ ತೊಂದರೆಗೀಡಾಗಿದ್ದಾರೆ.

ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ, ಮೆರಿಟ್–ಕಮ್ ಮೀನ್ಸ್ ವಿದ್ಯಾರ್ಥಿ ವೇತನಕ್ಕಾಗಿ ವಾರ್ಷಿಕವಾಗಿ ಕರ್ನಾಟಕ ರಾಜ್ಯದಿಂದ ಸುಮಾರು 12.50 ಲಕ್ಷ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರಕಾರ ಸೇರಿ ಒಟ್ಟು 270 ಕೋ.ರೂ. ಅನುದಾನ ನಿಗದಿಗೊಳಿಸಿದೆ.

ಆದರೆ 2019–20ನೇ ಸಾಲಿನಲ್ಲಿ ರಾಜ್ಯ ಸರಕಾರ ಅಗತ್ಯ ಅನುದಾನ ಬಿಡುಗಡೆಗೊಳಿಸದೇ ಇರುವದರಿಂದ ಶೇ 50ರಷ್ಟು ವಿದ್ಯಾರ್ಥಿಗಳು ಕಳೆದ ವರ್ಷದ ವಿದ್ಯಾರ್ಥಿ ವೇತನ ಪಡೆಯಲು ಸಾಧ್ಯವಾಗಿಲ್ಲ. ಈಗಲೂ ಈ ವಿದ್ಯಾರ್ಥಿ ವೇತನಕ್ಕಾಗಿ ಜಾತಕ ಪಕ್ಷಿಯಂತೆ ಕಾಯುವ ಪರಿಸ್ಥಿತಿ ಬಡ ಅಲ್ಪಸಂಖ್ಯಾತ ವಿದ್ಯಾರ್ಥಿಗಳದ್ದಾಗಿದೆ.

ಶುಲ್ಕ ವಿನಾಯತಿ ಯೋಜನೆಯು 1980 ರಿಂದ ರಾಜ್ಯದಲ್ಲಿ ಎಲ್ಲ ಹಿಂದುಳಿದ ವಿದ್ಯಾರ್ಥಿಗಳಿಗೆ ಜಾರಿಯಲ್ಲಿದ್ದು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯು ಪ್ರತ್ಯೇಕಗೊಂಡ ನಂತರ 2014 ರಿಂದ ಅರ್ಜಿ ಸಲ್ಲಿಸಿದ ಅಲ್ಪಸಂಖ್ಯಾತ ಸಮುದಾಯದ ಅರ್ಹ ವಿದ್ಯಾರ್ಥಿಗಳಿಗೆ ➜

ಸಂವಿಧಾನದ ಮೂಲಭೂತ ಹಕ್ಕುಗಳು ಮತ್ತು ಸವಾಲುಗಳು ಕುರಿತು ಒಂದು ಚರ್ಚೆ

ಶಾರದ ಕೆ.ಎಸ್.



ಡಿಸೆಂಬರ್ 6 ಈ ನೆಲದ ಸೌಹಾರ್ದತೆಯ ಸಂಕೇತಗಳಲ್ಲಿ ಒಂದಾಗಿದ್ದ ಬಾಬ್ರಿ ಮಸೀದಿಯ ಧ್ವಂಸ, ಮಹಿಳಾ ಸಮಾನತೆಯನ್ನು ಒಳಗೊಂಡಂತೆ ಸಮ ಸಮಾಜವನ್ನು ಕಟ್ಟುವ ಆಶಯದ ಸಂವಿಧಾನವನ್ನು ದೇಶಕ್ಕೆ ಕೊಟ್ಟ ಮಾನವತಾವಾದಿ, ಸಂವಿಧಾನಶಿಲ್ಪಿ ಡಾ। ಬಿ.ಆರ್. ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನ.

ಡಿಸೆಂಬರ್ 6, 2020 ರಂದು “ಸಂವಿಧಾನದ ಮೂಲಭೂತ ಹಕ್ಕುಗಳು ಮತ್ತು ಸವಾಲುಗಳು” ಕುರಿತಾದ ಒಂದು ಚರ್ಚೆಯನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯಿಂದ ಇಎಂಎಸ್ ಭವನದಲ್ಲಿ ನಡೆಸಲಾಯಿತು. ಮಾನವರಾಗೋಣ ಎಂಬ ಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.

ಒಂದು ಕೈಯಲ್ಲಿ ಕರಗುವ ಬೆಣ್ಣೆ ಇನ್ನೊಂದು ಕೈಯಲ್ಲಿ ಕಿಡಿಕಾರುವ ಚೆಂಡು ಇಟ್ಟುಕೊಂಡು, ಹಿಂದುಗಳು ನಾವು ಒಂದು, ಮರ್ಯಾದ ಪುರುಷೋತ್ತಮನಿಗೆ ದೇವಸ್ಥಾನ ಅಂತ ಹೇಳಿ, ಮಾನವತಾವಾದಿ ಅಂಬೇಡ್ಕರ್ ನಿಧನರಾದ ದಿನದಂದೆ ಬಾಬ್ರಿ ಮಸೀದಿ ಒಡೆದರು. ಬಾಬ್ರಿ ಘಟನೆಯಿಂದ ಅಧಿಕಾರ ಹಿಡಿಯುವುದು ಸುಲಭ ಎಂಬ ಸತ್ಯ ರಾಜಕಾರಣಿಗಳಿಗೆ ಮನವರಿಕೆ ಆಗಿದೆ. ಈಗ ಬಾಬ್ರಿ ಘಟನೆ ಬಗ್ಗೆ ಮಾತನಾಡ್ತಿಲ್ಲ. ಮಾತನಾಡಲು ಅವರಿಗೆ ಏನೂ ಉಳಿದಿಲ್ಲ. ಈಗ ಮಥುರಾದಲ್ಲಿರುವ ಕೃಷ್ಣ ದೇವಾಲಯ ಸದ್ದು ಮಾಡಲು ಪ್ರಾರಂಭಿಸಿದೆ. ಚಿಕ್ಕಮಗಳೂರಿನಲ್ಲಿರುವ ಬಾಬಾಬುಡನ್‌ಗಿರಿಯಲ್ಲಿ ಒಬ್ಬ ಸೂಫಿ ಸಂತ ಬಾಬಾ ಕಾಫಿ ಬೀಜವನ್ನು ತಂದು ಹಾಕಿದ್ದು, ಅಂದಿನಿಂದ ಆ ಬೆಟ್ಟಕ್ಕೆ ಬಾಬಾಬುಡನಗಿರಿ ಅಂತ ಹೆಸರಾಯ್ತು, ಆ ಬಾಬಾಬುಡನ್‌ಗಿರಿ, ಆನೆಕೆರೆ ಬಸದಿ ಘಟನೆಗಳು ಬಾಬ್ರಿ ಘಟನೆಯ ಮರಿಗಳೇ ಆಗಿವೆ.

ಹಸಿವು, ಕಿತ್ತು ತಿನ್ನುವ ಬಡತನ, ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ನಿರುದ್ಯೋಗ ಕಣ್ಣಿಗೆ ಕಾಣುತ್ತಿರುವಾಗ, ಅದರ ಪರಿಹಾರಕ್ಕೆ ಮಾರ್ಗೋಪಾಯ ಹುಡುಕದೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಒತ್ತು ನೀಡದೆ ಭಾಗ್ಯನಗರ, ನವಾಬ ಸಂಸ್ಕೃತಿಯಂಥ ಪದಗಳನ್ನು ಬಳಸಿಯೇ ಅಧಿಕಾರಕ್ಕೇರಬಹುದು ಎಂಬ ನಂಬುಗೆ ನಮ್ಮ ಪ್ರಜಾಪ್ರಭುತ್ವವನ್ನು ನಗೆಪಾಟಲಿಗೆ ಇಡು ಮಾಡುತ್ತಿದೆ.

“ಎಷ್ಟೇ ಒಳ್ಳೆಯ ಸಂವಿಧಾನವಿದ್ದರೂ ಅದನ್ನು ಜಾರಿಗೆ ತರುವವರ ಮೇಲೆ ಅವಲಂಬಿಸಿರುತ್ತದೆ, ಜಾರಿಗೆ ತರುವವರು ಕೆಟ್ಟವರಿದ್ದರೆ ಸಂವಿಧಾನ ಒಳ್ಳೆಯದಿದ್ದರೂ ಹೆಚ್ಚೇನೂ ಪ್ರಯೋಜನವಾಗದು, ಹಾಗೇ ಒಳ್ಳೆಯವರ ಕೈಗೆ ಸಿಕ್ಕರೆ ಕೆಟ್ಟ ಸಂವಿಧಾನವೂ ಒಳ್ಳೆಯದಾಗಬಹುದು” ಎಂದು 1949 ರಲ್ಲಿ ಸಂವಿಧಾನವನ್ನು ರಚಿಸಿ ಭಾರತ ಸರ್ಕಾರಕ್ಕೆ ನೀಡಿದ ಸಂವಿಧಾನ ಶಿಲ್ಪಿ, ಮಾನವತಾವಾದಿ ಅಂಬೇಡ್ಕರ್ ಅಂದೇ ಸಾರಿದ್ದರು. ಇಂದು ಸಂವಿಧಾನ ಕೆಟ್ಟವರ ಕೈಯಲ್ಲಿದ್ದು ಅಪಾಯದಲ್ಲಿದೆ ಎಂಬುದು ಸ್ಪಷ್ಟವಾಗುತ್ತಿದೆ. 1956 ರಲ್ಲಿ ಡಿಸೆಂಬರ್ 6 ರಂದು ಬಾಬಾಸಾಹೇಬ್ ಅಂಬೇಡ್ಕರ್ ನಿಧನರಾದ ದಿನವೂ ಹೌದು

ಅಂಬೇಡ್ಕರ್ ಕಾನೂನು ಸಚಿವರಾಗಿದ್ದಾಗ, ಮಹಿಳಾ ಸಮಾನತೆಯನ್ನು ಸಾಧಿಸುವತ್ತ ಮಹತ್ವದ ಹೆಜ್ಜೆಯಾಗಿದ್ದ ‘ಹಿಂದೂ ಕೋಡ್ ಬಿಲ್’ ಅನ್ನು ದೇಶದ ಮುಂದಿಡುತ್ತಾರೆ, ಆದರೇ ಮಹಿಳೆಗೆ ಸ್ವಾತಂತ್ರ್ಯ, ಸಮಾನತೆಯನ್ನು ಸಹಿಸದ ಕೆಲವರು ಈ ಬಿಲ್ಲ ಅನ್ನು ಒಪ್ಪುವುದಿಲ್ಲ. ಅಂಗೀಕಾರವಾಗುವುದಿಲ್ಲ ಅಂತ ಗೊತ್ತಾದಾಗ ಅಂಬೇಡ್ಕರ್ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡ್ತಾರೆ. ಇವತ್ತು ತಮಗೆ ಸಚಿವ ಸ್ಥಾನ ಸಿಗಲಿಲ್ಲ ಅಂತ ತಾವು ತಿಂದುಂಡು ಇದ್ದ ಪಕ್ಷ ತೊರೆದು ಯಾವುದೇ ಸಿಗ್ಗು ಇಲ್ಲದೆ ಮತ್ತೊಂದು ಪಕ್ಷಕ್ಕೆ ಅಧಿಕಾರದ ಲಾಲಸೆಗೆ, ಸ್ಥಾನಕ್ಕೆ ಬಯಸಿ ಹೋಗುತ್ತಿರುವ ಸಚಿವರನ್ನು, ರಾಜಕಾರಣಿಗಳನ್ನು ನಾವು ಕಾಣ್ತಿದ್ದೇವೆ. ಆದ್ರೆ ಸಿಕ್ಕ ಅಧಿಕಾರವನ್ನು ತಮ್ಮ ಸ್ವಾರ್ಥ ಸಾಧನೆಗೆ ಬಳಸಿಕೊಳ್ಳದೆ, ದೇಶದ ಒಳಿತಿಗಾಗಿ, ತಮ್ಮ ಅಧಿಕಾರತ್ಯಾಗ ಮಾಡ್ತಾರೆ ಅಂಬೇಡ್ಕರ್. ಇದೇ ಇವತ್ತಿನ ಸಚಿವರಿಗೂ, ರಾಜಕಾರಣಿಗಳಿಗೂ ಮತ್ತು ಅಂಬೇಡ್ಕರ್ ಅವರಿಗೂ ಇರುವ ವ್ಯತ್ಯಾಸ.

ನ. 26 ರಿಂದ ಇಂದಿನವರೆಗೆ 12 ದಿನದಿಂದ ಕೇಂದ್ರ ತಂದಿರುವ ಸುಗ್ರೀವಾಜ್ಞೆಯನ್ನು ಹಿಂಪಡೆಯಬೇಕು ಅಂತ ತಮ್ಮ ಪ್ರಾಣದ ಹಂಗು ತೊರೆದು, ಶೀತಗಾಳಿಯನ್ನು ಲೆಕ್ಕಿಸದೆ, ಹೋರಾಟ ಮಾಡುತ್ತಿರುವ ಅನ್ನದಾತ, ದೇಶದ ಬೆನ್ನೆಲುಬು ರೈತರ ಬಗ್ಗೆ ಒಂದಿಷ್ಟು ಇತರ ಬಗ್ಗೆ ಒಂದಿಷ್ಟು ಕಾಳಜಿ ತೋರದೆ, ಅವರ ಸಂಕಷ್ಟಗಳನ್ನು ಬಂದು ಕೇಳದೆ ಹೈದರಾಬಾದಿಗೆ ತೆರಳಿರುವ ಪ್ರಧಾನಿ ಯಾವುದೇ ನಾಚಿಕೆ ಇಲ್ಲದೆ ತಾವು ತಂದಿರುವ ಕಾನೂನುಗಳನ್ನು ಸಮರ್ಥಿಸಿಕೊಳ್ತಿದ್ದಾರೆ. ಇಂತಹ ಪ್ರಧಾನಿ ನಮಗೆ ಬೇಕಾ ಎಂದು ನೀವೆಲ್ಲಾ ಯೋಜಿಸಬೇಕಾಗಿದೆ ಎಂದು ಹೇಳುತ್ತಾ ಮಹಿಳೆಯರ ಮಧ್ಯೆ ಎಲ್ಲಾ ವಿಚಾರಗಳನ್ನು ತಿಳಿಸಲು, ಅವರಲ್ಲಿ ಜಾಗೃತಿ ಮೂಡಿಸಲು ಈ ಒಂದು ಚರ್ಚೆಯನ್ನು ಇಲ್ಲಿ ಆಯೋಜಿಸಿರುವುದು. ಇದು ಕೇವಲ ಇಲ್ಲಿ ಬಂದಿರುವಂತಹ ನಿಮಗೆ ಮಾತ್ರವಲ್ಲ, ಇಡೀ ದೇಶದ ರಾಜ್ಯದ ಮಹಿಳೆಯರಿಗೆ ಈ ವಿಚಾರಗಳು ತಲುಪಬೇಕಿದೆ. ಇಲ್ಲಿ ಇಂದು ಬಂದಿರುವಂತಹ ನನ್ನ ಸೋದರಿಯರೆಲ್ಲರೂ ನೀವು ವಾಸಿಸುವ ನಮ್ಮ ನಮ್ಮ ಪ್ರದೇಶಗಳಲ್ಲಿ 5 ಜನ ಸೇರಲಿ ಅಥವಾ ಹತ್ತು ಜನ ಸೇರಲಿ ಅವರ ಮಧ್ಯೆ ಇಂತಹ ವಿಚಾರಗಳನ್ನು ನೀವು ಚರ್ಚೆ ಮಾಡಿಸುವುದರ ಮೂಲಕ ಜನವಿರೋಧಿ, ಮಹಿಳಾ ವಿರೋಧಿ ಎಂದು ತಮ್ಮ ಪ್ರಾಸ್ತಾವಿಕ ಮಾತಿನಲ್ಲಿ ಹೇಳಿದ ಜಿಲ್ಲಾ ಉಪಾಧ್ಯಕ್ಷೆ ಶಾರದಾ ಕೆ.ಎಸ್. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ನೀತಿಯನ್ನು ಬಯಲಿಗೆಯಬೇಕಿದೆ, ಸಂವಿಧಾನದಿಂದ ಸಿಗುವ ರಾಜಕೀಯ ಸ್ವಾತಂತ್ರ್ಯದ ಜೊತೆ ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯ ಎಲ್ಲರಿಗೂ ದೊರೆತರಷ್ಟೇ ನಿಜವಾದ ಸಮಾನತೆಯನ್ನು ಪಡೆಯಲು ಸಾಧ್ಯ ಎಂಬ ಅಂಬೇಡ್ಕರ್ ಅವರ ಆಶಯಗಳ ಈಡೇರಿಸಲು ಎಲ್ಲರೂ ನಿಮ್ಮ ನಿಮ್ಮ ಪ್ರದೇಶಗಳಲ್ಲಿ ಜನವಾದಿ ಮಹಿಳಾ ಸಂಘಟನೆಯನ್ನು ಕಟ್ಟಿ ಬೆಳೆಸಬೇಕು ಎಂದು ಕರೆ ನೀಡಿದರು.

ಲೈಬ್ರರಿ ಮುಂದೆ ನಾವು ‘ಕ್ಯೂ’ ನೋಡಬೇಕೇ ಹೊರತು, ದೇವಾಲಯಗಳ ಮುಂದೆ ಅಲ್ಲ ಎಂಬ ಅಂಬೇಡ್ಕರ್ ಅವರು ಶಿಕ್ಷಣಕ್ಕೆ ನೀಡಿದ ಪ್ರಾಮುಖ್ಯತೆಯ ಬಗ್ಗೆ ತಿಳಿಸುವ ಮುಖಾಂತರ ಚರ್ಚೆಗೆ ಇಂಬುಕೊಡುವ ರೀತಿಯಲ್ಲಿ ಡಾ। ಕೆ. ಷರೀಫಾ ಅವರು ಒಂದು ಗುರಿ, ಛಲ, ಹೋರಾಟದ ಕಿಚ್ಚು ನಮಗಿರಬೇಕು, ನಾವು ಇಂದು ಹಿಂಸಿತ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ. ಹಿಂಸೆ ಎಂಬುದು ದಿನ ನಿತ್ಯದ ವ್ಯವಹಾರದಂತಾಗಿದೆ ಎಂದು ಹೇಳುವುದರ ಮೂಲಕ ತಮ್ಮ ಮಾತನ್ನು ಪ್ರಾರಂಭಿಸಿದರು.

ಬಾಬಾ ಸಾಹೇಬ ಅಂಬೇಡ್ಕರ್ ಮಹಾ ಪರಿನಿರ್ವಾಣ ಹೊಂದಿದ ದಿನವೇ ಸೌಹಾರ್ದ ಸಂಕೇತವಾಗಿದ್ದ ಬಾಬ್ರಿ ಮಸೀದಿಯನ್ನು ಕೆಡವಿದ್ದಾರೆ. ಕೆಡವುವ ಕೆಲಸವನ್ನು ಇಂತಹ ಸೌಹಾರ್ದ ದಿನಗಳಲ್ಲೆ ಅವರು ಮಾಡುತ್ತಾರೆ ನಾವು ಕಟ್ಟುವ ಕೆಲಸ ಮಾಡೋಣ ಎಂದು ಹೇಳುತ್ತಾ, ‘ಬುದ್ಧ ಮತ್ತು ಧರ್ಮ’ ಎಂಬ ಪುಸ್ತಕ ಎಲ್ಲರ ಮನೆಯಲ್ಲೂ ಇರಬೇಕು, ಅದರಲ್ಲೂ ವಿಶೇಷವಾಗಿ ದಲಿತರ ಮನೆಯಲ್ಲಿರಬೇಕು, ಎಂದು ಅಂಬೇಡ್ಕರ್ ಬಯಸಿದ್ದರು ಎಂಬುದನ್ನು ತಿಳಿಸುತ್ತಾ, ಯಾವುದೇ ಧರ್ಮಗಳು ಮಹಿಳಾ ಪರವಾಗಿಲ್ಲ, ಮಹಿಳಾ ವಿರೋಧಿಯಾಗಿದೆ, ಹಿಂದು ನಾವೆಲ್ಲ ಒಂದು ಎಂದು ಹೇಳುವುದು ಕೇವಲ ಓಟಿಗಾಗಿ, ಅಧಿಕಾರಕ್ಕಾಗಿ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು, “ನಮ್ಮ ಪವಿತ್ರ ಗ್ರಂಥ” ಅಂಬೇಡ್ಕರ್ ರಚಿಸಿದ ಭಾರತದ ಸಂವಿಧಾನ ಮಾತ್ರ ಎಂದು ತಿಳಿಸಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಗೌರಮ್ಮ ಈ ಸಂದರ್ಭದಲ್ಲಿ ಮಾತನಾಡುತ್ತಾ ಜಾತಿತಾರತಮ್ಯ ಇವತ್ತು ಅಧಿಕವಾಗುತ್ತಿದೆ, ಮಹಿಳೆಯರ ಮೇಲಿನ ಹಿಂಸೆ ಅತ್ಯಾಚಾರ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಸರ್ಕಾರವೇ (ಎನ್.ಸಿ.ಆರ್.ಬಿ. ವರದಿ ಪ್ರಕಾರ) ನೀಡಿರುವ ವರದಿ ಪ್ರಕಾರ ದೇಶದಲ್ಲಿ ಪ್ರತಿ ದಿನ 87 ಅತ್ಯಾಚಾರಗಳು ಆಗುತ್ತಿದೆ. ಇದರಲ್ಲಿ ಹತ್ತು ದಲಿತ ಮಹಿಳೆಯರು ಬಲಿಯಾಗುತ್ತಿದ್ದಾರೆ. ಮರ್ಯಾದಾ ಹೆಸರಿನಲ್ಲಿ ಮಹಿಳೆಯರ ಕೊಲೆಗಳು ನಡೆಯುತ್ತಿವೆ. ಕೋವಿಡ್‌ನಿಂದಾಗಿ ಬಡಜನರ, ಮಹಿಳೆಯರ ಬದುಕು ಹರಣವಾಗುತ್ತಿದೆ. ಯಾವುದೇ ಕಾನೂನುಗಳು ತಿದ್ದುಪಡಿ ಆಗಲಿ, ಕಾನೂನುಗಳು ಬರಲಿ ಮೊದಲು ಬಲಿಯಾಗುವವರು ಮಹಿಳೆಯರು, ಸರ್ಕಾರದ ಜನವಿರೋಧಿ, ರೈತ ವಿರೋಧಿ, ಮಹಿಳಾ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಬೇಕಾದರೇ, ಮಹಿಳೆಯರು ಒಂದಾಗಿ ಹೋರಾಟಕ್ಕೆ ಇಳಿಯಲೇಬೇಕು. ಅಂತಹ ವಾತಾವರಣ ಸೃಷ್ಟಿ ಆಗ್ತಾ ಇದೆ ಎಂದು ಕರೆ ನೀಡಿದರು.

ಸ್ವಾಗತವನ್ನು ಜನವಾದಿಯ ಉತ್ತರ ವಲಯ ಕಾರ್ಯದರ್ಶಿ ರೇಣುಕಾ ನಡೆಸಿಕೊಟ್ಟರು. ರಾಜಾಜಿನಗರ ವಲಯದ ಕಾರ್ಯದರ್ಶಿ ಗೀತಾ ಎಸ್. ನಿರೂಪಣೆಯನ್ನು ಮಾಡಿದರು. ರಾಜಾಜಿನಗರ ವಲಯದ ಅಧ್ಯಕ್ಷೆ ಜಯಲಕ್ಷ್ಮಿ ಬಿ.ಎನ್. ವಂದನೆಗಳನ್ನು ಸಲ್ಲಿಸಿದರು.

‘ಗೆಲುವು ನಮ್ಮದೆ’ ಹಾಡಿನೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ■



ವಿನಾಯಿತಿ ನೀಡುತ್ತಾ ಬರಲಾಗಿದೆ. ಆದರೆ, 2019 –20ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಅರ್ಹ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ಈಗಲೂ ಅನುದಾನ ಬಿಡುಗಡೆಗೊಳಿಸದೇ ಇರುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯ ಡೋಲಾಯಮಾನವಾಗಿದೆ.

ಅದೇ ರೀತಿ, ರಾಜ್ಯದಲ್ಲಿ ಎಲ್ಲ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ 2014–15ನೇ ಸಾಲಿನಿಂದ, ಹೊರಗಡೆಯಿದ್ದು ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆಂದೇ ಜಾರಿಗೊಳಿಸಿದ ವಿದ್ಯಾಸಿರಿ ಯೋಜನೆಯ 2019–20ನೇ ಸಾಲಿನ ಅನುದಾನ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಗೆ ಬಿಡುಗಡೆಗೊಳಿಸದೇ ಇರುವುದರಿಂದ ಈ ಯೋಜನೆಯಡಿಯ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳು ಆತಂಕದಲ್ಲಿದ್ದಾರೆ.

ಅದೇ ರೀತಿ, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನ ಮಾಡಲಾಗುತ್ತಿರುವ ಅರಿವು ಶೈಕ್ಷಣಿಕ ಸಾಲದ ಯೋಜನೆ ಕೂಡಾ ಈ ವರ್ಷ ದಾರಿ ತಪ್ಪಿದೆ, ಈ ಯೋಜನೆಯ ಮೂಲಕ ಸಾವಿರಾರು ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ದೊರೆಯದಂತಾಗಿದೆ.

ಒಂದು ಕಡೆ ಪ್ರೋತ್ಸಾಹಧನ ಕಡಿತಗೊಳಿಸಿ, ಮತ್ತೊಂದು ಕಡೆ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ, ಮೆರಿಟ್–ಕಮ್ ಮೀನ್ಸ್ ವಿದ್ಯಾರ್ಥಿ ವೇತನದ ಅನುದಾನ ಕಡಿತಗೊಳಿಸಿದ್ದಲ್ಲದೇ ಶುಲ್ಕವಿನಾಯತಿ, ವಿದ್ಯಾಸಿರಿ ಅನುದಾನವೂ ಸರಕಾರ ನೀಡುತ್ತಿಲ್ಲ, ಇದನ್ನು ಹೊರತುಪಡಿಸಿ, ಇದ್ದಂತಹ ಅರಿವು ಶೈಕ್ಷಣಿಕ ಸಾಲದ ಯೋಜನೆಯನ್ನು ಮೊಟಕುಗೊಳಿಸಲು ಹೊರಟಿರುವುದು ಅಲ್ಪಸಂಖ್ಯಾತ ಸಮುದಾಯದ ವಿರೋಧಿ ನೀತಿಯಾಗಿದೆ.

ಅನುದಾನ ಕಡಿತಗೊಳಿಸಲು ಕೋವಿಡ್–19 ಕಾರಣವೆನ್ನಲಾಗಿದ್ದರೂ, ಯಾವುದೇ ಸರಕಾರ ಜನಪರ ಕಲ್ಯಾಣ ಇಲಾಖೆಗಳ ಯೋಜನೆಗಳನ್ನು ಕಡಿತಗೊಳಿಸುವುದು ಸಾಮಾಜಿಕ ಬದ್ಧತೆಯ ದೃಷ್ಟಿಯಿಂದ ಒಳ್ಳೆಯ ಆಡಳಿತದ ಮಾದರಿಯಾಗಲಾರದು.

ಕೇಂದ್ರ ಸರಕಾರದಿಂದ ಬರಬೇಕಾದ ಅನುದಾನ ಬಾಕಿಗಳು ಮತ್ತು ಅಗತ್ಯ ನೆರವುಗಳನ್ನು ಪಡೆಯದೇ ಈ ರೀತಿ ಬಡವರ ಮೇಲೆ ಎರಗುವುದು ಅಕ್ಷಮ್ಯವಾಗಿದೆ.

ಆದ್ದರಿಂದ ಕರ್ನಾಟಕ ರಾಜ್ಯ ಸರಕಾರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಈಗಾಗಲೇ ಜಾರಿಯಲ್ಲಿರುವ ಎಲ್ಲ ಯೋಜನೆಗಳನ್ನು ಮುಂದುವರೆಸಬೇಕು, ಸದರಿ ಯೋಜನೆಗಳಿಗೆ ಮುಂದುವರೆಸಲು ಬೇಕಾಗುವ ಅನುದಾನವನ್ನು ಸಂಪೂರ್ಣವಾಗಿ ಬಿಡುಗಡೆಗೊಳಿಸಬೇಕೆಂದು ಸಿಪಿಐಎಂ ಬಲವಾಗಿ ಆಗ್ರಹಿಸುತ್ತದೆ.

(ಸೂಚನೆ: ಇದೇ ಡಿಸೆಂಬರ್ 18 ರಂದು ಅಲ್ಪ ಸಂಖ್ಯಾತರ ಹಕ್ಕುಗಳ ಕುರಿತು ಆನ್‌ಲೈನ್ ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿದೆ. ಸಮಯ 6.30 ರಿಂದ 7–30. ಆಸಕ್ತರು ಇದರ ಪ್ರಯೋಜನ ಪಡೆಯಬಹುದು) ■

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಶಾಂತಿಯುತ ಪ್ರತಿಭಟನೆಗಾಗಿ ಬಂದ ರೈತರನ್ನು ತಡೆಯಲು ಕಂದಕಗಳನ್ನು ತೋಡಿ ಜಲಫಿರಂಗಿಗಳನ್ನು ಬಳಸಲಾಯಿತು. ಅಂದರೆ ಗಡಿದಾಟಿ ಬರುತ್ತಿರುವ ಶತ್ರುರಾಷ್ಟ್ರದ ಸೈನಿಕರನ್ನು ತಡೆಯುವ ಹಾಗೆ ರೈತರನ್ನು ತಡೆಯಲಾಯಿತು. ಬಿ.ಎಸ್.ಎಫ್ (Border Security Force) ಅನ್ನು ಬಳಸಿಕೊಂಡದ್ದು ಒಂದು ಭಯಾನಕ ರೂಪಕದಂತಿದೆ. ಅಂದರೆ ಆಳುವವರ್ಗ, ಸರಕಾರ ಮತ್ತು ಬಂಡವಾಳಶಾಹಿಗಳು ಸೇರಿ ಒಂದು ರಾಷ್ಟ್ರವಿದೆ. ಕಾರ್ಮಿಕರು, ರೈತರದು ಇನ್ನೊಂದು ರಾಷ್ಟ್ರವಿದೆ. ಹೀಗಾಗಿ ದೆಹಲಿಯ ಗಡಿಯಲ್ಲಿ ಈ ಶತ್ರುರಾಷ್ಟ್ರದವರನ್ನು ತಡೆಯಬೇಕು.

BSFನ್ನು ರೈತರನ್ನು ತಡೆಯಲು ಬಳಸಿದ್ದು ಒಂದು ಭಯಾನಕ ರೂಪಕ



ಕೋವಿಡ್ ಪಿಡುಗಿನ ಪರಿಸ್ಥಿತಿಯನ್ನು ದುರ್ಬಳಕೆ ಮಾಡಿಕೊಂಡು ರೈತ ವಿರೋಧಿ ಹಾಗೂ ಕಾರ್ಮಿಕ ವಿರೋಧಿ ಕಾನೂನುಗಳನ್ನು ಸುಗ್ರೀವಾಜ್ಞೆಗಳನ್ನು ಜಾರಿಗೆ ತಂದಾಗಿನಿಂದ ಭಾರತದ ಉದ್ದಕ್ಕೂ ಪ್ರತಿಭಟನೆಗಳು ನಡೆಯುತ್ತಿವೆ. ರೈತರು ಮತ್ತು ಕಾರ್ಮಿಕರು ಸರಿಯಾಗಿ ಗ್ರಹಿಸಿರುವಂತೆ ಆಳುವ ಪಕ್ಷವು ಬಂಡವಾಳಶಾಹಿಯ ಆಪ್ತಮಿತ್ರ ಮಾತ್ರವಲ್ಲ ಅದರ ಶಸ್ತ್ರವಾಗಿದೆ, ಆಯುಧವಾಗಿದೆ. ಭಾರತದ ಎಲ್ಲಾ ರಾಜಕೀಯ ಪಕ್ಷಗಳು ಬಂಡವಾಳಶಾಹಿಯ ಪರವಾಗಿಯೇ ಇವೆ. ಅಲ್ಲದೆ ಜಾಗತೀಕರಣ, ಖಾಸಗೀಕರಣಗಳನ್ನು ಬೆಂಬಲಿಸುತ್ತಾ ಬಂದಿವೆ. ಎಷ್ಟರಮಟ್ಟಿಗೆ ಎಂದರೆ ಚಿಂತಕರಾದ ಐಜಾಜ್ ಅಹಮದ್ ಒಂದು ಸಾರಿ ಹೇಳಿದ್ದರು, 'ಜಾಗತೀಕರಣವು ಯಶಸ್ವಿಯಾಗಿರುವುದು ಭಾರತದಲ್ಲಿ ಮಾತ್ರ' ಎಂದು. ಈ ವಾಕ್ಯವು ಇಂದು ನಮ್ಮ ದುರಂತಗಳ ಸಂಕ್ಷಿಪ್ತ ಹೇಳಿಕೆಯಾಗಿದೆ. ಆಳುವ ಪಕ್ಷವು ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿರುವ, ನಾಶಮಾಡುತ್ತಿರುವ ಹಿಂದೆ ಇರುವ ಉದ್ದೇಶವು ಈಗ ಸ್ಪಷ್ಟವಾಗಿದೆ. ತಾನು ಅಧಿಕಾರದಲ್ಲಿರಬೇಕು ಎನ್ನುವುದು ಮಾತ್ರವಲ್ಲ, ತನ್ನ ಅಧಿಕಾರದಿಂದ ಬಂಡವಾಳಶಾಹಿಯನ್ನು ಪ್ರಬಲಗೊಳಿಸುವುದು ಅದರ ಉದ್ದೇಶವಾಗಿದೆ. ಆದರೆ ಈ ಕೆಲಸವನ್ನು ಇಷ್ಟು ನಿರ್ಲಜ್ಜವಾಗಿ ಕ್ರೂರವಾಗಿ ಮಾಡುತ್ತದೆಯೆಂದು ಬಹಳ ಜನ ನಿರೀಕ್ಷಿಸಿರಲಿಲ್ಲ.

"ಪ್ರಬಲ ನಾಯಕ", 'ಹಿಂದೂ ರಾಷ್ಟ್ರ' ಮುಂತಾದ ಆಫೀಮುಗಳ ಪ್ರಭಾವದಿಂದಾಗಿ ಸಮೂಹಸನ್ನಿಯಲ್ಲಿರುವ ಪ್ರಜೆಗಳು ಏನಾದರೂ ಸರಿ ಆಳುವ ಪಕ್ಷವನ್ನು ಚುನಾವಣೆಗಳಲ್ಲಿ ಆಯ್ಕೆ ಮಾಡಿಯೇ ಮಾಡುತ್ತಾರೆ ಎನ್ನುವುದು ಗೊತ್ತಾದ ಕೂಡಲೇ ಸರಕಾರವು ತನ್ನ ಪಶುಬಲವನ್ನು ಬಳಸಿಕೊಂಡು ರೈತರನ್ನು ಕಾರ್ಮಿಕರನ್ನು ದಮನ ಮಾಡುತ್ತಿದೆ. ಶಾಂತಿಯುತ ಪ್ರತಿಭಟನೆಗಾಗಿ ಬಂದ ರೈತರನ್ನು ತಡೆಯಲು ಕಂದಕಗಳನ್ನು ತೋಡಿ ಜಲಫಿರಂಗಿಗಳನ್ನು ಬಳಸಲಾಯಿತು. ಅಂದರೆ ಗಡಿದಾಟಿ ಬರುತ್ತಿರುವ ಶತ್ರುರಾಷ್ಟ್ರದ ಸೈನಿಕರನ್ನು ತಡೆಯುವ ಹಾಗೆ ರೈತರನ್ನು ತಡೆಯಲಾಯಿತು. ಬಿ.ಎಸ್.ಎಫ್ (Border Security Force) ಅನ್ನು ಬಳಸಿಕೊಂಡದ್ದು ಒಂದು ಭಯಾನಕ ರೂಪಕದಂತಿದೆ. ಅಂದರೆ ಆಳುವವರ್ಗ, ಸರಕಾರ ಮತ್ತು ಬಂಡವಾಳಶಾಹಿಗಳು ಸೇರಿ ಒಂದು ರಾಷ್ಟ್ರವಿದೆ. ಕಾರ್ಮಿಕರು, ರೈತರದು ಇನ್ನೊಂದು ರಾಷ್ಟ್ರವಿದೆ. ಹೀಗಾಗಿ ದೆಹಲಿಯ ಗಡಿಯಲ್ಲಿ ಈ ಶತ್ರುರಾಷ್ಟ್ರದವರನ್ನು ತಡೆಯಬೇಕು. ಈಗಾಗಲೇ ಆಳುವ ಪಕ್ಷದ ಬಾಡಿಗೆ ಬಾಯಿಗಳು, ರೈತರು 'ಖಲಿಸ್ತಾನಿಗಳು', 'ಭಯೋತ್ಪಾದಕರು', 'ದೇಶದ್ರೋಹಿಗಳು' ಎಂದು ಹೇಳತೊಡಗಿವೆ. ಇಂಥ ಒಂದು ಮೆಸೇಜ್‌ಗೆ ಎರಡು ರೂಪಾಯಿ ಕೂಲಿ ಪಡೆಯುವ "ನೆಟ್ಟಿಗರು" ರೈತರ ಮೇಲೆ ಗುಂಡು ಹಾರಿಸಿ ಎಂದು ಹೇಳುತ್ತಿದ್ದಾರೆ. ನನಗೆ ವೈಯಕ್ತಿಕವಾಗಿ ಆಶ್ಚರ್ಯವೆಂದರೆ ಅನೇಕ ಕೋಟಿ ವಲಸೆ ಕಾರ್ಮಿಕರು ಸಾವಿರಾರು ಮೈಲಿ ನಡೆದುಕೊಂಡು ಹೋಗುತ್ತಿರುವಾಗಲೂ ಭಾರತೀಯ ಪ್ರಜೆಗಳ ಮನಸ್ಸಿಗೆ ಏನೂ ಅನ್ನಿಸಲಿಲ್ಲ. ಹಠಾತ್ತನೆ ಲಾಕ್‌ಡೌನ್ ವಿಧಿಸಿದಾಗ ನರಕವನ್ನು ಅನುಭವಿಸಿದಾಗಲೂ ಇವರಿಗೆ ಏನೂ ಅನ್ನಿಸಲಿಲ್ಲ. ಈಗ ಲಕ್ಷಾನುಗಟ್ಟಲೆ ರೈತರು ಕೊರೆಯುವ ಚಳಿಯಲ್ಲಿ ಪ್ರತಿಭಟನೆ ಮಾಡಿದರೂ ಏನೂ ಅನ್ನಿಸಲಿಲ್ಲ. ಬುದ್ಧಿ, ಮನಸ್ಸುಗಳು ಹೀಗೆ ಸಂಪೂರ್ಣ ಮುರುಟಿ ಹೋಗಲು ಸಾಧ್ಯವೆ? ಮನುಷ್ಯ ಸಂವೇದನೆಯೇ ಸತ್ತು ಹೋಗಿದೆಯೆ?

ನಾನು ಈ ಲೇಖನ ಬರೆಯುತ್ತಿರುವಾಗ ಇದು ಪ್ರತಿಭಟನೆಯ ಎಂಟನೇಯ ದಿನ. ನೆನ್ನೆವರೆಗೆ ಮಾತುಕತೆಗಳು ವಿಫಲವಾಗಿವೆ. ರೈತರ ನಿಲುವು ಸರಿಯಾಗಿದೆ. ಮೊದಲು ರೈತ ವಿರೋಧಿ ಕಾನೂನುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು. ಆನಂತರವೇ ಮಾತುಕತೆ. ಸರಕಾರದ ತಂತ್ರಗಳ ಬಗ್ಗೆ ಯಾವ ಸಂಶಯವೂ ಬೇಡ. ಅದು ಪ್ರತಿಭಟನೆ ಮಾಡುತ್ತಿರುವವರಲ್ಲಿ ಒಡಕು ಹುಟ್ಟಿಸುತ್ತದೆ. ಅದು ಸಾಧ್ಯವಾಗದಿದ್ದರೆ ಕೋಮು ಗಲಭೆಯನ್ನು ಸೃಷ್ಟಿಸುತ್ತದೆ. ಇನ್ನೊಂದು ತಂತ್ರವೆಂದರೆ ಗಡಿಯಲ್ಲಿ ಫುಲ್ವಾಮಾದಂಥ ಘಟನೆಯನ್ನು ಸೃಷ್ಟಿಸಿ ದೇಶದ ಭದ್ರತೆಯು ಅಪಾಯದಲ್ಲಿದೆ ಎಂದು ಹೇಳಿ ರೈತರ ಮೇಲೆ ನೈತಿಕ ಒತ್ತಡ ತರುತ್ತದೆ. ಕಾಂಗ್ರೆಸ್‌ನ ಮೂರ್ಖ ಹಾಗೂ ಬೇಜವಾಬ್ದಾರಿಯ ನಡೆಯ ಪ್ರತೀಕವಾಗಿ ಪಂಜಾಬ್‌ನ ಮುಖ್ಯಮಂತ್ರಿ "ರೈತರು ಹಠ ಹಿಡಿಯಬಾರದು. ಇದು ದೇಶದ ಭದ್ರತೆಯ ಪ್ರಶ್ನೆ" ಎಂದು ಹೇಳಿದ್ದಾರೆ, ಆಳುವ ಪಕ್ಷವೂ ಹೇಳದೇ ಇದ್ದ ದೇಶದ ಭದ್ರತೆಯನ್ನು ರೈತರ ಪ್ರತಿಭಟನೆಗೆ ಜೋಡಿಸುವ ಈ ರೈತದ್ರೋಹಿ ಪ್ರಾಯಶಃ ಆಳುವ ಪಕ್ಷಕ್ಕೆ ಒಂದು ತಂತ್ರವನ್ನು ಹೇಳಿಕೊಟ್ಟಿದ್ದಾನೆ. ರೈತರ ಜೊತೆಗೆ ಸಂಧಾನವಾಗದಿದ್ದರೆ, ಅಥವಾ ಅವರಲ್ಲಿ ಒಡಕು ಮೂಡಿಸಲು ಸಾಧ್ಯವಾಗದಿದ್ದರೆ ಗಡಿಯಲ್ಲಿ ಒಂದು ಘಟನೆಯನ್ನು "ನಡೆಸಲಾಗುತ್ತದೆ" ಎನ್ನುವುದರ ಬಗ್ಗೆ ಅನುಮಾನವೇ ಬೇಡ.

ಈಗಿರುವ ಮುಖ್ಯಪ್ರಶ್ನೆಯೆಂದರೆ ಈ ಚಳುವಳಿಯನ್ನು ಉದ್ದೇಶ ಈಡೇರುವವರೆಗೆ ಮುಂದುವರೆಸಿಕೊಂಡು ಹೋಗುವುದು ಹೇಗೆ ಎನ್ನುವುದು. ದೇಶದ ಎಲ್ಲಾ ಪ್ರಜೆಗಳು ಈ ಪ್ರತಿಭಟನೆಯಲ್ಲಿ ಭಾಗಿಗಳಾಗುವುದೊಂದೇ ಪರಿಹಾರ. ಅದು ರೈತರ ಸಮಸ್ಯೆ ಎಂದು ಸುಮ್ಮನಾದರೆ ಬರುವ ದಿನಗಳಲ್ಲಿ ಪ್ರಭುತ್ವವು ಇನ್ನೂ ಹೆಚ್ಚು ಕ್ರೂರವಾಗುತ್ತದೆ, ಹಿಂಸಾಪರವಾಗುತ್ತದೆ.

ಇನ್ನು ಕರ್ನಾಟಕದ ಕೃಷಿಮಂತ್ರಿಗಳು ಆತ್ಮಹತ್ಯೆ ಮಾಡಿಕೊಳ್ಳುವ ರೈತರು ಹೇಡಿಗಳೆಂದು ಅಪ್ಪಣೆ ಕೊಡಿಸಿದ್ದಾರೆ. ಅವರು ಹೇಳಿದ್ದು ನಿಜ. ಏನೇ ಆದರೂ ಆತ್ಮಹತ್ಯೆ ಮಾಡಿಕೊಳ್ಳದ ಧೀರರು ರಾಜಕಾರಣಿಗಳು ಮಾತ್ರ. ಏಕೆ ಗೊತ್ತೆ? ಅವರಿಗೆ ಬೀದಿ ನಡುವೆ ಉಗಿಯಿರಿ; ಅವರ ಭ್ರಷ್ಟಾಚಾರವು ಸಾಕ್ಷಿ ಸಮೇತ ಹೊರಬರಲಿ; ಅವರು ಹೆಂಗಸರ ಮಾನಭಂಗ ಮಾಡುವ ವೀಡಿಯೋಗಳು ಬರಲಿ; ಅವರೆಂದೂ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಇಂಥ ಧೀರರ ಎದುರಿಗೆ ಒಂದೆರಡು ಲಕ್ಷ ರೂಪಾಯಿ ಸಾಲ ತೀರಿಸಲಿಕ್ಕಾಗದೆ ಮಾನಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುವ ರೈತನು ಹೇಡಿಯಲ್ಲವೆ?!

"ಭಾರತ್ ಬಂದ್" ಅಭೂತಪೂರ್ವ ಯಶಸ್ವಿ–ಎಚ್ಚೆತ್ತು ಕೇಂದ್ರ ಸರ್ಕಾರ ಕೂಡಲೇ ಕೃಷಿ ಸಂಬಂಧಿತ ನಾಲ್ಕು ಕಾನೂನುಗಳನ್ನು ವಾಪಸು ಪಡೆಯಬೇಕು–ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ (ಎಐಕೆಎಸ್‌ಸಿಸಿ) ಆಗ್ರಹ

ಡಿಸೆಂಬರ್ 8, 2020, ಇಂದು ನಡೆದ 'ಅಖಿಲ ಭಾರತ ರೈತರ ಸಂಘರ್ಷ ಸಮಿತಿ'ಯನ್ನು ಒಳಗೊಂಡು 'ಸಂಯುಕ್ತ ಕಿಸಾನ್ ಮೋರ್ಚಾ' ನೀಡಿದ್ದ 'ಭಾರತ್ ಬಂದ್'ಗೆ ಅಭೂತ ಪೂರ್ವವಾಗಿ ರಾಜ್ಯದಲ್ಲಿ ಯಶಸ್ವಿಯಾಗಿದೆ. 'ಭಾರತ್ ಬಂದ್'ನ್ನು ಯಶಸ್ವಿ ಮಾಡಿದ ರಾಜ್ಯದ ರೈತರು, ಕೃಷಿ ಕೂಲಿಕಾರರು, ಕಾರ್ಮಿಕರು, ದಲಿತರು, ಕನ್ನಡ ಪರ ಸಂಘಟನೆಗಳು, ವಿದ್ಯಾರ್ಥಿ–ಯುವಜನ, ಮಹಿಳಾ ಸಂಘಟನೆಗಳು, ನಾಗರೀಕ ಬಂಧುಗಳು, ವಿವಿಧ ರಾಜಕೀಯ ಪಕ್ಷಗಳು ಇತ್ಯಾದಿ ಎಲ್ಲರಿಗೂ ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ(ಎಐಕೆಎಸ್‌ಸಿಸಿ) ಕರ್ನಾಟಕ ರಾಜ್ಯ ಸಮಿತಿಯು ಅಭಿನಂದನೆಗಳನ್ನು ಸಲ್ಲಿಸುತ್ತದೆ.

'ಭಾರತ್ ಬಂದ್' ಮೂಲಕ ದೇಶದ ಜನತೆ ವ್ಯಕ್ತಪಡಿಸಿರುವ ಬಲವಾದ ಜನಾಭಿಪ್ರಾಯದಿಂದ ಎಚ್ಚೆತ್ತು ಕೇಂದ್ರ ಸರ್ಕಾರ ಕೂಡಲೇ ಕೃಷಿ ಸಂಬಂಧಿತ ಮೂರು ಕಾಯ್ದೆಗಳು ಹಾಗು 'ವಿದ್ಯುತ್ ಕಾಯ್ದೆ (ತಿದ್ದುಪಡಿ)–2020' ವಾಪಸು ಪಡೆಯಬೇಕೆಂದು ಎಐಕೆಎಸ್‌ಸಿಸಿ ಆಗ್ರಹಿಸುತ್ತದೆ.

ಭೂ ಸುಧಾರಣಾ ಕಾಯ್ದೆ ಸುಗ್ರೀವಾಜ್ಞೆ ಅಂಗೀಕಾರ–ರಾಜ್ಯದ ರೈತರು, ಕೃಷಿ ಕೂಲಿಕಾರರಿಗೆ ದ್ರೋಹ ಬಗೆದ ಬಿಜೆಪಿ, ಜೆಡಿ(ಎಸ್) ಪಕ್ಷಗಳು – ಎಐಕೆಎಸ್‌ಸಿಸಿ ಖಂಡನೆ, ರಾಜ್ಯದಾದ್ಯಂತ ಪ್ರತಿಭಟನೆಗೆ ಕರೆ:

"ಉಳುವವನ್ನೇ ಹೊಲದೊಡೆಯ" ಎನ್ನುವ ಮಹತ್ತರ ಘೋಷಣೆಯನ್ನು ಗಾಳಿಗೆ ತೂರಿ, "ಉಳ್ಳವನ್ನೆ ಹೊಲದೊಡೆಯ" ಎನ್ನುವಂತೆ ಕಾರ್ಪೋರೇಟ್ ಕಂಪನಿಗಳಿಗೆ ಕೃಷಿ ಭೂಮಿಯನ್ನು ಒಪ್ಪಿಸುವ "ಭೂಸುಧಾರಣಾ ಕಾಯ್ದೆ ತಿದ್ದುಪಡಿ ಸುಗ್ರೀವಾಜ್ಞೆ"ಯನ್ನು ಇಂದು ವಿಧಾನ ಮಂಡಲದಲ್ಲಿ ಅಂಗೀಕರಿಸುವುದರ ಮೂಲಕ ಬಿಜೆಪಿ ಮತ್ತು ಜೆಡಿ(ಎಸ್) ರಾಜ್ಯದ ರೈತರು ಮತ್ತು ಕೃಷಿ ಕೂಲಿಕಾರರಿಗೆ "ಮಹಾದ್ರೋಹ" ಬಗೆದಿವೆ.

ಈ ಜನವಿರೋಧಿ ಕ್ರಮವನ್ನು ಪ್ರತಿಭಟಿಸಿ ಕೂಡಲೇ ರಾಜ್ಯದಾದ್ಯಂತ "ಭೂಸುಧಾರಣಾ ಕಾಯ್ದೆ ತಿದ್ದುಪಡಿ" ಪ್ರತಿಗಳನ್ನು ಸುಟ್ಟು ಹಾಕುವಂತಹ ಹೋರಾಟವನ್ನು ನಡೆಸಬೇಕೆಂದು ಎಐಕೆಎಸ್‌ಸಿಸಿ ಕರೆ ನೀಡುತ್ತದೆ.

ಸದ್ಯ ನಡೆಯುತ್ತಿರುವ ವಿಧಾನಸಭಾ ಅಧಿವೇಶನದಲ್ಲಿ ನೆರೆ ಪರಿಹಾರ, ಬಗರ್‌ಹುಕ್ಕುಂ ಭೂಮಿಗಳ ಸಕ್ರಮ, ಅರಣ್ಯ ಒತ್ತುವರಿದಾರರ ಸಮಸ್ಯೆಗಳ ಪರಿಹಾರ, ಬೆಲೆ ಕುಸಿತದಿಂದ ರೈತರನ್ನು ರಕ್ಷಿಸಲು "ಖರೀದಿ ಕೇಂದ್ರ"ಗಳ ಆರಂಭ, ಕಬ್ಬು ಬೆಳೆಗಾರರ ಸಮಸ್ಯೆ ಇತ್ಯಾದಿ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರ ನೀಡಬೇಕೆಂದು ಎಐಕೆಎಸ್‌ಸಿಸಿ ರಾಜ್ಯ ಸರ್ಕಾರವನ್ನು ಆಗ್ರಹಿಸುತ್ತದೆ.

ಕೃಷಿ ಕಾನೂನುಗಳ ಕುರಿತು ಮೋದಿ ಸರಕಾರದ ಎಂಟು ಬುರುಡೆಗಳು ಮತ್ತು ವಾಸ್ತವ



ಒಂದು ಕಡೆ ಲಾಠಿ, ಜಲಫಿರಂಗಿ, ಅಶ್ರುವಾಯು ಗಳಿಂದ ಹಲ್ಲೆ; ಇನ್ನೊಂದು ಕಡೆ 'ಖಲಿಸ್ತಾನಿ', 'ಭಯೋತ್ಪಾದಕ' 'ದೇಶದ್ರೋಹಿ' 'ವಿರೋಧ ಪಕ್ಷಗಳ ಪ್ರಚಾರ ನಂಬಿದ ದಡ್ಡರು' ಎಂದೆಲ್ಲ ಆಪಾದನೆಗಳ ದಾಳಿಗಳು. ಸರಕಾರದ ಇವೆರಡೂ ಜೋಡಿತಂತ್ರಗಳು ಅಭೂತಪೂರ್ವ ಅಗಾಧ ರೈತರ ಚಳುವಳಿ ಮತ್ತು ಅವರ ದೃಢ ನಿಶ್ಚಯ, ಐಕ್ಯತೆ ಗಳನ್ನು ಮುರಿಯುವಲ್ಲಿ ಸೋತಿವೆ. ಜೊತೆಗೆ ಬಿಜೆಪಿ ಪಕ್ಷ ಮತ್ತು ಸರಕಾರ ಹಾಗೂ ಅದರ ಕೃಪಾಪೋಷಿತ ಮಾಧ್ಯಮಗಳು ಕೃಷಿ ಕಾನೂನುಗಳು ರೈತರಿಗೆ 'ಎಷ್ಟು ಒಳ್ಳೆಯವು' ಎಂದು ನಂಬಿಸಲು ಭಾರೀ ಪ್ರಚಾರ ಆರಂಭಿಸಿವೆ. ರೈತರ ಚಳುವಳಿ ಆರಂಭವಾದಾಗಿನಿಂದ ಇವನ್ನು ಹೇಳಲಾಗುತ್ತಿದ್ದು, ಈಗ ಅದರ ಪ್ರಚಾರ ತೀವ್ರವಾಗಿದೆ. ಇಂತಹ ಎಂಟು ಬುರುಡೆಗಳು ಮತ್ತು ವಾಸ್ತವಗಳನ್ನು ಮುಂದೆ ಕೊಡಲಾಗಿದೆ:



ಕೃಪೆ: ಪಿ.ಮಹಮ್ಮದ್, ವಾರ್ತಾಭಾರತಿ

ಬುರುಡೆ 1 :

ದೇಶದಲ್ಲಿ ರೈತರು ತಮ್ಮ ಬೆಳೆಗಳನ್ನು ಕೃಷಿ ಮಂಡಿ (ಎ.ಪಿ.ಎಂ.ಸಿ) ಮಾರುಕಟ್ಟೆಗಳ ಹೊರಗೆ ಮಾರಲು ಸ್ವತಂತ್ರರಾಗಿರಲಿಲ್ಲ. ಹೊಸ ಕೃಷಿ ಕಾನೂನುಗಳು ಯಾರಿಗೆ ಬೇಕಾದರೂ ಎಲ್ಲಿ ಬೇಕಾದರೂ ತಮ್ಮ ಬೆಳೆಗಳ ಮಾರಾಟ ಮಾಡಲು ರೈತರಿಗೆ ಸ್ವಾತಂತ್ರ್ಯ ಕೊಟ್ಟು ಅವರಿಗೆ ಒಳ್ಳೆಯ ಬೆಲೆ ಸಿಗಲು ನೆರವಾಗುತ್ತವೆ.

ವಾಸ್ತವ1 : ಕೃಷಿ ಉತ್ಪನ್ನಗಳ ಬಹುಭಾಗ ಈಗಲೂ ಮಂಡಿಗಳ ಹೊರಗೇನೆ ಮಾರಾಟವಾಗುತ್ತಿದೆ. ಅಧಿಕೃತ ದಾಖಲೆಗಳ ಪ್ರಕಾರವೇ, ಭತ್ತದ ಶೇ. 29 ಮತ್ತು ಗೋದಿಯ ಶೇ. 44 ರಷ್ಟು ಮಾತ್ರ ಮಂಡಿಗಳಲ್ಲಿ ಮಾರಾಟವಾಗುತ್ತದೆ. ಭತ್ತದ ಶೇ. 49 ಮತ್ತು ಗೋದಿಯ ಶೇ. 36 ರಷ್ಟು ಸ್ಥಳೀಯ ಖಾಸಗಿ ವ್ಯಾಪಾರಿ ಅಥವಾ ಕೃಷಿ ಲಾಗುವಾಡುಗಳ ಮಾರಾಟಗಾರ ಖರೀದಿ ಮಾಡುತ್ತಾನೆ. ಸರಕಾರದ ಸಮೀಕ್ಷೆಯ ಪ್ರಕಾರವೇ, ಅದರಲ್ಲಿ ಒಳಗೊಂಡ 31 ಬೆಳೆಗಳಲ್ಲಿ 29ರಲ್ಲಿ ಸ್ಥಳೀಯ ಖಾಸಗಿ ವ್ಯಾಪಾರಿಯೇ ಅತಿ ದೊಡ್ಡ ಖರೀದಿದಾರ.

ಬುರುಡೆ 2:

ದಕ್ಷತೆಯಿಲ್ಲದ ಮಧ್ಯವರ್ತಿಗಳು ಮತ್ತು ನಿಯಮಿತ ಕೃಷಿ ಮಾರುಕಟ್ಟೆಗಳು ಕೃಷಿ ವ್ಯಾಪಾರದ ಏಕಸ್ವಾಮ್ಯ ಪಡೆದಿವೆ. ಇದು ರೈತರ ಹಿತಾಸಕ್ತಿಗೆ ವಿರುದ್ಧವಾಗಿದೆ.

ವಾಸ್ತವ 2: ಈಗಾಗಲೇ 18 ರಾಜ್ಯಗಳು ಎ.ಪಿ.ಎಂ.ಸಿ ಯ ಹೊರಗೆ ಖಾಸಗಿ ಮಂಡಿಗಳ ಸ್ಥಾಪನೆಗೆ ಮತ್ತು 19 ರಾಜ್ಯಗಳು ರೈತರಿಂದ ಕೃಷಿ ಉತ್ಪನ್ನಗಳ ನೇರ ಖರೀದಿಗೆ ಅವಕಾಶ ನೀಡಿವೆ.

ರಾಷ್ಟ್ರೀಯ ಕೃಷಿ ಆಯೋಗ ಪ್ರತಿ ರೈತ ತನ್ನ ಎತ್ತಿನ ಗಾಡಿಯಲ್ಲಿ ಒಂದು ಗಂಟೆಯಲ್ಲಿ ಕೃಷಿ ಮಂಡಿಯನ್ನು ಮುಟ್ಟಬೇಕು ಎಂದು ಶಿಫಾರಸು ಮಾಡಿದೆ. ಇದು ಸಾಧ್ಯವಾಗಲು 80 ಚದರ ಕಿ.ಮಿ ಗೆ ಒಂದು ಮಂಡಿ ಇರಬೇಕು ಮತ್ತು ಒಟ್ಟು ಸುಮಾರು 41 ಸಾವಿರ ಮಂಡಿಗಳು ಬೇಕು. ಆದರೆ 2019ರ ಅಂಕೆಸಂಖ್ಯೆಗಳ ಪ್ರಕಾರ ಕೇವಲ 6630 ಮಂಡಿಗಳಿವೆ ಮತ್ತು 463 ಚದರ ಕಿ.ಮಿ ಗೆ ಒಂದು ಮಂಡಿಯಿದೆ ಅಷ್ಟೇ. ಮಂಡಿಗಳ ಏಕಸ್ವಾಮ್ಯವಂತೂ ಖಂಡಿತ ಇಲ್ಲ. ಮಂಡಿ ದೂರವಿದ್ದರೆ ರೈತ ಇಷ್ಟವಿಲ್ಲದಿದ್ದರೂ ಖಾಸಗಿ ವ್ಯಾಪಾರಿಗೆ ಅವನು ಕೇಳಿದ ಬೆಲೆಗೆ ತನ್ನ ಬೆಳೆಯನ್ನು ಮಾರಾಟ ಮಾಡಬೇಕಾಗುತ್ತದೆ. ಮಂಡಿಗಳಿದ್ದರೆ ಖಾಸಗಿ ವ್ಯಾಪಾರಿ ಮತ್ತು ಮಂಡಿಯ ನಡುವೆ ಪೈಪೋಟಿ ಇದ್ದು ರೈತನಿಗೆ ಒಳ್ಳೆಯ ಬೆಲೆ ಸಿಗುವ ಸಾಧ್ಯತೆ ಹೆಚ್ಚು. ಆದರೆ ಸಾಕಷ್ಟು ಮಂಡಿಗಳ ಅಭಾವದಿಂದ ರೈತರ ಹಿತಾಸಕ್ತಿಗೆ ಧಕ್ಕೆಯಾಗುತ್ತಿದೆ.

ಬುರುಡೆ 3:

ಸರಕಾರಿ ಖರೀದಿಯ ಮುಂದುವರಿಕೆಗೆ ಈ ಮೂರು ಕೃಷಿ ಕಾನೂನುಗಳು ಯಾವ ರೀತಿಯಲ್ಲೂ ಧಕ್ಕೆ ತರುವುದಿಲ್ಲ. ಈ ಕಾನೂನುಗಳಿಂದಾಗಿ ಬರುವ ಮುಕ್ತ ಮಾರುಕಟ್ಟೆ ವ್ಯವಸ್ಥೆ ರೈತನಿಗೆ ಯಾವುದೇ ಖರೀದಿದಾರನಿಗೆ ಮಾರಲು ಸ್ವಾತಂತ್ರ್ಯ ನೀಡುತ್ತದೆ.

ವಾಸ್ತವ 3 : ಮುಕ್ತ ಮಾರುಕಟ್ಟೆ ವ್ಯವಸ್ಥೆ ಬಂದ ಮೇಲೆ ಏನಾಗುತ್ತದೆ ಎಂಬುದನ್ನು ಬಿಹಾರದ ಅನುಭವ ತೋರಿಸುತ್ತದೆ. ಬಿಹಾರ 2006ರಲ್ಲೇ ಎ.ಪಿ.ಎಂ.ಸಿ ಗಳನ್ನು ರದ್ದು ಮಾಡಿತು. ಕೇಂದ್ರ ಸರಕಾರದ ಆಹಾರ ಮತ್ತು ಸಾರ್ವಜನಿಕ ವಿತರಣೆ ಇಲಾಖೆಯ ಅಧಿಕೃತ ಅಂಕೆಸಂಖ್ಯೆಗಳ ಪ್ರಕಾರ ಅದರ ನಂತರ ಸರಕಾರಿ ಏಜೆನ್ಸಿಗಳು ಕೇವಲ ಶೇ. 20 ಭತ್ತ ಖರೀದಿ ಮಾಡಿವೆ ಮತ್ತು ಗೋದಿ ಖರೀದಿ ನಿಂತೇ ಹೋಗಿದೆ. ಸರಕಾರ ನಡೆಸುವ ಆಹಾರಧಾನ್ಯ ಖರೀದಿ ಕೇಂದ್ರಗಳ ಸಂಖ್ಯೆ 2015–16ರಲ್ಲಿ 9 ಸಾವಿರ ಇದ್ದಿದ್ದು, 2019–20ರಲ್ಲಿ 1619ಕ್ಕೆ ಕುಸಿದಿದೆ. ಮೂರು ಕೃಷಿ ಕಾನೂನುಗಳ ಜಾರಿ ನಂತರ ದೇಶದಾದ್ಯಂತ ಸರಕಾರಿ ಖರೀದಿ ಕುಸಿಯುತ್ತದೆ ಅಥವಾ ನಿಂತೇ ಹೋಗುವುದು ಖಚಿತ.

ಬುರುಡೆ 4 :

ಹೊಸ ಕೃಷಿ ಕಾನೂನುಗಳು ಕನಿಷ್ಠ ಬೆಂಬಲ ಬೆಲೆಯನ್ನು ರದ್ದು ಮಾಡುವುದಿಲ್ಲ. ಖಾಸಗಿ ಮಾರುಕಟ್ಟೆಗಳಲ್ಲಿ ಅದಕ್ಕಿಂತಲೂ ಹೆಚ್ಚಿನ ಬೆಲೆಯಲ್ಲಿ ಮಾರಲು ರೈತರು ಸ್ವತಂತ್ರರಾಗಿರುತ್ತಾರೆ.

ವಾಸ್ತವ 4 : ರಿಸರ್ವ್ ಬ್ಯಾಂಕ್ 2018ರಲ್ಲಿ ನಡೆಸಿದ ರೈತರು ಮತ್ತು ವ್ಯಾಪಾರಿಗಳ ಸಮೀಕ್ಷೆಯಲ್ಲಿ ಶೇ 50 ಕ್ಕಿಂತಲೂ ಹೆಚ್ಚು ರೈತರು ಕನಿಷ್ಠ ಬೆಂಬಲ ಬೆಲೆ ರೈತರಿಗೆ ಅತ್ಯಂತ ಹೆಚ್ಚು ಅನುಕೂಲಕರವಾದ ಯೋಜನೆ ಎಂದು ಹೇಳಿದ್ದರು. ಈ ಕೃಷಿ ಕಾನೂನುಗಳು ಎಲ್ಲೂ ವ್ಯಾಪಾರಿ ಅಥವಾ ಕೃಷಿ ಕಂಪನಿ ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ಖರೀದಿ ಮಾಡುವಂತಿಲ್ಲ ಎಂದು ಹೇಳುವುದಿಲ್ಲ. ಕನಿಷ್ಠ ಬೆಂಬಲ ಬೆಲೆ ಬರಿಯ ಕಾಗದದ ಮೇಲಿರುತ್ತದೆ ಅಷ್ಟೇ. ಇಲ್ಲೂ ಅಷ್ಟೇ ಬಿಹಾರದ ಅನುಭವ ಏನಾಗಲಿದೆ ಎಂಬುದನ್ನು ಈಗಾಗಲೆ ತೋರಿಸಿದೆ. 2019–20ರಲ್ಲಿ ಭತ್ತಕ್ಕೆ ಕ್ವಿಂಟಾಲಿಗೆ ರೂ.1815 ಕನಿಷ್ಠ ಬೆಂಬಲ ಬೆಲೆ ಎಂದು ನಿಗದಿ ಮಾಡಲಾಗಿತ್ತು, ಆದರೆ ಬಿಹಾರಿನ ರೈತರಿಗೆ ವ್ಯಾಪಾರಿಗಳಿಂದ ಸಿಕ್ಕಿದ ಬೆಲೆ ರೂ. 1350–1400 ಆಗಿತ್ತು. ಗೋದಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಪ್ರತಿ ಕ್ವಿಂಟಾಲಿಗೆ ರೂ. 1925 ಎಂದು ನಿಗದಿ ಮಾಡಲಾಗಿತ್ತು, ಆದರೆ ಬಿಹಾರದಲ್ಲಿ ರೂ. 1800 ಕ್ಕಿಂತಲೂ ಕಡಿಮೆ ಬೆಲೆಗೆ ರೈತರು ಮಾರಬೇಕಾಯಿತು. ಜೋಳಕ್ಕೆ ಕ್ವಿಂಟಾಲಿಗೆ ರೂ. 1815 ಕನಿಷ್ಠ ಬೆಂಬಲ ಬೆಲೆ ಎಂದು ನಿಗದಿ ಮಾಡಲಾಗಿತ್ತು. ಆದರೆ ಬಿಹಾರಿನ ರೈತರಿಗೆ ವ್ಯಾಪಾರಿಗಳಿಂದ ಸಿಕ್ಕಿದ ಬೆಲೆ ಬರಿಯ ರೂ. 1000–1300 ಆಗಿತ್ತು. ಇದು ಎ.ಪಿ.ಎಂ.ಸಿ ವ್ಯವಸ್ಥೆ ವ್ಯಾಪಕವಾಗಿ ಸರಕಾರಿ ಖರೀದಿ ಗಮನಾರ್ಹವಾಗಿರುವ ಇತರ ರಾಜ್ಯಗಳಿಗೆ ಹೋಲಿಸಿದರೆ ಬಹಳ ಕಡಿಮೆ.

ಬುರುಡೆ 5 :

ಹೊಸ ಕೃಷಿ ಕಾನೂನುಗಳು ಜಾರಿಯಾದ ನಂತರ ಖಾಸಗಿ ಕಂಪನಿಗಳು ಹೂಡಿಕೆ ಮಾಡಿ ಸಗಟು ಮಾರುಕಟ್ಟೆಗಳು ಮತ್ತು ಶೈತ್ಯಾಗಾರಗಳ ಸರಣಿಯ ಮೂಲಸೌಕರ್ಯವನ್ನು ಸ್ಥಾಪಿಸುವವು.

ವಾಸ್ತವ 5 : ಮತ್ತೆ ಬಿಹಾರದ ಅನುಭವವನ್ನು ನೋಡಿದರೆ ಇದು ಯಾವುದೂ ಆಗಿಲ್ಲವೆಂದು ಸರಕಾರದ ಕೃಷಿ ಮಾರುಕಟ್ಟೆಯ ರಾಷ್ಟ್ರೀಯ ಸಂಸ್ಥೆಯ ಅಧ್ಯಯನವೇ ಹೇಳುತ್ತದೆ. ನಿಯಮಿತ ಮಾರುಕಟ್ಟೆಯಿಂದ ಮುಕ್ತ ಮಾರುಕಟ್ಟೆ ವ್ಯವಸ್ಥೆಗೆ ಬದಲಾಯಿಸುವುದರ ಉದ್ದೇಶ ವ್ಯವಸ್ಥೆಯಲ್ಲಿ ದಕ್ಷತೆ ಹೆಚ್ಚಿಸಿ ರೈತರಿಗೆ ಅನುಕೂಲಕರ ಮತ್ತು ಸುಗಮವಾಗಿಸುವುದು ಆಗಿತ್ತು. ಆದರೆ ವಾಸ್ತವದಲ್ಲಿ ಅದು ಕೃಷಿ ಮಾರುಕಟ್ಟೆ ವ್ಯವಹಾರಗಳ ಮೇಲುಸ್ತುವಾರಿ ಮಾಡುವ ಸಾಂಸ್ಥಿಕ ರಚನೆಯಲ್ಲಿ ನಿರ್ವಾತ ಮೂಡಿಸಿದೆ. ಸಣ್ಣ ರೈತರಿಗೆ ಈಗಿನ ವ್ಯಾಪಾರಿಯ ಯಜಮಾನಿಕೆಯಲ್ಲಿರುವ ಮಾರುಕಟ್ಟೆ ವ್ಯವಸ್ಥೆಗೆ ಬದಲಿ ಕೊಡುವುದರಲ್ಲಿ ವಿಫಲವಾಗಿದೆ. ಶೈತ್ಯಾಗಾರ ಸರಣಿಗಳ ಸ್ಥಾಪನೆ ಮುಂತಾದ ಮೂಲಸೌಕರ್ಯ ಸ್ಥಾಪನೆಯಾಗಲಿ ಇತರ ಹೂಡಿಕೆಯಾಗಲಿ ಆಗಿಲ್ಲ ಎಂದಿದೆ ಆ ಅಧ್ಯಯನ.

ಬುರುಡೆ 6 :

ಹೊಸ ಕೃಷಿ ಕಾನೂನುಗಳು ಸ್ಥಾಪಿಸಲಿರುವ ಮುಕ್ತ ಮಾರುಕಟ್ಟೆ ಆಧಾರಿತ ಕೃಷಿ ವ್ಯಾಪಾರ ವ್ಯವಸ್ಥೆಯು ಕೃಷಿ ಅಭಿವೃದ್ಧಿ ದರವನ್ನು ಹೆಚ್ಚಿಸಲಿದೆ.

ವಾಸ್ತವ 6 : ಬಿಹಾರದ ಅನುಭವ ಮತ್ತೆ ಈ ಪೂರ್ವಕಲ್ಪನೆಯು ಸರಕಾರದ ಅಂಕಿ ಅಂಶಗಳೇ ಸುಳ್ಳು ಎಂದು ಸಾಬೀತು ಮಾಡುತ್ತದೆ. ಎ.ಪಿ.ಎಂ.ಸಿ ಮುಚ್ಚಿ ಇಂತಹ ವ್ಯವಸ್ಥೆ ಜಾರಿಗೆ ತಂದ ಹಲವು ವರ್ಷಗಳ ನಂತರ ಕೃಷಿ ಅಭಿವೃದ್ಧಿ ದರ ಕುಸಿಯುತ್ತಲಿದೆ. 2012–13 ರಿಂದ 2016–17 ವರೆಗಿನ ಅವಧಿಯಲ್ಲಿ ವಾರ್ಷಿಕ ಕೃಷಿ ಅಭಿವೃದ್ಧಿ ದರ ಶೇ. 1.3ಕ್ಕೆ ಕುಸಿದಿದೆ. 2008–09 ರಿಂದ 2011–12 ವರೆಗಿನ ಅವಧಿಯಲ್ಲಿ ಈ ದರ ಶೇ. 3 ಇತ್ತು. ಇದನ್ನು ನವೆಂಬರ್ 2019ರಲ್ಲಿ ಪ್ರಕಟವಾದ ರಾಷ್ಟ್ರೀಯ ಅನ್ವಯ ಆರ್ಥಿಕ ಸಂಶೋಧನಾ ಮಂಡಳಿ (ಎನ್.ಸಿ.ಎ.ಇ.ಆರ್) ವರದಿಯಲ್ಲಿ ದಾಖಲಿಸಲಾಗಿದೆ.

ಬುರುಡೆ 7 :

ಕೃಷಿ ಮಂಡಿ (ಎ.ಪಿ.ಎಂ.ಸಿ) ಗಳು ಕೃತಕವಾಗಿ ರೈತರಿಗೆ ಸಿಗುವ ಬೆಲೆಗಳನ್ನು ಕಡಿಮೆ ಮಾಡುತ್ತವೆ. ಕಾರ್ಪೊರೆಟ್ ಕಂಪನಿಗಳಿಗೆ ಕೃಷಿ ವ್ಯಾಪಾರದಲ್ಲಿ ಅವಕಾಶ ಕೊಟ್ಟರೆ ರೈತರಿಗೆ ಒಳ್ಳೆಯ ಬೆಲೆ ಸಿಗುತ್ತದೆ. ಈ ತರ್ಕದ ಮೇಲೆ ಹೊಸ ಕೃಷಿ ಕಾನೂನುಗಳ ಮೂಲಕ ಎ.ಪಿ.ಎಂ.ಸಿ ವ್ಯವಸ್ಥೆ ರದ್ದು ಮಾಡಲಾಗಿದೆ.


ವಾಸ್ತವ 7 : ಬೀಜ, ಕೀಟನಾಶಕ ಮುಂತಾದ ಕೃಷಿ ಲಾಗುವಾಡಗಳ ಮಾರುಕಟ್ಟೆಯಲ್ಲಿ ಕಳೆದ ಒಂದು ದಶಕದಲ್ಲಿ ದೊಡ್ಡ ಪ್ರಮಾಣದ ಕಾರ್ಪೊರೇಟೀಕರಣ ನಡೆದಿದೆ. ಇದರ ಫಲವಾಗಿ ಕೃಷಿ ಲಾಗುವಾಡಗಳ ಬೆಲೆ ತೀವ್ರವಾಗಿ ಹೆಚ್ಚಿದೆ. ಇದು ಕೃಷಿ ಕ್ಷೇತ್ರದ ಅಭಿವೃದ್ಧಿ ದರದ ಸ್ಥಗಿತತೆ ಮತ್ತು ಆನಂತರದ ಕುಸಿತಕ್ಕೆ ಪ್ರಮುಖ ಕಾರಣವಾಗಿದೆ ಎಂದು ಕೃಷಿ ಇಲಾಖೆಯ ಅಧ್ಯಯನಗಳು ತಿಳಿಸಿವೆ. ಲಾಭವನ್ನು ಗರಿಷ್ಟಗೊಳಿಸುವುದು ಪ್ರಮುಖ ಉದ್ದೇಶವಾಗಿ ಹೊಂದಿರುವ ಕಾರ್ಪೊರೇಟುಗಳು ರೈತರನ್ನು ತಮ್ಮ ಲಾಭಕ್ಕಾಗಿ ಬಲಿ ಕೊಡಲು ಹೇಸುವುದಿಲ್ಲ ಎಂಬುದು ವಾಸ್ತವ. ಆದ್ದರಿಂದ ಕಾರ್ಪೊರೇಟುಗಳು ರೈತರಿಗೆ ಒಳ್ಳೆಯ ಬೆಲೆ ಕೊಡುತ್ತವೆ ಎಂಬ ತರ್ಕ ಆಧಾರವಿಲ್ಲದ್ದು. ವಾಸ್ತವಕ್ಕೆ ದೂರವಾದದ್ದು. ಅವು ತಮ್ಮ ಲಾಭ ಗರಿಷ್ಟಗೊಳಿಸಲು ರೈತರನ್ನು ಇನ್ನಷ್ಟು ಹಿಂಡುತ್ತವೆ ಎಂಬುದು ವಾಸ್ತವ.

ಬುರುಡೆ 8 :

ಕೃಷಿ ವ್ಯಾಪಾರವನ್ನು ಖಾಸಗಿಯವರಿಗೆ ಮುಕ್ತಗೊಳಿಸುವುದರಿಂದ ಉಂಟಾಗುವ ಪೈಪೋಟಿಯಿಂದಾಗಿ ರೈತರಿಗೆ ಒಳ್ಳೆಯ ಬೆಲೆ ಸಿಗುತ್ತದೆ. ಹಲವು ಖಾಸಗಿ ವ್ಯಾಪಾರಿಗಳು ಖರೀದಿದಾರರಿರುವ ಪೈಪೋಟಿಯಿರುವ ಕೃಷಿ ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ರೈತ ಚೌಕಾಸಿ ಮಾಡಬಹುದು.

ವಾಸ್ತವ 8 : ಈ ವಾದದಂತೆ ವಾಸ್ತವದಲ್ಲಿ ನಡೆಯುವುದು ಕಂಡು ಬಂದಿಲ್ಲ. ಬದಲಾಗಿ ವಾಸ್ತವ ಈ ವಾದಕ್ಕೆ ತಿರುವು ಮುರುವಾಗಿದೆ. ವಾಸ್ತವದಲ್ಲಿ ಸರಕಾರಿ ಖರೀದಿ ಮತ್ತು ಕನಿಷ್ಠ ಬೆಂಬಲ ಬೆಲೆ ಕೃಷಿ ಬೆಲೆಗಳನ್ನು ಸ್ಥಿರಗೊಳಿಸುವುದಕ್ಕೆ ಅನುವು ಮಾಡಿಕೊಟ್ಟಿರುವುದು ಕಂಡು ಬರುತ್ತದೆ. ಸರಕಾರದ ಸಮೀಕ್ಷೆಗಳೇ ಸರಕಾರಿ ಖರೀದಿ ಮತ್ತು ಕೃಷಿ ಮಂಡಿಗಳು ವ್ಯಾಪಕವಾಗಿರುವ ಪಂಜಾಬಿನ ರೈತರು, ಅದು ದುರ್ಬಲವಾಗಿರುವ ಹಾಗೂ ಖಾಸಗಿ ವ್ಯಾಪಾರಿಗಳು ಪ್ರಧಾನವಾಗಿರುವ ಉತ್ತರ ಪ್ರದೇಶದ ರೈತರಿಗಿಂತ ಹೆಚ್ಚಿನ ಬೆಲೆ ಪಡೆದಿದ್ದಾರೆ ಎಂದು ದೃಢಪಡಿಸಿವೆ. ರಾಷ್ಟ್ರೀಯ ಸ್ಯಾಂಪಲ್ ಸರ್ವೆಯ 2012–13 ಸಮೀಕ್ಷೆ ಪ್ರಕಾರ ಪಂಜಾಬಿನ ರೈತರು ಕ್ವಿಂಟಲ್ ಭತ್ತಕ್ಕೆ ಸರಾಸರಿ ರೂ.1500 ಬೆಲೆ ಪಡೆದಿದ್ದರು. ಇದು ಆ ವರ್ಷ ನಿಗದಿಯಾಗಿದ್ದ ಕನಿಷ್ಠ ಬೆಂಬಲ ಬೆಲೆ ರೂ.1250 ಕ್ಕಿಂತ ಶೇ. 20 ಹೆಚ್ಚು. ಅದೇ ವರ್ಷ ಉತ್ತರ ಪ್ರದೇಶದಲ್ಲಿ ರೈತರು ಪಡೆದ ಬೆಲೆ ರೂ. 1010, ನಿಗದಿತ ಕನಿಷ್ಠ ಬೆಂಬಲ ಬೆಲೆಗಿಂತ ಸುಮಾರು ಶೇ. 20 ರಷ್ಟು ಕಡಿಮೆ. ಇದಕ್ಕೆ ಕಾರಣ ಮಂಡಿಗಳು ವ್ಯಾಪಕವಾಗಿ ಲಭ್ಯವಿಲ್ಲದಿರುವುದು. ಉತ್ತರ ಪ್ರದೇಶದ ರೈತರಿಗೆ ಕೇವಲ ಶೇ. 16 ರಷ್ಟು ಭತ್ತವನ್ನು ಮಾತ್ರ ಲಭ್ಯ ಮಂಡಿಗಳಲ್ಲಿ ಮಾರುವುದು ಸಾಧ್ಯವಾಯಿತು. ಹೀಗೆ ವಾಸ್ತವದಲ್ಲಿ ಮಂಡಿಗಳ ವ್ಯಾಪಕ ಲಭ್ಯತೆ ಮತ್ತು ಕನಿಷ್ಠ ಬೆಂಬಲ ಬೆಲೆ ಗಳ ಪೈಪೋಟಿಯಿದ್ದಾಗ ಮಾತ್ರ ಖಾಸಗಿ ವ್ಯಾಪಾರಿಗಳಿಂದಲೂ ರೈತರಿಗೆ ಒಳ್ಳೆಯ ಬೆಲೆ ಸಿಗುತ್ತದೆ.

ಕೃಷಿ ಸೆನ್ಸಸ್ 2015–16 ಪ್ರಕಾರ ಒಟ್ಟು ಸಾಗುವಳಿಗಳ ಸಂಖ್ಯೆಯ ಶೇ. 86 ಸಣ್ಣ ಮತ್ತು ಬಡ ರೈತರ ಬಳಿ ಇದೆ. ರೈತರ ಕೆಳ ಹಂತಗಳಲ್ಲಿರುವ ಇವರಿಗೆ ಖಾಸಗಿ ವ್ಯಾಪಾರಿಗಳ ಜತೆಗೂ ಹೆಚ್ಚಿನ ಬೆಲೆಗೆ ಚೌಕಾಸಿ ಮಾಡುವ ಸಾಮಾಜಿಕ-ಆರ್ಥಿಕ ಶಕ್ತಿಯಿಲ್ಲ. ಇನ್ನು ದೈತ್ಯಗಾತ್ರದ ಕೃಷಿ ಕಾರ್ಪೊರೇಟುಗಳು ಕೃಷಿ ವ್ಯಾಪಾರವನ್ನು ಕಬ್ಜಾ ಮಾಡಿದರೆ ಅವರ ಚೌಕಾಸಿ ಮಾಡುವ ಶಕ್ತಿ ಇನ್ನಷ್ಟು ಕುಂದುತ್ತದೆ. ಈ ಮೂರು ಕೃಷಿ ಕಾನೂನುಗಳು ಎ.ಪಿ.ಎಂ.ಸಿ ಗಳನ್ನು ರದ್ದು ಮಾಡುವ ಮೂಲಕ ಕನಿಷ್ಠ ಬೆಂಬಲ ಬೆಲೆಗೆ ತಿಲಾಂಜಲಿ ಕೊಡುತ್ತವೆ. ದೈತ್ಯಗಾತ್ರದ ಕೃಷಿ ಕಾರ್ಪೊರೇಟುಗಳು ಕೃಷಿ ವ್ಯಾಪಾರವನ್ನು ಕಬ್ಜಾ ಮಾಡುತ್ತವೆ. ಇದು ದೊಡ್ಡ ಸಂಖ್ಯೆಯ ಸಣ್ಣ ಮತ್ತು ಬಡ ರೈತರಿಗೆ 'ಮರಣಶಾಸನ' ಆಗಲಿದೆ ಎಂಬ ಅವರ ಆತಂಕ ವಾಸ್ತವವಾದದ್ದು. ಅವರ ಆತಂಕ ರಾಜಕೀಯ ಪಕ್ಷಗಳ ಮತ್ತು ನಾಯಕರ 'ಪ್ರಚೋದನೆ' ಅಥವಾ 'ದಾರಿ ತಪ್ಪಿಸುವ' ಕ್ರಮಗಳ ಫಲವಲ್ಲ. ಶೇ. 86 ರೈತರ ತಮ್ಮದೇ ಜೀವನಾನುಭವದಿಂದ ಹುಟ್ಟಿದ ಆತಂಕ.



"ಮೊದಲು, ನೀವು ನಮ್ಮ ಮನದ ಮಾತು ಕೇಳಿ!
ಕೃಪೆ: ಸುಭಾನಿ, ಡೆಕ್ಕನ್ ಕ್ರಾನಿಕಲ್








ಮೂರು ಕೃಷಿ ಕಾಯ್ದೆಗಳು ಮತ್ತು ನಾಲ್ಕು ಕಾರ್ಮಿಕ ಸಂಹಿತೆಗಳು

ಮುಂದಿದೆ ಒಂದು ದೀರ್ಘ ಹೋರಾಟ


ಕೃಪೆ: ಪಿ.ಮಹಮ್ಮದ್

ಪ್ರಕಾಶ ಕಾರಟ್

ಮೂರು ಕಾಯ್ದೆಗಳು ಮತ್ತು ಒಂದು ಮಸೂದೆಯ ವಿರುದ್ಧ ರೈತರ ಹೋರಾಟಕ್ಕೆ ವಿವಿಧ ಜನವಿಭಾಗಗಳ ನಡುವೆ ವ್ಯಾಪಕ ಬೆಂಬಲ ವ್ಯಕ್ತವಾಗಿರುವುದರ ಹಿಂದೆ ವರ್ಗವಿಭಜನೆಯ ಪ್ರಶ್ನೆಯಿದೆ. ಮೋದಿ ಸರಕಾರ ತನ್ನ ನಗ್ನ ಕಾರ್ಪೊರೇಟ್–ಪರ ನಿಲುವಿನಿಂದಾಗಿ ಒಂಟಿಯಾಗಿ ಬಿಟ್ಟಿದೆ. ಶ್ರೀಮಂತ ರೈತರೂ ಹೋರಾಟದಲ್ಲಿ ಸೇರಿಕೊಂಡಿದ್ದಾರೆ. ಬಂಡವಾಳಶಾಹಿ ರೈತರ ನಡುವೆಯೂ ವಿಭಜನೆಯಾಗಿದೆ. ಇನ್ನೊಂದೆಡೆಯಲ್ಲಿ ರೈತಾಪಿಗಳ ಮತ್ತು ಕಾರ್ಮಿಕರ ಹಿತಾಸಕ್ತಿಗಳು ಬೆಸೆದುಕೊಳ್ಳುತ್ತಿವೆ. ತನ್ನ ಕಾರ್ಪೊರೇಟ್–ಪರ ಕ್ರಮಗಳನ್ನು ಹಿಂತೆಗೆದುಕೊಳ್ಳುವದಿಲ್ಲ ಎಂದು ಮೋದಿ ಸರಕಾರ ಸೂಚಿಸಿದೆ. ಒಂದು ದೀರ್ಘ ಹೋರಾಟ ಮುಂದಿದೆ.

ರೈತರ ಸಂಘಟನೆಗಳು ಕರೆ ನೀಡಿದ ಡಿಸೆಂಬರ್ 8ರ ಭಾರತ್ ಬಂದ್‌ನ ದೊಡ್ಡ ಯಶಸ್ಸು ರೈತರ ಹೋರಾಟಕ್ಕೆ ಜನಗಳ ಬೆಂಬಲ ಮತ್ತು ಸಹಾನುಭೂತಿಯ ಒಂದು ಪ್ರದರ್ಶನ ನೀಡಿದೆ.

ಹಲವು ಸ್ಥಳಗಳಲ್ಲಿ ಬಂದ್ ಕರೆಗೆ ಸ್ವಯಂಸ್ಫೂರ್ತಿಯಿಂದಲೇ ಜನರು ಸ್ಪಂದಿಸಿದ್ದಾರೆ, ಹಲವಾರು ಸಂಘಟನೆಗಳು ಮತ್ತು ಸಮಾಜದ ವಿಭಿನ್ನ ಜನವಿಭಾಗಗಳು, ಕಾರ್ಮಿಕ ಸಂಘಟನೆಗಳು, ವ್ಯಾಪಾರಸ್ಥರ ಸಂಘಟನೆಗಳು, ಸಾರಿಗೆ ಸಂಘಗಳು, ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಮಹಿಳಾ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿವೆ. ಇವೆಲ್ಲವೂ ಈ ಪ್ರಶ್ನೆಯಲ್ಲಿ ಮೋದಿ ಸರಕಾರ ಒಬ್ಬಂಟಿಯಾಗಿ ಬಿಟ್ಟಿರುವುದನ್ನು ಸೂಚಿಸುತ್ತವೆ. ಸುಮಾರಾಗಿ ಎಲ್ಲ ಬಿಜೆಪಿಯೇತರ ರಾಜಕೀಯ ಪಕ್ಷಗಳೂ ಈ ಪ್ರತಿಭಟನಾ ಕಾರ್ಯಾಚರಣೆಗೆ ಬೆಂಬಲ ವ್ಯಕ್ತಪಡಿಸಿರುವುದು ಕೂಡ ಮಹತ್ವಪೂರ್ಣ ಸಂಗತಿ. ನಿರ್ದಿಷ್ಟವಾಗಿ ಇದುವರೆಗೂ ಕೇಂದ್ರದ ಬಿಜೆಪಿ ಸರಕಾರದ ವಿರುದ್ಧ ಅದರ ಯಾವ ಮಹತ್ವದ ಧೋರಣಾ ಕ್ರಮದ ವಿರುದ್ಧವೂ ದೃಢವಾದ ನಿಲುವು ತೆಗೆದುಕೊಳ್ಳ ಬಯಸದ ಪ್ರಾದೇಶಿಕ ಆಳುವ ಪಕ್ಷಗಳೂ ತಳೆದಿರುವ ನಿಲುವು ಗಮನಾರ್ಹ. ತೆಲಂಗಾಣದಲ್ಲಿ ಟಿ.ಆರ್.ಎಸ್. ಬಂದ್‌ನ್ನು ಯಶಸ್ವಿಗೊಳಿಸಲು ಸಕ್ರಿಯವಾಗಿ ಕೆಲಸ ಮಾಡಿತು. ಆಂಧ್ರಪ್ರದೇಶದ ವೈಎಸ್‌ಆರ್‌ಸಿಪಿಯ ಸರಕಾರ ರೈತರ ಆಶಯಗಳನ್ನು ಗೌರವಿಸಿ ಮಧ್ಯಾಹ್ನ 1 ಗಂಟೆಯ ವರೆಗೆ ಎಲ್ಲ ಸರಕಾರೀ ಕಚೇರಿಗಳು, ಸಾರ್ವಜನಿಕ ಸಾರಿಗೆ ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಮುಚ್ಚಿತು. ಒಡಿಶಾದಲ್ಲೂ, ಬಿಜೆಡಿ ಬಂದ್‌ನ್ನು ಬೆಂಬಲಿಸದಿದ್ದರೂ, ರೈತರ ಬೇಡಿಕೆಗಳಿಗೆ ಬೆಂಬಲ ವ್ಯಕ್ತಪಡಿಸಿತು ಮತ್ತು ಸರಕಾರೀ ಕಚೇರಿಗಳು ಮುಚ್ಚಿದ್ದವು.

ವಿವಿಧ ರಾಜಕೀಯ ಬಣ್ಣಗಳನ್ನೆಲ್ಲ ಮೀರಿದ ಈ ವ್ಯಾಪಕವಾದ ಬೆಂಬಲದ ಹಿಂದೆ ಇರುವುದು ವರ್ಗ ವಿಭಜನೆ. ಕಾರ್ಪೊರೇಟ್–ಪರ ಕೃಷಿ ಕಾಯ್ದೆಗಳು ಒಂದೆಡೆಯಲ್ಲಿ ದೊಡ್ಡ ಬಂಡವಳಿಗರು ಮತ್ತು ಇನ್ನೊಂದೆಡೆಯಲ್ಲಿ ಶ್ರೀಮಂತ ರೈತರೂ ಕೂಡ ಸೇರಿದಂತೆ ಸಮಸ್ತ ರೈತಾಪಿ ಜನಗಳು, ಇವರ ನಡುವೆ ಒಂದು ತಿಕ್ಕಾಟವನ್ನು ಸೃಷ್ಟಿಸಿದೆ. ಬಂಡವಾಳಶಾಹಿ ರೈತರ ನಡುವೆಯೂ ಒಂದು ವಿಭಜನೆಯಿದೆ. ಪ್ರಾದೇಶಿಕ ಪಕ್ಷಗಳಿಂದ ಸುಮಾರಾಗಿ ಸರ್ವಸಮ್ಮತವೇ ಎನ್ನಬಹುದಾದ ಬೆಂಬಲ ಏಕೆ ಸಿಗುತ್ತಿದೆ ಎಂಬುದನ್ನು ಇದು ವಿವರಿಸುತ್ತದೆ.

ಈಗ ಮೂಡಿಬರುತ್ತಿರುವ ಇನ್ನೊಂದು ವರ್ಗ ಆಯಾಮವೆಂದರೆ, ರೈತಾಪಿಗಳು ಮತ್ತು ಕಾರ್ಮಿಕರ ಹಿತಾಸಕ್ತಿಗಳು ಒಂದುಗೂಡುತ್ತಿರುವುದು. ಕಳೆದ ಸಂಸದ್ ಅಧಿವೇಶನದಲ್ಲಿ ಮೂರು ಕೃಷಿ ಕಾಯ್ದೆಗಳನ್ನು ಮತ್ತು ಮೂರು ಕಾರ್ಮಿಕ ಶಾಸನಗಳನ್ನು ಒಂದರ ಹಿಂದೆ ಒಂದರಂತೆ ಅಂಗೀಕರಿಸಿರುವುದು ಮೋದಿ ಸರಕಾರದ ನಗ್ನ ಕಾರ್ಪೊರೇಟ್–ಪರ ನಿಲುವಿಗೆ ಉದಾಹರಣೆಯಾಗಿದೆ. ಕಾರ್ಮಿಕರೂ ಮತ್ತು ರೈತರೂ ಈ ಅವಳಿ ದಾಳಿಗಳನ್ನು ಎದುರಿಸಲು ಒಂದಾಗುತ್ತಿದ್ದಾರೆ.

ಮೋದಿ ಸರಕಾರ ಈ ಮೂರು ಕೃಷಿ ಕಾಯ್ದೆಗಳನ್ನು ಮೊದಲಿಗೆ ಜೂನ್ ತಿಂಗಳಲ್ಲಿ ಸುಗ್ರೀವಾಜ್ಞೆಗಳಾಗಿ ತಂದಿತು. ನಂತರ ಇವನ್ನು ಸಪ್ಟಂಬರ್‌ನಲ್ಲಿ ವಿಧೇಯಕಗಳಾಗಿ ಸಂಸತ್ತಿನಲ್ಲಿ ಮಂಡಿಸಿತು, ಮತ್ತು ಎಲ್ಲ ಸಂಸದೀಯ ನೀತಿ–ನಿಯಮಗಳನ್ನು ಗಾಳಿಗೆ ತೂರಿ ಪಾಸು ಮಾಡಿಸಿಕೊಂಡಿತು.

ಸರಕಾರ ಈ ಸುಗ್ರೀವಾಜ್ಞೆಗಳನ್ನು ತಂದಾಗಲೇ ತನ್ನ ಆಶಯವನ್ನು ಸ್ಪಷ್ಟಗೊಳಿಸಿತ್ತು. ಉದಾಹರಣೆಗೆ, ಆವಶ್ಯಕ ಸರಕುಗಳ ಕಾಯ್ದೆಗೆ ತಿದ್ದುಪಡಿಗಳು ಎಲ್ಲ ಕೃಷಿ ಉತ್ಪನ್ನಗಳನ್ನು ಆವಶ್ಯಕ ಸರಕುಗಳ ಪಟ್ಟಿಯಿಂದ ತೆಗೆದಿರುವುದನ್ನು "ಉತ್ಪಾದಿಸುವ, ಇಟ್ಟುಕೊಳ್ಳುವ, ತೆಗೆಯುವ, ಹಂಚುವ ಮತ್ತು ಪೂರೈಸುವ ಸ್ವಾತಂತ್ರ್ಯವು ಪ್ರಮಾಣ ಹೆಚ್ಚುವುದರಿಂದ ಉಂಟಾಗುವ ಉಳಿತಾಯದ ಪ್ರಯೋಜನ ಪಡೆಯಲು ದಾರಿ ಮಾಡಿ ಕೊಡುತ್ತದೆ ಮತ್ತು ಕೃಷಿ ವಲಯಕ್ಕೆ ಖಾಸಗಿ ವಲಯದ / ವಿದೇಶಗಳ ನೇರ ಹೂಡಿಕೆಗಳನ್ನು ಆಕರ್ಷಿಸುತ್ತದೆ " ಎಂದು ವಿವರಣೆ ಕೊಡಲಾಯಿತು.

ಈ ಮೂರು ಕಾಯ್ದೆಗಳು ಒಟ್ಟಾಗಿ, ಕೃಷಿ ಮಾರುಕಟ್ಟೆಗಳನ್ನು ನಿಯಂತ್ರಣ–ಮುಕ್ತಗೊಳಿಸುವ, ರಾಜ್ಯ ಸರಕಾರಗಳ ಹತೋಟಿಗಳನ್ನು ತೆಗೆದು ಹಾಕಿ ಧೋರಣೆಯನ್ನು ಕೇಂದ್ರೀಕರಿಸಿ ಕಾರ್ಪೊರೇಟ್ ಕೃಷಿ ವ್ಯಾಪಾರ ಮತ್ತು ದೊಡ್ಡ ವ್ಯಾಪಾರಸ್ಥರುಗಳ ಪ್ರವೇಶಕ್ಕೆ ಅನುಕೂಲ ಕಲ್ಪಿಸಿಕೊಡುವ ಕೆಲಸ ಮಾಡುತ್ತವೆ.

ಆರಂಭದಿಂದಲೇ ರೈತರು ಈ ಸುಗ್ರೀವಾಜ್ಞೆ ಒಡ್ಡಿರುವ ಬೆದರಿಕೆಯನ್ನು ಅರ್ಥಮಾಡಿಕೊಂಡರು. ಜುಲೈ ತಿಂಗಳಲ್ಲೇ ಈ ಮೂರು ಕಾಯ್ದೆಗಳ ವಿರುದ್ಧ ಚಳುವಳಿ ಆರಂಭವಾಯಿತು. ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ ಕಾರ್ಮಿಕ ಸಂಘಗಳ ಬೆಂಬಲದೊಂದಿಗೆ ಆಗಸ್ಟ್ 5ರಂದು ಜೈಲ್ ಭರೋಗೆ ಕರೆ ನೀಡಿತು. 25 ರಾಜ್ಯಗಳಲ್ಲಿ 600 ಜಿಲ್ಲೆಗಳಲ್ಲಿ ಲಕ್ಷಾಂತರ ಜನ ಇದರಲ್ಲಿ ಭಾಗವಹಿಸಿದರು. ಪಂಜಾಬಿನಲ್ಲಿ ರೈಲ್ ರೋಕೋ ಅಕ್ಟೋಬರ್ 1 ರಿಂದ ಆರಂಭವಾಯಿತು. ಸಂಯುಕ್ತ ಕಿಸಾನ್ ಮೋರ್ಚಾ ಕರೆಯಂತೆ ದಿಲ್ಲಿ ಚಲೋ ನವಂಬರ್ 26ರಂದು, ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಸಾರ್ವತ್ರಿಕ ಮುಷ್ಕರ ನಡೆಸಿದ ದಿನ ಆರಂಭವಾಯಿತು.

ದಿಲ್ಲಿಯ ಗಡಿಗಳಲ್ಲಿ ಬೃಹತ್ ಪ್ರತಿಭಟನಾ ಕಾರ್ಯಾಚರಣೆಗಳನ್ನು ಕಂಡ ಕೇಂದ್ರ ಸರಕಾರ ಕಿಸಾನ್ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಮಾತುಕತೆ ಆರಂಭಿಸಿತು. ಮೂರು ಸುತ್ತುಗಳ ಮಾತುಕತೆಯ ನಂತರ ಸರಕಾರ ಈ ಮೂರು ಕಾಯ್ದೆಗಳನ್ನು ಮತ್ತು ವಿದ್ಯುತ್ ಮಸೂದೆಯನ್ನು ರದ್ದುಗೊಳಿಸುವುದಿಲ್ಲ ಎಂದು ಸ್ಪಷ್ಟವಾಯಿತು.

ಪ್ರಧಾನ ಮಂತ್ರಿ ಮೋದಿ ಪ್ರತಿಪಕ್ಷಗಳು ಪ್ರತಿಭಟನೆಗಳನ್ನು ಪ್ರಚೋದಿಸುತ್ತಿವೆ, ರೈತರನ್ನು ದಾರಿ ತಪ್ಪಿಸುತ್ತಿವೆ ಎಂದು ಆಪಾದಿಸಿದ್ದಾರೆ. ಕಳೆದ ಶತಮಾನದ ಕಾನೂನುಗಳು ಹಳೆಯದಾಗಿ ಬಿಟ್ಟಿವೆ, ಪ್ರಸಕ್ತ ಶತಮಾನವನ್ನು ಕಟ್ಟಲು ಅವನ್ನು ಉಪಯೋಗಿಸಲು ಸಾಧ್ಯವಾಗದು ಎಂದು ಹೇಳಿದ್ದಾರೆ.

ಈ ಕಾರ್ಪೊರೇಟ್–ಪರ ಕ್ರಮಗಳನ್ನು ಹಿಂದಕ್ಕೆ ಸರಿಸುವುದಿಲ್ಲ ಎಂದು ಸರಕಾರ ಸೂಚಿಸುತ್ತಿದೆ. ಕಾರ್ಪೊರೇಟ್ ಮಾಧ್ಯಮಗಳು ದೊಡ್ಡ ಬಂಡವಳಿಗರ ವರ್ಗ ಹಿತಗಳನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸುತ್ತಿವೆ, ಸರಕಾರ ದೃಢವಾಗಿ ನಿಲ್ಲಬೇಕು, ರೈತರ ಬೇಡಿಕೆಗಳನ್ನು ತಿರಸ್ಕರಿಸಬೇಕು ಎಂದು ಆಗ್ರಹಿಸುತ್ತಿವೆ. ಡಿಸೆಂಬರ್ 9ರ ಟೈಂಸ್ ಆಫ್ ಇಂಡಿಯಾ ಸಂಪಾದಕೀಯ ಇದನ್ನು ಬಿಂಬಿಸಿದೆ. "ಸರಕಾರ ಪ್ರತಿಭಟನಾಕಾರರ ಒತ್ತಡದಿಂದ ಎಂಎಸ್‌ಪಿ ಅಥವ ಕೃಷಿ ಕಾಯ್ದೆಗಳ ವಿಷಯದಲ್ಲಿ ರಾಜಿ ಮಾಡಿಕೊಂಡರೆ, ಭಾರತದಲ್ಲಿ ಯಾವುದೇ ಸುಧಾರಣಾ ಪ್ರಯತ್ನವನ್ನು ಯಾವುದೋ ಹಿತಾಸಕ್ತ ಗುಂಪಿನ ವಿರೋಧದಿಂದ ಮತ್ತು ರಾಷ್ಟ್ರೀಯ ರಾಜಧಾನಿಗೆ ಮುತ್ತಿಗೆ ಹಾಕುವುದರಿಂದ ಬುಡಮೇಲು ಮಾಡಬಹುದು ಎಂಬ ಸಂಕೇತ ನೀಡಿದಂತಾಗುತ್ತದೆ" ಎಂದು ಅದು ಹೇಳಿದೆ.

ಮಾತುಕತೆಗಳು ವಿಫಲವಾಗಿರುವುದರಿಂದ ರೈತ ಸಂಘಟನೆಗಳ ಐಕ್ಯ ವೇದಿಕೆಯ ಮುಂದೆ ಹೋರಾಟವನ್ನು ಮುಂದುವರೆಸುವುದನ್ನು ಬಿಟ್ಟು ಬೇರೆ ಆಯ್ಕೆ ಇಲ್ಲವಾಗಿದೆ. ಸರಕಾರದ ಲಿಖಿತ ಪ್ರಸ್ತಾವಗಳನ್ನು ತಿರಸ್ಕರಿಸಿ ಹೋರಾಟವನ್ನು ತೀವ್ರಗೊಳಿಸುವ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಅವರು ಪ್ರದರ್ಶಿಸಿರುವ ಭವ್ಯ ಐಕ್ಯತೆಯನ್ನು ಬಲಪಡಿಸಬೇಕಾಗಿದೆ. ಇದು ಮಹತ್ವದ್ದು, ಏಕೆಂದರೆ ಸರಕಾರ ಚಳುವಳಿಯನ್ನು ವಿಭಜಿಸಲು ಪ್ರಯತ್ನ ಮಾಡುತ್ತದೆ.

ರೈತರ ಈ ಜೀವನ್ಮರಣ ಹೋರಾಟದ ಬೆನ್ನಿಗೆ ನಿಲ್ಲಬೇಕಾಗಿದೆ, ದುಡಿಯುವ ಜನಗಳ ಎಲ್ಲ ವಿಭಾಗಗಳ ಸೌಹಾರ್ದ ಮತ್ತು ಬೆಂಬಲದಿಂದ ಅದನ್ನು ಬಲಪಡಿಸಬೇಕಾಗಿದೆ. ಕಾರ್ಮಿಕ ಆಂದೋಲನ ಇದನ್ನು ಬೆಂಬಲಿಸುವುದು ಮಾತ್ರವೇ ಅಲ್ಲ, ಕೃಷಿ ಕಾಯ್ದೆಗಳು ಮತ್ತು ಕಾರ್ಮಿಕ ಕಾನೂನುಗಳ ವಿರುದ್ಧ ಅವಳಿ ಹೋರಾಟಗಳನ್ನು ಒಟ್ಟಿಗೆ ತಂದು ಒಂದು ಐಕ್ಯ ಹೋರಾಟವನ್ನು ಕಟ್ಟುವ ಹೊಣೆಯೂ ಅದರ ಮೇಲಿದೆ.


ಕೃಪೆ: ಇರ್ಫಾನ್, ನ್ಯೂಸ್‌ಕ್ಲಿಕ್





ಯಾಮಾರಿಸುವ ರಾಜಕಾರಣ ಮತ್ತು ಕಾರ್ಪೋರೇಟ್ ಕೃಷಿ ಕಾಯ್ದೆಗಳು

ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ಮತ್ತು ಮುಖ್ಯಮಂತ್ರಿಗಳಾದ ಯಡಿಯೂರಪ್ಪರವರು, ದೇಶದ ಹಾಗೂ ರಾಜ್ಯದ ಜನತೆಯನ್ನು ತಮ್ಮ ದಿಕ್ಕು ತಪ್ಪಿಸುವ ಹೇಳಿಕೆಗಳ ಮೂಲಕ ಯಾಮಾರಿಸುತ್ತಿದ್ದಾರೆ ಎಂಬುದನ್ನು ರೈತ ಸಂಘಗಳು ಹೇಳುತ್ತಿವೆ. ರೈತರ ಹಿತರಕ್ಷಣೆ ಅವರ ಉದ್ಯೋಗವನ್ನು ಮತ್ತು ಉದ್ಯೋಗದ ಆಧಾರವಾದ ಜಮೀನನ್ನು ರಕ್ಷಿಸುವ ಮೂಲಕ ಸಾಧ್ಯವೋ ಅಥವಾ ಯಾರು ಬೇಕಾದರೂ ಜಮೀನು ಖರೀದಿಸಲು, ಹೇಗೆ ಬೇಕಾದರೂ ಖರೀದಿಸಲು ಅವಕಾಶ ನೀಡುವ ಮೂಲಕವೋ ಎಂಬ ಪ್ರಶ್ನೆಯನ್ನು ಎಸೆಯುವ ಮೂಲಕ ರೈತ ಸಂಘಗಳು ಯಾಮಾರಿಸುವಿಕೆಯನ್ನು ಬಯಲುಗೊಳಿಸುತ್ತಿವೆ.

ಯು. ಬಸವರಾಜ್

ದೇಶದಾದ್ಯಂತ ಕೋಟ್ಯಾಂತರ ರೈತರು, ಇತರೆ ಕೃಷಿಕರು, ಕಾರ್ಮಿಕರು, ಸಣ್ಣ ವ್ಯಾಪಾರಿಗಳು, ವರ್ತಕರ ಸಂಘಟನೆಗಳು, ಸಾರಿಗೆ ಸಂಘಟನೆಗಳು, ನಾಗರೀಕರು, ಸುಮಾರು 25 ಕ್ಕು ಹೆಚ್ಚು ರಾಜಕೀಯ ಪಕ್ಷಗಳು, ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಪರವಾದ ಕೃಷಿ ಕಾಯ್ದೆಗಳು ಮತ್ತು ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ– 2020 ಮತ್ತು ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆ – 2020 ಇವುಗಳನ್ನು ಕೇಂದ್ರ ಸರಕಾರ ವಾಪಾಸು ಪಡೆಯಲೇ ಬೇಕೆಂದು ಒತ್ತಾಯಿಸಿ, ಡಿಸೆಂಬರ್ 8, 2020 ರಂದು ಭಾರತ ಬಂದ್ ಸಂಘಟಿಸಿದವು. ಇದು ಸ್ವತಂತ್ರ ಭಾರತದ ಇತಿಹಾಸದಲ್ಲಿಯೇ ಅತಿ ಹೆಚ್ಚು ಜನ ಸಮುದಾಯಗಳು ಭಾಗ ವಹಿಸಿ ಅಭೂತ ಪೂರ್ವವಾಗಿ ಯಶಸ್ವಿಗೊಳಿಸಿದ ಐತಿಹಾಸಿಕ ಬಂದ್ ಆಗಿತ್ತು. ಕರ್ನಾಟಕ ದಲ್ಲಿಯೂ, ಕೇಂದ್ರದ ಕಾಯ್ದೆಗಳ ಜೊತೆ, ಕರ್ನಾಟಕ ಸರಕಾರ ಲೂಟಿಕೋರ ಕಾರ್ಪೋರೇಟ್ ಕೃಷಿಗೆ ನೆರವಾಗುವ ಭೂ ಸುಧಾರಣೆ (ಎರಡನೆ ತಿದ್ದುಪಡಿ) ಸುಗ್ರೀವಾಜ್ಞೆ – 2020 ಹಾಗೂ ಎಪಿಎಂಸಿ ತಿದ್ದುಪಡಿ ಸುಗ್ರೀವಾಜ್ಞೆ – 2020 ಇವುಗಳನ್ನು ವಾಪಾಸು ಪಡೆಯಬೇಕು ಮತ್ತು ವಿಧಾನ ಮಂಡಲದ ಅಧಿವೇಶನಗಳಲ್ಲಿ ಮಸೂದೆಗಳಾಗಿ ಮಂಡಿಸಬಾರದೆಂದು ಒತ್ತಾಯಿಸಿ ಕರ್ನಾಟಕ ಬಂದ್ ನಡೆಸಲಾಯಿತು. ಇದಕ್ಕೂ ರಾಜ್ಯದಾದ್ಯಂತ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಸದರಿ ಸುಗ್ರೀವಾಜ್ಞೆಗಳನ್ನು ವಾಪಾಸು ಪಡೆಯಲು ಹಾಗೂ ಮಸೂದೆಗಳಾಗಿ ಕಳೆದ ವಿಧಾನ ಮಂಡಲದ ಅಧಿವೇಶನಗಳಲ್ಲಿ ಮಂಡಿಸ ಬಾರದೆಂದು ಒತ್ತಾಯಿಸಿ, ಸೆಪ್ಟಂಬರ್ 29 ರಂದು ಅದಾಗಲೇ ಕರ್ನಾಟಕ ಬಂದ್ ಸಂಘಟಿಸಲಾಗಿತ್ತು.

ಕರ್ನಾಟಕದ ರೈತ–ವಿರೋಧಿ ಕೃಷಿ ಕಾಯಿದೆಗಳು

ಆಗ, ರಾಜ್ಯ ಸರಕಾರ ಅದೇ ದಿನ ರೈತ ಮುಖಂಡರೊಂದಿಗೆ ಮಾತುಕತೆ ನಡೆಸಿ, ಭೂ ಸುಧಾರಣಾ ಮಸೂದೆ– 2020 ರಲ್ಲಿ ಮುಖ್ಯವಾಗಿ, ದಲಿತರಿಗೆ ನೀಡಲಾದ ಜಮೀನುಗಳನ್ನು 15 ವರ್ಷಗಳ ಅವಧಿಯವರೆಗೆ ಯಾರು ಖರೀದಿಸದಂತಹ ನಿರ್ಬಂಧವನ್ನು ಹಾಗೆಯೇ ಉಳಿಸುವುದಾಗಿ ಮತ್ತು 10 ಸದಸ್ಯರಿರುವ ಕುಟುಂಬವೊಂದು ಗರಿಷ್ಠ 40 ಯುನಿಟ್ ಅಂದರೇ 216 ಎಕರೆ ಮಳೆ ಆಧಾರಿತ ಜಮೀನು ಹೊಂದಲು ಅವಕಾಶ ನೀಡುವ ಅಂಶವನ್ನು ಕೈ ಬಿಡುವುದಾಗಿ ಮತ್ತು ಈ ಮುಂಚಿನಂತೆ 20 ಯುನಿಟ್ ಜಮೀನು ಅಂದರೇ 108 ಎಕರೆ ಮಳೆ ಆಧಾರಿತ ಜಮೀನು ಹೊಂದುವುದನ್ನೆ ಮುಂದು ವರೆಸುವುದಾಗಿ ಹೇಳಿತ್ತು.



ರೈತ ಸಂಘಟನೆಗಳು ಆ ಪ್ರಸ್ತಾಪಗಳನ್ನು ಸಮ್ಮತಿಸಿದರೂ, ಅಷ್ಟು ಮಾತ್ರದಿಂದಲೇ, ಕಾರ್ಪೋರೇಟ್ ಕಂಪನಿಗಳ ದಾಳಿಯಿಂದ. ರೈತರ ಹಾಗೂ ವ್ಯವಸಾಯದ ಹಿತ ರಕ್ಷಣೆ ಸಾಧ್ಯವಿಲ್ಲವೆಂದು, ಒಟ್ಟು ಎರಡೂ ತಿದ್ದುಪಡಿ ಮಸೂದೆಗಳನ್ನು ಇಡೀಯಾಗಿ ವಾಪಾಸು ಪಡೆಯಲು ಒತ್ತಾಯಿಸಿ ಮಾತುಕತೆಯಿಂದ ಹೊರ ನಡೆದಿದ್ದವು. ಕಳೆದ ವಿಧಾನ ಮಂಡಲದ ಅಧಿವೇಶನಗಳಲ್ಲಿ ಮುಖ್ಯವಾಗಿ, ವಿಧಾನ ಸಭೆಯಲ್ಲಿ ಈ ಎರಡೂ ಮಸೂದೆಗಳಿಗೆ ಒಪ್ಪಿಗೆಯನ್ನು ಪಡೆದಿದ್ದ ರಾಜ್ಯ ಸರಕಾರ, ವಿಧಾನ ಪರಿಷತ್ತಿನಲ್ಲಿನ ವಿರೋದದಿಂದಾಗಿ ಮಸೂದೆ ಬಿದ್ದು ಹೋಗುವ ಹೆದರಿಕೆಯಿಂದ, ಅಲ್ಲಿ ಈ ಮಸೂದೆಗಳನ್ನು ಮಂಡಿಸುವ ಯೋಚನೆಯನ್ನೆ ಕೈ ಬಿಟ್ಟಿತ್ತು. ಆ ಮಟ್ಟಿಗೆ ಕರ್ನಾಟಕದ ಜನತೆಯ ಹೋರಾಟಕ್ಕೆ ಆಗ ಜಯ ದೊರೆಕಿತ್ತು.

ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರಗಳ ವಿಧಾನ ಪರಿಷತ್ ಚುನಾವಣೆಯು ಮುಗಿಯುತಿದ್ದಂತೆಯೆ, ಜನಾಭಿಪ್ರಾಯಕ್ಕೆ ವಿರುದ್ಧವಾಗಿ ಅಕ್ಟೋಬರ್ 01 ರಂದು ನಡೆದ ಮಂತ್ರಿಮಂಡಲದ ಸಭೆಯಲ್ಲಿ ಮರಳಿ ಸುಗ್ರೀವಾಜ್ಞೆ ಗಳಿಗೆ ಕ್ರಮ ವಹಿಸಿ ಗೆಜೆಟ್ ನಲ್ಲಿ ಪ್ರಕಟಿಸಿತು.

ಕೇಂದ್ರ ಸರಕಾರ ದೇಶವ್ಯಾಪ್ತಿಯಾಗಿ ನಡೆಯುತ್ತಿರುವ 500 ಕ್ಕೂ ಅಧಿಕ ರೈತ ಸಂಘಟನೆಗಳು ನಡೆಸುತ್ತಿರುವ ನಿರಂತರ ರೈತ ಚಳುವಳಿಯ ಹಿನ್ನೆಲೆಯಲ್ಲಿ, ಕೇಂದ್ರದ ಕೃಷಿ ಕಾಯ್ದೆಗಳ ಸಂಬಂಧ ಹಲವು ಸುತ್ತಿನ ಮಾತುಕತೆಗಳನ್ನು ನಡೆಸುತ್ತಿದೆ.

ಪರಿಸ್ಥಿತಿ ಹೀಗಿರುವಾಗ, ಕರ್ನಾಟಕ ಸರಕಾರ ಭಾರತ ಬಂದ್ ದಿನವೇ, ರೈತಾಪಿ ಜನತೆ ಹೋರಾಟದ ಕಣದಲ್ಲಿರುವಾಗಲೇ ಈ ಮಸೂದೆಗಳನ್ನು ವಿಧಾನ ಪರಿಷತ್ತಿನಲ್ಲಿ ಮಂಡಿಸಿ ಕಾರ್ಪೋರೇಟ್ ಗುಲಾಮಗಿರಿಗೆ ತಾನು ಬದ್ಧವೆಂದು ಸಾಬೀತು ಮಾಡಿಕೊಂಡಿದೆ.

ಸಾವಿರಾರು ವರ್ಷಗಳಿಂದ ಉಳುಮೆಯಲ್ಲಿಯೇ ಬದುಕನ್ನು ಕಂಡುಕೊಂಡು, ದೇಶಕ್ಕೆ ಅನ್ನವನ್ನು ಬೆಳೆದುಕೊಡುತ್ತಿದ್ದ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳಿಗೆ ಕೃಷಿ ಉತ್ಪನ್ನಗಳನ್ನು ಒದಗಿಸುತ್ತಿದ್ದ ಬಹುತೇಕ ಅನ್ನದಾತನೆಂದೆ ಕರೆಯಲ್ಪಡುತ್ತಿದ್ದ ರೈತನಿಗೆ, ಬೇಸಾಯದ ಉದ್ಯೋಗ ಭದ್ರತೆ ನೀಡುತ್ತಿದ್ದ ಮೂಲ ಕಾಯ್ದೆಯನ್ನೇ ಬುಡ ಮೇಲು ಮಾಡುವ ಭೂ ಸುಧಾರಣಾ ತಿದ್ದುಪಡಿ ಮಸೂದೆ– 2020 ಯು, ರೈತನನ್ನು ಮಾತ್ರವಲ್ಲಾ ಇತರೇ ಎಲ್ಲ ಕೃಷಿಕರನ್ನು ಬೇಸಾಯದಿಂದ ಹೊರ ಹಾಕುವ ಸಂಚಿನ ಭಾಗವಾಗಿ ರೂಪಿಸಲ್ಪಟ್ಟಿರುವುದರಿಂದ ಇದೊಂದು ಐತಿಹಾಸಿಕ ಪ್ರಮಾದದ ಹೆಜ್ಜೆಯಾಗಿದೆ. ಅಂತಹ ಪ್ರಮಾದಕ್ಕೆ ಶ್ರೀ ಯಡಿಯೂರಪ್ಪನವರ ಸರಕಾರ ಸಾಕ್ಷಿಯಾಗುತ್ತಿದೆ ಎಂದು ವಿದ್ವತ್ ವಲಯದಲ್ಲಿ ಹೇಳಲಾಗುತ್ತಿದೆ.

ಆದರೇ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ತಮ್ಮ ಈ ಕ್ರಮಗಳನ್ನು ರೈತರನ್ನು ರಕ್ಷಿಸಲೆಂದೇ ಮಾಡಲಾದವುಗಳೆಂದು ಸಮರ್ಥಿಸಿಕೊಂಡು ಪ್ರಚುರ ಪಡಿಸುತ್ತಿವೆ. ಮುಖ್ಯವಾಗಿ, ಸೊರಗುತ್ತಿರುವ ವ್ಯವಸಾಯವನ್ನು ಬಲಗೊಳಿಸಲು ಮತ್ತು ಯುವಜನರನ್ನು ವ್ಯವಸಾಯದ ಕಡೆ ಆಕರ್ಷಿಸಲು ಸಹಕಾರಿಯಾಗಲಿದೆಯೆಂದು, ಅವರ ಬೆಳೆಗಳಿಗೆ ಉತ್ತಮ ಬೆಲೆಗಳು ದೊರೆಯಲಿವೆಯೆಂದು ಗಿಳಿಪಾಠಗಳನ್ನು ಒಪ್ಪಿಸುತ್ತಿವೆ. ಮಾಧ್ಯಮಗಳು ಈ ಗಿಳಿಪಾಠವನ್ನೇ ಬಹುತೇಕ ಪ್ರಬಲವಾಗಿ ಪ್ರತಿಪಾದಿಸುತ್ತಿವೆ.

ಇದಕ್ಕೆ ರೈತರು ಹಾಗೂ ರೈತ ಸಂಘಟನೆಗಳು ಏನು ಹೇಳುತ್ತಿವೆ ಎಂಬುದನ್ನು ಇಲ್ಲಿ ಗಮನಿಸುವುದಗತ್ಯವಿದೆ.

ದೇಶದ ರೈತ ಸಂಘಗಳು, ಕೇಂದ್ರ ಹಾಗೂ ರಾಜ್ಯ ಸರಕಾರಗಳು ತಮ್ಮ ಮುಂದೆ, ನಿಜವಾಗಲೂ ರೈತರನ್ನು ಮತ್ತು ಕೃಷಿಯನ್ನು ಉಳಿಸುವ ಉದ್ದೇಶಗಳಿದ್ದರೇ ಮತ್ತು ಕೃಷಿಯೆಡೆಗೆ ಯುವಜನರನ್ನು ಆಕರ್ಷಿಸುವ ಇಚ್ಛೆಗಳಿದ್ದರೇ ಮೊದಲು ನಷ್ಟದಲ್ಲಿ ನಡೆಯುತ್ತಿರುವ ಕೃಷಿಯನ್ನು, ಲಾಭದಾಯಕವಾಗಿ ನಡೆಯುವಂತೆ ಅಗತ್ಯ ಕ್ರಮ ವಹಿಸುವಂತೆ ಮಾಡಲಿ ಎಂದು ಒತ್ತಾಯಿಸುತ್ತಿವೆ.

ಕೃಷಿ ರಂಗದ ಎರಡು ಪ್ರಮುಖ ಸಮಸ್ಯೆಗಳು

ಅವರ ಪ್ರಕಾರ ಹಾಲಿ ಕೃಷಿ ರಂಗವು ಎರಡು ಪ್ರಮುಖ ಸಮಸ್ಯೆಗಳಿಂದ ಬಳಲುತ್ತಿದೆ. ಒಂದು, ಕೃಷಿ ಉತ್ಪನ್ನಗಳನ್ನು ಖರೀದಿಸುವ ಮತ್ತು ವ್ಯವಹರಿಸುವ ದೇಶದ ಮತ್ತು ಅಂತರರಾಷ್ಟ್ರೀಯ ಮಟ್ಟದ ದೊಡ್ಡ ವರ್ತಕರು, ಕೃಷಿ ಉತ್ಪನ್ನಗಳ ಬೆಲೆಗಳನ್ನು ಸುಗ್ಗಿಯ ಸಂದರ್ಭದಲ್ಲಿಯೇ ಕೃತಕವಾಗಿ ಕುಸಿಯುವಂತೆ ಮಾಡುತ್ತಾರೆ ಮತ್ತು ಕೃಷಿ ಉತ್ಪನ್ನಗಳು ಅವರ ಕೈ ಸೇರಿದ ಮೇಲೆ ಹೆಚ್ಚಿನ ಬೆಲೆಗಳಿಗೆ ಮಾರಾಟ ಮಾಡಿ ಎಲ್ಲ ಗ್ರಾಹಕರನ್ನು ಕೊಳ್ಳೆ ಹೊಡೆಯುತ್ತಾರೆ. ಈ ರೀತಿ, ಈ ದೊಡ್ಡ ವ್ಯಾಪಾರಿಗಳು, ಸಗಟು ವರ್ತಕರು, ಈ ಕೃಷಿ ಉತ್ಪನ್ನಗಳ ಬೆಲೆಗಳನ್ನು ತಮಗೆ ಲಾಭದಾಯಕವಾಗುವಂತೆ ಏರಿಳಿಸುವ ಸಾಮಾರ್ಥ್ಯ ವನ್ನು ಹೊಂದಿದ್ದಾರೆ. ಇದನ್ನು ತಪ್ಪಿಸಲು ಹಾಗೂ ರೈತರನ್ನು ಸಂರಕ್ಷಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮುಂದಾಗ ಬೇಕಾಗಿದೆ.

ಕೃಷಿ ಉತ್ಪನ್ನಗಳ ಬೆಲೆಗಳನ್ನು ಸಮರ್ಪಕವಾಗಿ ಮತ್ತು ಸಮಗ್ರವಾಗಿ, ಲಾಭದಾಯಕವಾಗಿ ನಿಗದಿಸಿ ಮತ್ತು ಅವುಗಳನ್ನು ಖಾತರಿಯಾಗಿ ದೊರೆಯುವಂತೆ ಮಾಡಲು ಕಾನೂನಿನ ರಕ್ಷಣೆ ಒದಗಿಸುವಂತೆ ರೈತ ಸಂಘಗಳು ಕೇಳುತ್ತಿವೆ. ಇದನ್ನೇ, ಡಾ. ಎಂಎಸ್ ಸ್ವಾಮಿನಾಥನ್ ನೇತೃತ್ವದ ರಾಷ್ಟ್ರೀಯ ಕೃಷಿ ಆಯೋಗ, ಕೃಷಿ ಉತ್ಪನ್ನಗಳಿಗೆ ಈಗ ಸರಕಾರಗಳಿಂದ ನಿಗದಿಸಲಾಗುತ್ತಿರುವ ಬೆಲೆಗಳು ಉತ್ಪಾದನಾ ವೆಚ್ಚವನ್ನು ಪೂರ್ಣವಾಗಿ ಪರಿಗಣಿಸುತ್ತಿಲ್ಲ ಮತ್ತು ವೆಚ್ಚಕ್ಕೆ ಕನಿಷ್ಠ ಪ್ರಮಾಣದ ಲಾಭಾಂಶವನ್ನು ಸೇರಿಸಿ ಬೆಲೆ ನಿಗದಿಸಲಾಗುತ್ತಿಲ್ಲ. ಆದ್ದರಿಂದ, ರೈತರು ನಷ್ಟಕ್ಕೀಡಾಗುತ್ತಿದ್ದಾರೆಂದು ಮತ್ತು ಅದರಿಂದಾಗಿಯೇ ಯುವಜನತೆ ಲಾಭದಾಯಕವಲ್ಲದ ವ್ಯವಸಾಯದ ಕಡೆ ಆಕರ್ಷಿಸಲ್ಪಡುತ್ತಿಲ್ಲವೆಂಬ ವಿಚಾರಗಳನ್ನು ಕೇಂದ್ರ ಸರಕಾರದ ಗಮನಕ್ಕೆ ತಂದು, ಸರಕಾರ ತನ್ನ ತಪ್ಪು ನಡೆಗಳನ್ನು ಸರಿಪಡಿಸಿಕೊಂಡು ಕೃಷಿ ಉತ್ಪನ್ನಗಳಿಗೆ ಅವುಗಳ ಒಟ್ಟ ಉತ್ಪಾದನಾ ವೆಚ್ಚವನ್ನು ಲೆಕ್ಕ ಹಾಕುವ ವಿಧಾನವನ್ನು ಸರಿಪಡಿಸಲು ಸೂಚಿಸಿದೆ ಮತ್ತು ಅಂತಹ ಸಮರ್ಪಕವಾಗಿ ಗುರುತಿಸಲಾದ ಉತ್ಪಾದನಾ ವೆಚ್ಚಕ್ಕೆ ಅ2 ಎಂದು ಹೆಸರಿಸಿ, ಅದಕ್ಕೆ ಶೇಕಡಾ 50 ರಷ್ಟು ಲಾಭಾಂಶ ಸೇರಿಸಿ, ಬೆಲೆಗಳನ್ನು ನಿಗದಿಸಲು ಮತ್ತು ಅವುಗಳು ಖಾತರಿಯಾಗಿ ರೈತರಿಗೆ ದೊರೆಯುವಂತಾಗಲೂ ಮತ್ತು ದೊಡ್ಡ ವರ್ತಕರು, ಬೆಲೆಗಳನ್ನು ಏರಿಳಿಸಿ, ರೈತರಿಗೆ ನಷ್ಟ ಉಂಟುಮಾಡುವ ತಂತ್ರಗಳಿಂದ ಅವರನ್ನು ಸಂರಕ್ಷಿಸಲು, ಬೆಂಬಲ ಬೆಲೆ ಖಾತರಿ ಕಾಯ್ದೆಯನ್ನು ಜಾರಿಗೊಳಿಸಲು ಹೇಳಿದೆ. ಇದನ್ನು ಮಾಡಿದರೇ ಕೃಷಿ ಉತ್ಪನ್ನಗಳ ಬೆಲೆ ಕುಸಿತದಿಂದ ರೈತರು ರಕ್ಷಿಸಲ್ಪಡುತ್ತಾರೆಂದು ರೈತರು ಮತ್ತು ರೈತ

ಪುಟ 10 ನೋಡಿ



ಯಾಮಾರಿಸುವ ರಾಜಕಾರಣ ಮತ್ತು ಕಾರ್ಪೋರೇಟ್ ಕೃಷಿ ಕಾಯ್ದೆಗಳು....... ಪುಟ 9 ರಿಂದ

ಸಂಘಗಳು ಹೇಳುತ್ತಿವೆ.

ಇನ್ನು ಎರಡನೆಯದಾಗಿ, ವ್ಯವಸಾಯದ ಫಲಿತವು ಬಹುತೇಕ ಪ್ರಕೃತಿಯನ್ನು ಆಧರಿಸಿದೆ. ಬರಗಾಲ, ಪ್ರವಾಹ, ಅತಿಯಾದ ಮಳೆ, ಮೋಡ ಮುಸುಕಿದ ವಾತಾವರಣ,ರೋಗ ಬಾಧೆಗಳು ರೈತರಿಗೆ ನಷ್ಟವನ್ನುಂಟು ಮಾಡುತ್ತವೆ. ಅದೇ ರೀತಿ, ದುಬಾರಿ ಬಡ್ಡಿಯ ಖಾಸಗೀ ಸಾಲ ರೈತರನ್ನು ಬಾಧಿಸುತ್ತದೆ. ಇವುಗಳಿಂದ ರಕ್ಷಣೆ ಪಡೆಯಲು, ರೈತರಿಗೆ ಅಗತ್ಯವಾದಷ್ಟು ಬಡ್ಡಿ ರಹಿತ ಸಾಲವನ್ನು ಸಾರ್ವಜನಿಕ ಬ್ಯಾಂಕುಗಳಿಂದ ಒದಗಿಸಲು ಮತ್ತು ಪ್ರಕೃತಿ ವಿಕೋಪಗಳಿಂದ ನಷ್ಟವಾದ ಎಲ್ಲ ಸಂದರ್ಭಗಳಲ್ಲಿ ಸಾಲ ಮನ್ನಾ ಮಾಡುವಂತಹ, ಸಾರ್ವಜನಿಕ ಸಾಲ ಒದಗಿಸುವ ಮತ್ತು ಋಣ ಮುಕ್ತಿ ನೀಡುವ ಕಾಯ್ದೆಯನ್ನು ಜಾರಿಗೆ ತರುವಂತೆ ರೈತ ಸಂಘಗಳು ಕೇಂದ್ರ ಸರಕಾರವನ್ನು ಒತ್ತಾಯಿಸುತ್ತಿವೆ.

ಇವುಗಳಿಂದ ರೈತರು ಮತ್ತು ವ್ಯವಸಾಯವು ನಷ್ಟವಾಗುವುದನ್ನು ತಪ್ಪಿಸಲು ಮತ್ತು ರೈತರು ಇದರಿಂದಾಗುವ ಲಾಭದಿಂದ ಮತ್ತಷ್ಟು ಉತ್ತೇಜನ ಪಡೆದು ಉತ್ಸಾಹದಿಂದ ಇನ್ನಷ್ಟು ವ್ಯಾಪಕವಾಗಿ ವ್ಯವಸಾಯದಲ್ಲಿ ತೊಡಗಲು ಮತ್ತು ಅವರ ಕುಟುಂಬದ ಯುವಜನರು ಆಕರ್ಷಿತರಾಗಿ ಅದರಲ್ಲಿ ತೊಡಗಲು ಸಾಧ್ಯವಾಗುತ್ತದೆಂಬುದು ರೈತರು ಮತ್ತು ರೈತ ಸಂಘಗಳ ಸ್ಪಷ್ಟ ಅಭಿಪ್ರಾಯವಾಗಿದೆ.

ತಮ್ಮನ್ನು ರಕ್ಷಿಸುವ ಈ ಕಾಯ್ದೆಗಳನ್ನೇಕೆ ಸರಕಾರಗಳು ತರಲು ಒಪ್ಪುತ್ತಿಲ್ಲವೆಂಬ ಮಾರ್ಮಿಕ ಪ್ರಶ್ನೆಯನ್ನು ಅವರು ಮುಂದಿಡುತ್ತಿದ್ದಾರೆ.

ಬಾಣಲೆಯಿಂದ ಬೆಂಕಿಗೆ ದೂಡುವ ತಂತ್ರ :

ರೈತರು, ನಾವು, ದೇಶ, ವಿದೇಶಗಳ ಕೃಷಿ ಉತ್ಪನ್ನ ಖರೀದಿಸುವ ದೊಡ್ಡ ಸಗಟು ವರ್ತಕರು, ಕೃತಕವಾಗಿ ಕೃಷಿ ಉತ್ಪನ್ನಗಳ ಬೆಲೆಗಳನ್ನು ಏರಿಳಿತ ಮಾಡುವ ಅವರ ಅಸ್ತ್ರಗಳಿಂದ ನಮ್ಮನ್ನು ರಕ್ಷಿಸುವಂತೆ ಅಗತ್ಯ ಕ್ರಮ ವಹಿಸಿರೆಂದು ಸರಕಾರಗಳನ್ನು ಕೇಳುತ್ತಿದ್ದರೇ, ಅದನ್ನು ಮರೆ ಮಾಚಲು, ದಲ್ಲಾಳಿ ವರ್ತಕರ ಕಿರಿಕಿರಿಗಳನ್ನು ಮುಂದೆ ಮಾಡಿ ಅವರಿಂದ ರಕ್ಷಿಸಲು ನಿಮ್ಮ ಬಾಗಿಲಿಗೆ ವರ್ತಕರನ್ನು ಕಳುಹಿಸುವುದಾಗಿ ಅವುಗಳು ಹೇಳುತ್ತಿವೆ! ಅಂದರೇ, ಈಗ ಸಾರ್ವಜನಿಕ ಮಾರುಕಟ್ಟೆಯಿಂದ ಈಗ ದೊರೆಯುವ ಕನಿಷ್ಠ ರಕ್ಷಣೆಯೂ ಕೂಡಾ, ಇನ್ನು ಮುಂದೆ ಸಿಗದಂತೆ ಮಾಡುವುದಾಗಿ ಅಪ್ರತ್ಯಕ್ಷವಾಗಿ ಸೂಚಿಸುತ್ತವೆ ಎಂದರ್ಥ.

ಅದು ಸರಿ, ಈ ದಲ್ಲಾಳಿ ವರ್ತಕರಿಂದ ಈ ರೈತರು ಕಿರಿ ಕಿರಿಗೆ ಮತ್ತು ಶೋಷಣೆಗೆ ಒಳಗಾಗುತ್ತಿದ್ದಾರೆಂದು ಒಳ ಹೊಕ್ಕು ನೋಡಲು ಸರಕಾರಗಳು ತಯಾರಿವೆಯೇ? ಅದು ಅವುಗಳಿಗೆ ಬೇಕಿಲ್ಲಾ! ಯಾಕೆಂದರೇ ಅವರ ಉದ್ದೇಶವೇ ಬೇರೆಯಾಗಿದೆ.

ರೈತರು ತಮ್ಮ ವ್ಯವಸಾಯಕ್ಕೆ ಬೇಕಾದ ಹೂಡಿಕೆಗಳಿಗಾಗಿ, ಅಂದರೇ, ಬೀಜ, ಗೊಬ್ಬರ, ಕ್ರಿಮಿನಾಶಕ ಮತ್ತು ಸಾಲಸೌಲಭ್ಯಕ್ಕಾಗಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಈ ದಲ್ಲಾಳಿ ವ್ಯಾಪಾರಸ್ಥರನ್ನೇ ಅವಲಂಬಿಸಿದ್ದಾರೆ! ಈ ಪರಾವಲಂಬಿತನದಿಂದ ಮುಕ್ತಿ ದೊರೆಯದೇ,ಅವರ ಕಿರಿ ಕಿರಿ ಮತ್ತು ಶೋಷಣೆಯಿಂದ ಅವರಿಗೆ ಬಿಡುಗಡೆ ಇಲ್ಲವಾಗಿದೆ! ಇಂತಹ ವರ್ತಕರ ಶೋಷಣೆಯಿಂದ ರೈತರು ಬಿಡುಗಡೆ ಪಡೆಯಲೆಂದೇ, ನಾವು ಸಾರ್ವಜನಿಕ ರಂಗದ ಸಾಲ ದೊರೆಯುವಂತಹ ಸಾಲ ಮತ್ತು ಋಣ ಮುಕ್ತ ಕಾಯ್ದೆಯನ್ನು ಜಾರಿಗೆ ತರಲು ಕೇಳುತ್ತಿರುವುದು ಎನ್ನುತ್ತಿದ್ದಾರೆ.

ಆದರೇ, ಅದರ ಬದಲಿಗೆ ಕೇಂದ್ರ ಸರಕಾರ, ಇಂತಹ ದಲ್ಲಾಳಿ ವರ್ತಕರ ಕಪಿ ಮುಷ್ಠಿಯಿಂದ ರೈತರನ್ನು ಹೊರತಂದು, ದೇಶ ವಿದೇಶಗಳ ಸಗಟು ವರ್ತಕರು ಅಥವಾ ಕಾರ್ಪೋರೇಟ್ ಕಂಪನಿಗಳ ದೈತ್ಯರಾಕ್ಷಸಲಿಂಗನದ ತೆಕ್ಕೆಗೆ ದೂಡಲು ಕ್ರಮವಹಿಸುತ್ತಿದೆ. ಅವರು ಮುಂಗಡ ಕೃಷಿ ವ್ಯಾಪಾರ ಮಾಡಲು ಬರುತ್ತಾರೆ, ಅವರ ಜೊತೆ ಒಪ್ಪಂದ ಮಾಡಿಕೊಂಡು, ಅವರಿಂದಲೇ, ಬೀಜ, ಗೊಬ್ಬರ, ಕ್ರಿಮಿನಾಶಕ ಮತ್ತು ಸಾಲ ಪಡೆಯಿರಿ. ಮಾತ್ರವಲ್ಲಾ ಅವರಿಗೆ ಬಿತ್ತುವ ಪೂರ್ವವೇ ಮಾರಾಟ ಮಾಡಿಕೊಳ್ಳಿರೆನ್ನುತ್ತಿದೆ.

ಅಂದರೇ, ಈ ಮೊದಲು ನಮ್ಮವರೇ ಆದ ಮತ್ತು ಹತ್ತಿರದಿಂದ ತಿಳಿದಿದ್ದ ಈ ಸಣ್ಣ ವರ್ತಕರ ಮೇಲೆ ಅವಲಂಬಿತರಾಗಿ ಕಿರಿಕಿರಿ, ಶೋಷಣೆಗೊಳಗಾಗಿದ್ದ ನಮ್ಮ ರೈತರನ್ನು ನೀವು ಈಗ, ದೂರದ ಮತ್ತು ಅವರ ಬಗೆಗೆ ಏನೊಂದು ತಿಳಿಯದ ಬಲಾಢ್ಯ ಸಗಟುವರ್ತಕರ ಪರಾವಲಂಬಿತನಕ್ಕೊಳಗಾಗಿ ಬಲವಾದ ಹಿಂಸೆ ಮತ್ತು ಶೋಷಣೆಗೊಳಪಡಲು ಹೇಳುತ್ತಿದ್ದೀರಿ ಮತ್ತು ಸರಕಾರವೇ ದಲ್ಲಾಳಿಯಾಗುವುದಾಗಿ ತಿಳಿಸುತ್ತಿದ್ದೀರಿ? ಅಂದರೇ ರೈತರನ್ನು ಬಾಣಲೆಯಿಂದ ಬೆಂಕಿಗೆ ದೂಡುತ್ತೀರಿ ಎಂದರ್ಥವಲ್ಲವೇ! ರೈತರು ಈ ಮೊದಲೇ ಒಪ್ಪಂದದಂತೆ ಬೆಲೆ ಪಡೆಯುವಾಗ ಅದು ಹೇಗೆ ಬೆಂಕಿಗೆ ಬೀಳುತ್ತಾರೆಂದು ನೀವು ಕೇಳಬಹುದು? ಒಪ್ಪಂದ ಕೃಷಿಯಲ್ಲಿ ರೈತರನ್ನು ಯಾಮಾರಿಸಿ ಮೋಸ ಮಾಡುವ ರಂದ್ರಗಳನ್ನು ನೀವು ತೆರೆದಿದ್ದೀರಿ. ಒಪ್ಪಂದದಂತೆ ಬೆಲೆ ಪಡೆಯಲು ಅಗತ್ಯ ಗುಣಮಟ್ಟದ ಸರ್ಟಿಫಿಕೇಟ್ ನ್ನು ರೈತರು ನೀಡುವಂತೆ ಸೂಚಿಸಿದ್ದೀರಿ. ಅದರಲ್ಲಿ ವಿಫಲರಾದರೇ ಶೇ 66 ಬೆಲೆಗೆ ಮಾರಾಟ ಮಾಡ ಬೇಕಾಗುತ್ತದೆ. ಹೇಗಿದೆ ನಿಮ್ಮಯ ಮರೆ ಮೋಸ?

ಮೋಸದಲ್ಲಿ ಸಣ್ಣ ವರ್ತಕರನ್ನು ವಾಸ್ತವದಲ್ಲಿ ಎದುರಿಸಲಾಗದ ನಮ್ಮ ರೈತರು ಈ ದೈತ್ಯ ಕಂಪನಿಗಳನ್ನು ಎದುರಿಸಿ ನಿಲ್ಲಲು ಸಾಧ್ಯವೆ? ಸಾಧ್ಯವಾಗದು. ಹಾಗಾದರೆ ಅದರ ಪರಿಣಾಮ? ಸಾಲ! ಇಲ್ಲವೇ, ಕಂಪನಿಗಳಿಗೆ ಭೂಮಿಯ ಪರಭಾರೆ! ಇಲ್ಲವೇ ಕಂಪನಿಗಳ ಗುತ್ತಿಗೆ ಬೇಸಾಯಕ್ಕೆ ಜಮೀನು ಒದಗಿಸುವುದಾಗಿದೆ.



ರೈತರ ಹಿತರಕ್ಷಣೆ ಅವರ ಜಮೀನು ರಕ್ಷಿಸುವುದರಿಂದಲೋ ಅಥವಾ ಯಾರು ಬೇಕಾದರೂ ಖರೀದಿಸಲು ಅವಕಾಶ ನೀಡುವುದರಿಂದಲೋ?

ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಮತ್ತು ಮುಖ್ಯಮಂತ್ರಿಗಳಾದ ಶ್ರೀ ಯಡೆಯೂರಪ್ಪರವರು, ದೇಶದ ಹಾಗೂ ರಾಜ್ಯದ ಜನತೆಯನ್ನು ತಮ್ಮ ದಿಕ್ಕು ತಪ್ಪಿಸುವ ಹೇಳಿಕೆಗಳ ಮೂಲಕ ಯಾಮಾರಿಸುತ್ತಿದ್ದಾರೆಂದು ರೈತ ಸಂಘಗಳು ಹೇಳುತ್ತಿವೆ.



ರೈತರ ಹಿತರಕ್ಷಣೆ ಅವರ ಉದ್ಯೋಗವನ್ನು ಮತ್ತು ಉದ್ಯೋಗದ ಆಧಾರವಾದ ಜಮೀನನ್ನು ರಕ್ಷಿಸುವ ಮೂಲಕ ಸಾಧ್ಯವೋ? ಅಥವಾ ಯಾರು ಬೇಕಾದರೂ ಜಮೀನು ಖರೀದಿಸಲು, ಹೇಗೆ ಬೇಕಾದರೂ ಖರೀದಿಸಲು ಅವಕಾಶ ನೀಡುವ ಮೂಲಕವೋ? ಎಂಬ ಪ್ರಶ್ನೆಯನ್ನು

ಎಸೆಯುವ ಮೂಲಕ ರೈತ ಸಂಘಗಳು ಅವರ ಯಾಮಾರಿಸುವಿಕೆಯನ್ನು ಅವು ಬಯಲುಗೊಳಿಸುತ್ತವೆ.

ಇದೊಂದು ಸರಳವಾದ ಪ್ರಶ್ನೆಯಾಗಿದೆ. ರೈತರ ಜಮೀನುಗಳನ್ನು ಯಾರು ಬೇಕಾದರೂ, ಹೇಗೆ ಬೇಕಾದರೂ ಖರೀದಿಸಲು ಅವಕಾಶ ನೀಡುವ ಮೂಲಕ ರೈತರ ಹಿತ ರಕ್ಷಣೆ ಹೇಗೆ ಸಾಧ್ಯ? ಕೇವಲ ಹಣ ಉಳ್ಳವರೆಲ್ಲಾ ಜಮೀನುಗಳನ್ನು ಖರೀದಿಸಲು ಅವಕಾಶ ನೀಡಿದರೇ, ವ್ಯವಸಾಯ ವಿಸ್ತಾರಗೊಳ್ಳಲು ಸಾಧ್ಯವೇ?, ಅವರಿಗೆ ವ್ಯವಸಾಯ ಮಾಡುವ ತರಬೇತಿ ಇರಬೇಡವೇ? ವ್ಯವಸಾಯ ತಿಳಿಯದವರು ಜಮೀನು ಖರೀದಿ ಮಾಡಿ ಏನು ಮಾಡುತ್ತಾರೆ?

ಒಂದೋ ವ್ಯವಸಾಯ ಗೊತ್ತಿರುವ ಹಾಲಿ ರೈತರಿಗೆ ಗುತ್ತಿಗೆ ಬೇಸಾಯಕ್ಕೆ ನೀಡುತ್ತಾರೆ, ಇಲ್ಲವೇ ಕಾರ್ಪೋರೇಟ್ ಕಂಪನಿಗಳ ಗುತ್ತಿಗೆ ಬೇಸಾಯಕ್ಕೆ ಬಿಟ್ಟು ಕೊಡುತ್ತಾರೆ. ಈಗಲಂತೂ, ರೈತರು ನಷ್ಟದಲ್ಲಿ ಬೇಸಾಯ ಮಾಡುತ್ತಿರುವುದರಿಂದ ಕಂಪನಿಗಳ ಗುತ್ತಿಗೆಗೆ ನೀಡುವುದೇ ಲಾಭದಾಯಕವೆಂದು ಸರಳವಾಗಿ ಪರಿಗಣಿಸಿ, ರೈತರೊಂದಿಗೆ ಈ ಖರೀದಿದಾರರು ಕೂಡಾ ಕಾರ್ಪೋರೇಟ್ ಗಳ ಹೂಡಿದ ಖೆಡ್ಡಾಕ್ಕೆ ಬೀಳುತ್ತಾರೆ.

ಇದಕ್ಕೆ ಪೂರಕವಾಗಿ, ಅದಾಗಲೇ, ಕೇಂದ್ರ ಸರಕಾರ ಮಾದರಿ ಕೃಷಿ ಭೂಮಿ ಗುತ್ತಿಗೆ ಕಾಯ್ದೆ-2016 ನ್ನು ಜಾರಿಗೆ ತಂದಿದೆ. ಆ ಮೂಲಕ ದೇಶದ ಒಟ್ಟು 6 ಕೋಟಿ ಎಕರೆ ಮತ್ತು ರಾಜ್ಯದ 55 ಲಕ್ಷ ಎಕರೆ ಬೀಳು ಭೂಮಿಯನ್ನು ಅಭಿವೃದ್ಧಿ ಪಡಿಸುವ ಹೆಸರಿನಲ್ಲಿ ಕಾರ್ಪೋರೇಟ್ ಕಂಪನಿಗಳ ಗುತ್ತಿಗೆ ಬೇಸಾಯಕ್ಕೆ ಅನುವು ಮಾಡಿಕೊಡಲು ಕ್ರಮವಹಿಸಿದೆ.

ಹೀಗಾಗಿ, ಕಾರ್ಪೋರೇಟ್ ಕಂಪನಿಗಳ ವಶಕ್ಕೆ ಜಮೀನು ವಹಿಸುವುದಕ್ಕಾಗಿಯೇ, ಯಾರು ಬೇಕಾದರೂ ಜಮೀನು ಕೊಳ್ಳುವ, ಅವಕಾಶ ನೀಡುವ ತಿದ್ದುಪಡಿಗೆ ಕ್ರಮವಹಿಸಿರುವುದು ಮತ್ತು ಕಂಪನಿಗಳ ಗುತ್ತಿಗೆ ಬೇಸಾಯಕ್ಕಾಗಿಯೇ ಯಾರು ಬೇಕಾದರೂ ಎಷ್ಟು ಎಕರೆ ಬೇಕಾದರೂ ಗುತ್ತಿಗೆ ಬೇಸಾಯದಲ್ಲಿ ತೊಡಗಲು ಅವಕಾಶ ನೀಡುವ ತಿದ್ದುಪಡಿಯನ್ನು ಮೂಲ ಭೂ ಸುಧಾರಣಾ ಕಾಯ್ದೆಯ ತಿದ್ದುಪಡಿಗೆ ಕ್ರಮವಹಿಸಿರುವುದು.




ನೇರವಾಗಿ ರೈತರೊಂದಿಗೆ ಕಾರ್ಪೋರೇಟ್ ಕಂಪನಿಗಳು ಕೃಷಿ ಉತ್ಪನ್ನ ಖರೀದಿಸಲು ಮತ್ತು ಮುಂಗಡ ವ್ಯಾಪಾರದಲ್ಲಿ ತೊಡಗಲು ಅವಕಾಶವಾಗಬೇಕು ಮತ್ತು ದೊಡ್ಡ ಪ್ರಮಾಣದ ಈ ವ್ಯವಹಾರದಿಂದ ಈ ಕಂಪನಿಗಳು ಎಪಿಎಂಸಿಗಳಿಗೆ ಕೊಡಬೇಕಿದ್ದ ಶೇ 02 ಕಮಿಷನ್ ರದ್ದುಗೊಳಿಸಿ ಲಾಭ ಹೆಚ್ಚಿಸಿಕೊಳ್ಳಲು ಅವಕಾಶ ನೀಡಬೇಕು ಮತ್ತು ರೈತರನ್ನು ವಂಚಿಸಲು ಇದ್ದ ನಿರ್ಬಂಧಗಳನ್ನು ಸಡಲಿಸಬೇಕು ಹಾಗೂ ಮುಂದೆ ಎಪಿಎಂಸಿಗಳ ಲಕ್ಷಾಂತರ ಕೋಟಿ ರೂ ಮೌಲ್ಯದ ಆಸ್ತಿಗಳನ್ನು ಕಬಳಿಸಲು ಅನುವು ಮಾಡಿಕೊಡ ಬೇಕು. ಈ ದುರುದ್ದೇಶಗಳಿಂದ ಎಪಿಎಂಸಿ ಕಾಯ್ದೆಯ ತಿದ್ದುಪಡಿಯನ್ನು ಮಾಡಲಾಗಿದೆ ಮತ್ತು ಅದನ್ನು ಮರೆ ಮಾಚಲು ರೈತರು ಹಾಗೂ ದಲ್ಲಾಳಿ ವರ್ತಕರ ನಡುವಿನ ತಿಕ್ಕಾಟವನ್ನು ಮುಂದೆ ಮಾಡಿ ರೈತರನ್ನು ನಾಗರೀಕರನ್ನು ಯಾಮಾರಿಸಲಾಗುತ್ತಿದೆ.

ಎಪಿಎಂಸಿಗಳನ್ನು ಮತ್ತು ಬೆಂಬಲ ಬೆಲೆಯನ್ನು ಉಳಿಸಲಾಗುತ್ತದೆಂಬ ಅಪ್ಪಟ ಸುಳ್ಳು

ಮುಂಗಡ ವ್ಯಾಪಾರದ ಕೃಷಿಯು ಮತ್ತು ಕಂಪನಿಗಳ ಗುತ್ತಿಗೆ ಬೇಸಾಯವು ಇನ್ನೊಂದೆಡೆ ನೇರ ಕಾರ್ಪೋರೇಟ್ ಕೃಷಿಯು ಮುನ್ನಡೆಯುವಾಗ ಎಪಿಎಂಸಿಗಳು ಇದ್ದರೇನು? ಇಲ್ಲದಿದ್ದರೇನು? ಇವುಗಳಿಂದ ರೈತರಿಗೇನು ಪ್ರಯೋಜನ?

ಅದೇ ರೀತಿ, ಖಾತರಿಯಾಗಿ ದೊರೆಯದ ಕನಿಷ್ಠ ಬೆಂಬಲ ಬೆಲೆ ಘೋಷಿಸಿದರೇನು? ಘೋಷಿಸದೇ ಬಿಟ್ಟರೇನು? ಇದರಿಂದ ರೈತರಿಗೇನು ಪ್ರಯೋಜನಾ! ಕಾರ್ಪೋರೇಟ್ ಕೃಷಿ, ಮುಂಗಡ ವ್ಯಾಪಾರ ಕೃಷಿ ಮತ್ತು ಕಂಪನಿಗಳ ಗುತ್ತಿಗೆ ಕೃಷಿ ತಡೆಯದೇ ಎಪಿಎಂಸಿ ಉಳಿಸುವ ವಿಚಾರ ಮತ್ತು ಬೆಂಬಲ ಬೆಲೆ ಪ್ರಕಟಿಸುವುದನ್ನು ಉಳಿಸಿಕೊಳ್ಳುವ ಪ್ರಧಾನ ಮಂತ್ರಿಗಳ ಪ್ರಸ್ತಾಪ ರೈತರನ್ನು ಮತ್ತು ನಾಗರೀಕರನ್ನು ವಂಚಿಸಿ, ಯಾಮಾರಿಸುವ ಮತ್ತೊಂದು ಅಂಶವಾಗಿದೆ. ●

ಕಾರ್ಮಿಕರ ಕೆಲಸ ಮತ್ತು ಜೀವನದ ಪರಿಸ್ಥಿತಿಗಳು



ಭಾರತದ ಕಾರ್ಮಿಕ ವರ್ಗ ಉದಯವಾಗುತ್ತಿದ್ದ ಅವಧಿ ಮತ್ತು ಅದರ ನಂತರ ದೀರ್ಘ ಕಾಲದವರೆಗೆ, ಅದು ವಸಾಹತಶಾಹಿ ಆಳ್ವಿಕೆಯಲ್ಲಿದ್ದ ಕಾರಣಗಳಗಾಗಿ, ಶೋಷಣೆ ಹೆಚ್ಚು ಭಯಾನಕವಾಗಿತ್ತು. ದಿನದ ಕೆಲಸ'ದ ಅವಧಿಯನ್ನು ಸಾಧ್ಯವಾದಷ್ಟೂ ದೀರ್ಘಗೊಳಿಸಿ ನಡೆಸುವ ಶೋಳಣೆಯ ಜೊತೆಗೆ, ವೇತನಕ್ಕೆ ಸಂಬಂಧಿಸಿದ ಪರಿಸ್ಥಿತಿಗಳು ಸಹ ಭಾರತದ ಶ್ರಮಜೀವಿಗಳನ್ನು ಅಮಾನವೀಯ ಅಸ್ತಿತ್ವದ ಕೆಳಮಟ್ಟಕ್ಕಿಳಿಸಿದವು.. ಭಾರತದ ಕೈಗಾರಿಕಾ ಕಾರ್ಮಿಕರ ವೇತನವು ಗ್ರಾಮೀಣ ಭಾರತದ ದುಡಿಯುವ ಜನರಿಗೆ ಲಭ್ಯವಾಗಿದ್ದಕ್ಕಿಂತ ಉತ್ತಮವಾಗಿರಲಿಲ್ಲ. ವಸತಿ ವ್ಯವಸ್ಥೆಯಂತೂ ಕಾರ್ಮಿಕರ ಬದುಕನ್ನು ನರಕಸದೃಶಗೊಳಿಸಿತು. ಹೀಗಿತ್ತು ಭಾರತದ ಇತಿಹಾಸದಲ್ಲಿ ಮುಂದೆ ಅತ್ಯಂತ ದೊಡ್ಡ ಕ್ರಾಂತಿಕಾರಿ ಸಾಮರ್ಥ್ಯವನ್ನು ಹೊಂದಲಿದ್ದ ಹೊಸ ಸಾಮಾಜಿಕ ಶಕ್ತಿಯಾದ ಭಾರತದ ಶ್ರಮಜೀವಿಗಳ ಬದುಕಿನ ಮತ್ತು ಕೆಲಸದ ಪರಿಸ್ಥಿತಿ.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ-ಅನುವಾದ: ಸಿ.ಆರ್. ಶಾನಭಾಗ

ಈ ಮೊದಲು ನೋಡಿದಂತೆ, ಭಾರತದಲ್ಲಿ ಆಧುನಿಕ ಕೈಗಾರಿಕೆಗಳ ಅಡಿಪಾಯವನ್ನು ಸರಿಸುಮಾರು 1850 ಮತ್ತು 1870 ರ ಮಧ್ಯದಲ್ಲಿ ಹಾಕಲಾಯಿತು. ಆದ್ದರಿಂದ ಇದು ಭಾರತದ ಕಾರ್ಮಿಕ ವರ್ಗದ ಉದಯದ ಅವಧಿಯೂ ಆಗಿದೆ. ನಂತರದ ವರ್ಷಗಳು ಕೈಗಾರಿಕೀಕರಣದ ಪ್ರಗತಿಗೆ ಸಾಕ್ಷಿಯಾದವು ಮತ್ತು ಅದರಿಂದಾಗಿ ಕಾರ್ಮಿಕ ವರ್ಗದ ಮುನ್ನಡೆಗೂ ಸಹ. ಈ ಮುನ್ನಡೆಯು ಶತಮಾನದ ತಿರುವಿನಲ್ಲಿ ವೇಗವನ್ನು ಪಡೆಯಿತು.

1890 ರ ಹೊತ್ತಿಗೆ ಭಾರತವು ಕೆಲವು ದೊಡ್ಡ ತಯಾರಿಕಾ(ಮಾನ್ಯುಫಾಕ್ಚರ್) ಕೈಗಾರಿಕೆಗಳನ್ನು ಹೊಂದಿತ್ತು. ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲಿ ಬೆಳೆಯಲು ಪ್ರಾರಂಭಿಸಿದ ಬ್ರಿಟಿಷ್ ಬಂಡವಾಳದ ಏಕಸಾಮ್ಯ ಹೊಂದಿದ್ದ ಸೆಣಬಿನ ಕಾರ್ಖಾನೆಗಳು 1913-14ರ ಅವಧಿಯಲ್ಲಿ ಒಟ್ಟು 216,000 ಕಾರ್ಮಿಕರನ್ನು ನೇಮಿಸಿಕೊಂಡವು. ಬಂಗಾಳದ ಹೊರತಾಗಿ, ಇತರ ಸ್ಥಳಗಳಲ್ಲಿಯೂ ಕೆಲವು ಕಾರ್ಖಾನೆಗಳು ಅಭಿವೃದ್ಧಿಗೊಂಡವು.

ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ ಮುಖ್ಯವಾಗಿ ಬಾಂಬೆಯಲ್ಲಿ ಬೆಳೆಯಲು ಪ್ರಾರಂಭಿಸಿದ ಭಾರತದ ಬಂಡವಾಳದ ಏಕಸಾಮ್ಯ ಹೊಂದಿದ್ದ, ಹತ್ತಿ ಜವಳಿ ಉದ್ಯಮವು ಇಪ್ಪತ್ತನೇ ಶತಮಾನದ ಆರಂಭದಲ್ಲಿ ಗಣನೀಯವಾಗಿ ಅಭಿವೃದ್ಧಿ ಹೊಂದಿತು. ಒಟ್ಟು 74,000 ಕಾರ್ಮಿಕರನ್ನು ಹೊಂದಿರುವ ಕೇವಲ 95 ಗಿರಣಿಗಳ ಸಂಖ್ಯೆ, 1886 ರಿಂದ 1905 ರವರೆಗಿನ 20 ವರ್ಷಗಳ ಅವಧಿಯಲ್ಲಿ 197 ಗಿರಣಿಗಳಿಗೆ ಏರಿ, ಒಟ್ಟು 195,000 ಕಾರ್ಮಿಕರು ಹೊಂದಿತು.

ಕಲ್ಲಿದ್ದಲು ಉದ್ಯಮವೂ ಸಾಕಷ್ಟು ಅಭಿವೃದ್ಧಿಯಾಯಿತು. 1911-1915ರ ಅವಧಿಯಲ್ಲಿ, ಒಂದು ದೊಡ್ಡ ನೆಗೆತದೊಂದಿಗೆ ಕಾರ್ಯಾಚರಣೆಯಲ್ಲಿದ್ದ ಗಣಿಗಳ ಸಂಖ್ಯೆ ಮತ್ತು ಒಟ್ಟು ಕಾರ್ಮಿಕ ಬಲವು ಕ್ರಮವಾಗಿ 554 ಮತ್ತು 128,884 ರ ಕ್ಕೆ ತಲುಪಿತು.

1901 ಮತ್ತು 1911 ರ ನಡುವಿನ ಅವಧಿಯಲ್ಲಿ. ಕಟ್ಟಡ ನಿರ್ಮಾಣ ಮತ್ತು ಸಂಪರ್ಕ ಕ್ಷೇತ್ರದ ಕೈಗಾರಿಕೆಗಳ ಕಾರ್ಮಿಕ ಬಲದಲ್ಲಿ ಕ್ರಮವಾಗಿ 18.2 ಮತ್ತು 29.4 ಪ್ರತಿಶತದಷ್ಟು ಹೆಚ್ಚಳವಾಯಿತು

ಸಂಪರ್ಕದ ಎಲ್ಲಾ ಮೂರು ಶಾಖೆಗಳಲ್ಲಿ, ಅಂದರೆ, ರೈಲ್ವೆ, ರಸ್ತೆ ಸಾರಿಗೆ ಮತ್ತು ಹಡಗು ಮಾರ್ಗಗಳು ಅಭಿವೃದ್ಧಿಹೊಂದಿದ್ದು ಈ ಅವಧಿಯ ಮತ್ತೊಂದು ಮುಖ್ಯವಾದ ಲಕ್ಷಣವಾಗಿದೆ. 1911 ರ ಜನಗಣತಿಯಿಂದ ಲಭ್ಯವಿರುವ ಅಂಕಿಅಂಶಗಳ ಪ್ರಕಾರ, ಸಾರಿಗೆಗೆ ಸಂಬಂಧಿಸಿದ ಕೈಗಾರಿಕಾ ಸಂಸ್ಥೆಗಳಲ್ಲಿ, ರೈಲ್ವೆಘಟಕಗಳು ಮೊದಲ ಸ್ಥಾನದಲ್ಲಿದ್ದವು ಮತ್ತು, ಸುಮಾರು 100,000 ಕಾರ್ಮಿಕರನ್ನು ಅಥವಾ ಆ ಕೈಗಾರಿಕೆಯ 79 ಪ್ರತಿಶತ ಕಾರ್ಮಿಕರನ್ನು ನೇಮಿಸಿಕೊಂಡವು.

ಈ ಎಲ್ಲ ಕಾರ್ಮಿಕರ ಕೆಲಸ ಮತ್ತು ಜೀವನದ ಪರಿಸ್ಥಿತಿಗಳು ಹೇಗಿದ್ದವು?

ಕೈಗಾರಿಕೆಗಳ ಬೆಳವಣಿಗೆಯ ಆರಂಭಿಕ ಅವಧಿಯಲ್ಲಿ, ಕಾರ್ಮಿಕ ವರ್ಗವು ಅಸಹನೀಯ ಸ್ಥಿತಿಯಲ್ಲಿ ಕೆಲಸ ಮಾಡಬೇಕಾಗಿತ್ತು. ದೀರ್ಘ ಅವಧಿಯ ಕೆಲಸದ ಸಮಯಗಳು, ನಿಕೃಷ್ಟ ವೇತನಗಳು, ಬಾಲ ಕಾರ್ಮಿಕರು, ಉದ್ಯೋಗ, ವಸತಿ ಮತ್ತು ಇತರ ಎಲ್ಲ ಕ್ಷೇತ್ರಗಳಲ್ಲಿ ಶೋಷಣೆಯ ವ್ಯಾಪ್ತಿಯು ವಿಪರೀತವಾಗಿತ್ತು. ಅಷ್ಟೇ ಅಲ್ಲ, ಭಾರತದ ಕಾರ್ಮಿಕ ವರ್ಗ ಉದಯವಾಗುತ್ತಿದ್ದ ಅವಧಿ ಮತ್ತು ಅದರ ನಂತರ ದೀರ್ಘ ಕಾಲದವರೆಗೆ, ಅದು ವಸಾಹತಶಾಹಿ ಆಳ್ವಿಕೆಯಲ್ಲಿದ್ದ ಕಾರಣಗಳಿಗಾಗಿ, ಈ ಶೋಷಣೆಯ ಪ್ರಮಾಣ ಇನ್ನೂ ಹೆಚ್ಚು ಭಯಾನಕವಾಗಿತ್ತು.

ಆರಂಭಿಕ ಹಂತದಲ್ಲಿ ದಿನಕ್ಕೆ ಹದಿನೈದು ಹದಿನಾರು ಗಂಟೆಗಳ ಕಾಲ ಕೆಲಸ ಮಾಡಬೇಕಾಗಿದ್ದು ತೀರಾ ಸಾಮಾನ್ಯವಾಗಿತ್ತು. ಮಹಿಳೆಯರು ಮತ್ತು ಬಾಲ ಕಾರ್ಮಿಕರನ್ನು ಸಹ ಅದೇ ರೀತಿಯಲ್ಲಿ ಕೆಲಸ ಮಾಡುವಂತೆ ಒತ್ತಾಯಿಸಲಾಗುತ್ತಿತ್ತು. ಯಂತ್ರೋಪಕರಣಗಳೊಂದಿಗೆ ಕೆಲಸ ಮಾಡುವ ಸ್ಥಳದಲ್ಲಿ ಯಾವುದೇ ಮುನ್ನೆಚ್ಚರಿಕೆ ಕ್ರಮಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದು ಕಾರ್ಮಿಕರ ದೈಹಿಕ ಅಂಗವಿಕಲತೆಗೆ ಕಾರಣವಾಗುವ ಅಪಘಾತಗಳಿಗೆ ಅಡಿಗಡಿಗೆ ಕಾರಣವಾಗುತ್ತಿತ್ತು. ಇಂತಹ ಸಂದರ್ಭದಲ್ಲಿ ಯಾವುದೇ ಪರಿಹಾರವನ್ನು ಕೂಡ ಪಾವತಿಸಲಾಗುತ್ತಿದ್ದಿಲ್ಲ. ವೇತನವೂ ಜೀವನಾಧಾರ ಮಟ್ಟಕ್ಕಿಂತ ಕೆಳಗಿತ್ತು.

ಬ್ರಿಟಿಷ್ ಮತ್ತು ಭಾರತೀಯ ಬಂಡವಾಳಶಾಹಿಗಳಿಬ್ಬರೂ, ಸಂಪೂರ್ಣ ಹೆಚ್ಚುವರಿ ಮೌಲ್ಯವನ್ನು ದೋಚಿಕೊಳ್ಳುತ್ತಿದ್ದರು ಎಂಬ ಅಂಶ ಭಾರತದ ಕಾರ್ಮಿಕ ವರ್ಗದ ಶೋಷಣೆಯಲ್ಲಿ ಮುಖ್ಯವಾಗಿ ವ್ಯಕ್ತವಾಯಿತು. ಮುಂಜಾನೆಯಿಂದ ಮುಸ್ಸಂಜೆಯವರೆಗೆ ಮತ್ತು ಆಗಾಗ್ಗೆ ಇನ್ನೂ ಹೆಚ್ಚಿನ ದೀರ್ಘ ಕೆಲಸದ ಸಮಯವು, ಶ್ರಮವನ್ನು ದುರುಪಯೋಗಪಡಿಸಿಕೊಳ್ಳುವ ಕ್ರೂರ ವಿಧಾನದ ಅತ್ಯಂತ ಗಮನಾರ್ಹ ಸೂಚನೆಯಾಗಿತ್ತು. ಅಸ್ತಿತ್ವದಲ್ಲಿ ಫ್ಯಾಕ್ಟರಿ ಕಾಯ್ದೆಯಲ್ಲಿ ಕೆಲವು ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ಫ್ರೀರ್ ಸ್ಮಿತ್ ಸಮಿತಿಯು ಮಾಡಿದ ವಿವಿಧ ಶಿಫಾರಸುಗಳನ್ನು ಪರಿಶೀಲಿಸಲು 1908 ರಲ್ಲಿ ನೇಮಕಗೊಂಡ ಭಾರತದ ಕಾರ್ಖಾನೆ ಕಾರ್ಮಿಕ ಆಯೋಗದ ಅಧಿಕೃತ ವರದಿಗೆ ಸಹ ಈ ಅಮಾನವೀಯ ಚಿತ್ರವನ್ನು ಮರೆಮಾಚಲು ಸಾಧ್ಯವಾಗಲಿಲ್ಲ. ಈ ವರದಿಯ ಪ್ರಕಾರ, ಅಹಮದಾಬಾದ್‌ನಲ್ಲಿ ಒಂದು ದಿನದಲ್ಲಿ ಸರಾಸರಿ ಕೆಲಸದ ಅವಧಿ 12 ಗಂಟೆಗಳು, ಮತ್ತು ಕೆಲವು ಕಾರ್ಖಾನೆಗಳಲ್ಲಿ ವಿದ್ಯುತ್ ಶಕ್ತಿಯನ್ನು ಬಳಸುವಲ್ಲಿ 14 ಗಂಟೆಗಳಿಗಿಂತ ಕಡಿಮೆಯಿದ್ದಿಲ್ಲ. ಬಾಂಬೆಯಲ್ಲಿ ಸಹ ಸರಾಸರಿ 12 ಗಂಟೆಗಳು, ಆದರೆ ವಿದ್ಯುತ್ ಬಳಸಿದ 85 ಹತ್ತಿ ಗಿರಣಿಗಳಲ್ಲಿ 60 ರಲ್ಲಿ, ಕಾರ್ಮಿಕರು ಬರೋಬ್ಬರಿ ದಿನಾಲೂ 15 ಗಂಟೆಗಳಿಗಿಂತ ಕಡಿಮೆಯಿಲ್ಲದೆ ಕೆಲಸ ಮಾಡಬೇಕಾಗಿತ್ತು. ಬ್ರೋಚ್‌ನಲ್ಲಿ ಕೆಲಸದ ಅವಧಿಯು 14 1/2 ರಿಂದ 13 1/2 , ದೆಹಲಿ ಯಲ್ಲಿ 13 1/2 ರಿಂದ 14 1/2 ರವರೆಗೆ ಇತ್ತು, ಆಗ್ರಾದಲ್ಲಿ ಇದು 13 ಗಂಟೆ 45 ನಿಮಿಳದಿಂದ 15 ಗಂಟೆ 15 ನಿಮಿಳಗಳ ವರೆಗೆ, ಅಮೃತಸರ ಮತ್ತು ಲಾಹೋರ್‌ನಲ್ಲಿ 13 ರಿಂದ 13 ಗಂಟೆ 40 ನಿಮಿಳಗಳವರೆಗೆ ಇತ್ತು. ಆದರೆ ಕಲ್ಕತ್ತಾದ ಸೆಣಬಿನ ಗಿರಣಿಗಳನ್ನು ಹೊಂದಿದ್ದ ಬ್ರಿಟಿಳ್ ಬಂಡವಾಳಶಾಹಿಗಳು ಈ ಗಿರಣಿಗಳ ನೇಕಾರರನ್ನು 15 ಗಂಟೆಗಳ ಕಾಲ, ಕೆಲವು ಸಂದರ್ಭಗಳಲ್ಲಿ 15 1/2 ರಿಂದ 16 ಗಂಟೆಗಳವರೆಗೆ ಕೆಲಸ ಮಾಡಿಸಿ ದಾಖಲೆಯನ್ನು ನಿರ್ಮಿಸಿದ್ದರು.

ಗರಿಷ್ಟ ಕೆಲಸದ ಸಮಯ ವಿದ್ಯುತ್ ಬೆಳಕನ್ನು ಪರಿಚಯಿಸುವುದರೊಂದಿಗೆ ಮತ್ತಷ್ಟು ದೀರ್ಘವಾಯಿತು. 1906 ರ ಜವಳಿ ಕಾರ್ಖಾನೆಗಳ ಸಮಿತಿಯ ವರದಿಯೂ ಈ ಸಂಗತಿಯನ್ನು ಒಪ್ಪಿಕೊಂಡಿತು..

ಜಿನ್ನಿಂಗ್ ಕಾರ್ಖಾನೆಗಳಲ್ಲಿನ ಸ್ಥಿತಿ ಮತ್ತಷ್ಟು ಕೆಟ್ಟದಾಗಿತ್ತು. ಈ ಬಗ್ಗೆ ಗಮನ ಸೆಳೆದ ಫ್ಯಾಕ್ಟರಿ ಲೇಬರ್ ಕಮಿಷನ್ "10 ಜಿನ್ನಿಂಗ್ ಕಾರ್ಖಾನೆಗಳಲ್ಲಿನ ನಿರ್ವಾಹಕರು ಕೆಲವು ಸಂದರ್ಭಗಳಲ್ಲಿ ದಿನಕ್ಕೆ 17 ಮತ್ತು 18 ಗಂಟೆಗಳ ಕಾಲ ಕೆಲಸ ಮಾಡಿಸುವುದನ್ನು ನಾವು ನೋಡಿದ್ದೇವೆ. ಅಕ್ಕಿ ಗಿರಣಿಗಳು ಮತ್ತು ಹಿಟ್ಟು ಗಿರಣಿಗಳಲ್ಲಿ ಪುರುಷರು ಸಾಂದರ್ಭಿಕವಾಗಿ 20 ರಿಂದ 22 ಗಂಟೆಗಳ ಕಾಲ ಕೆಲಸ ಮಾಡಬೇಕಾಗುತ್ತದೆ. ಮುದ್ರಣಾಲಯಗಳಲ್ಲಿ ಪುರುಷರು ಸತತ ಏಳು ದಿನಗಳವರೆಗೆ ದಿನಕ್ಕೆ 22 ಗಂಟೆಗಳ ಕಾಲ ಕೆಲಸ ಮಾಡಬೇಕಾಗಿತ್ತು" ಎಂದು ದಾಖಲಿಸಿದೆ.

ಬಾಂಬೆಯ ಬಾಯ್ಲರ್‌ನ ಹಿರಿಯ ಇನ್ಸ್‌ಪೆಕ್ಟರ್ ಟಾಮ್ ಡ್ರೂವೆಟ್ ಅವರು ನೀಡಿದ ವರದಿಯ ಪ್ರಕಾರ, "ಜಿನ್ನಿಂಗ್ ಋತುಮಾನವು ಸುಮಾರು ಎಂಟು ತಿಂಗಳುಗಳವರೆಗೆ ಇರುತ್ತದೆ, ಅದರಲ್ಲಿ ಕೆಲಸಗಾರರು ಬೆಳಿಗ್ಗೆ 5 ರಿಂದ ರಾತ್ರಿ 10 ರವರೆಗೆ ಕಾರ್ಯನಿರ್ವಹಿಸುತ್ತಾರೆ ಮತ್ತು ಉಳಿದ ಮೂರು ತಿಂಗಳು ಅವರು ಹಗಲು ರಾತ್ರಿ ಕೆಲಸ ಮಾಡುತ್ತಾರೆ. ಕೆಲಸಗಾರರು ಹೆಚ್ಚಾಗಿ ಮಹಿಳೆಯರು. ಕಾರ್ಖಾನೆಯೊಂದರಲ್ಲಿ ಪರಿಸ್ಥಿತಿಗಳನ್ನು ಕುರಿತು ಹೀಗೆ ಹೇಳಿದ್ದಾರೆ. "ಸಾಮಾನ್ಯ ಋತುಗಳಲ್ಲಿ, ಅಂದರೆ ಕೆಲಸವು ಹೆಚ್ಚು ಒತ್ತಡವಿಲ್ಲದಿದ್ದಾಗ, ಎಂಜಿನ್ ಬೆಳಿಗ್ಗೆ 4 ಅಥವಾ 5 ರಿಂದ ಪ್ರಾರಂಭವಾಗುತ್ತದೆ ಮತ್ತು ಸಂಜೆ 7, 8 ಅಥವಾ 9 ಗಂಟೆಗೆ ನಿಲ್ಲುತ್ತದೆ, ನಡುವೆ ಯಾವುದೇ ನಿಲುಗಡೆ ಇಲ್ಲ. ಈ ಎಲ್ಲಾ ಸಮಯದಲ್ಲೂ ಕೆಲಸಗಾರರು ನಿರಂತರವಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ, ಮತ್ತು ಊಟಕ್ಕೆ ಒಬ್ಬರ ನಂತರ ಒಬ್ಬರನ್ನು ಬಿಡಲಾಗುತ್ತದೆ.. ಬಿಡುವಿಲ್ಲದ ಋತುಗಳಲ್ಲಿ, ಅಂದರೆ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ, ಜಿನ್‌ಗಳು ಮತ್ತು ಪ್ರೆಸ್‌ಗಳು ಕೆಲವೊಮ್ಮೆ ರಾತ್ರಿ ಮತ್ತು ಹಗಲು ಎರಡೂ ಕೆಲಸ ಮಾಡುತ್ತವೆ, ಸಂಜೆ ಅರ್ಧ ಘಂಟೆಯ ವಿಶ್ರಾಂತಿ. ಅದೇ ಗುಂಪು ಸುಮಾರು 8 ದಿನಗಳವರೆಗೆ ಹಗಲು ರಾತ್ರಿ ಕೆಲಸ ಮಾಡುವುದನ್ನು ಮುಂದುವರಿಸುತ್ತದೆ, ಮತ್ತು ಮುಂದೆ ಹೋಗಲು ಅಸಾಧ್ಯವಾದಾಗ, ಇತರ ಗುಂಪುಗಳನ್ನು ತೊಡಗಿಸಲಾಗುತ್ತದೆ....

ಮಹಿಳಾ ಮತ್ತು ಬಾಲ ಕಾರ್ಮಿಕ ಪದ್ಧತಿಯನ್ನು ದುರುಪಯೋಗಪಡಿಸಿಕೊಳ್ಳುವಲ್ಲಿ ಮಾಲಿಕರು ಯಾವುದೇ ಪ್ರಮಾಣದ ಸಂವೇದನೆಯನ್ನಾಗಲಿ ಅಥವಾ ಯಾವುದೇ ಮಾನವೀಯತೆಯ ಪರಿಗಣನೆಯನ್ನು ತೋರಿಸಲಿಲ್ಲ. 5 ರಿಂದ 7 ರ ಕೋಮಲ ವಯಸ್ಸಿನ ಮಕ್ಕಳು ಎಲ್ಲೆಡೆ ಅತ್ಯಂತ ಕ್ರೂರವಾದ ಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದರು.

ಯಾವುದೇ ಮನುಷ್ಯನಿಗೆ ಅಸಹನೀಯವಾದ ಈ ಶ್ರಮದ ಒತ್ತಡದಲ್ಲಿ ಕಾರ್ಮಿಕರು ದೈಹಿಕವಾಗಿ ಕುಸಿದು ಬಿದ್ದಾಗ, ಒಂದು ಚಕ್ರದ ಒಡೆದ ಭಾಗವನ್ನು ಹೊಸದರಿಂದ ಬದಲಾಯಿಸುವಂತೆಯೇ ಹೊಸ ನೇಮಕಾತಿಯಿಂದ ಬದಲಾಯಿಸಲಾಗುತ್ತಿತ್ತು..

ಈ ಆಧುನಿಕ ಕಾರ್ಖಾನೆಗಳಿಂದ ಬಹು ದೂರದಲ್ಲಿ, ತೋಟ ಕಾರ್ಮಿಕರು ಇದ್ದರು, ಅವರ ಕೆಲಸ ಮತ್ತು ಜೀವನ ಪರಿಸ್ಥಿತಿಗಳು ಇನ್ನೂ ಕೆಟ್ಟದಾಗಿದ್ದವು. ಅಸಹನೀಯವಾಗಿ ದೀರ್ಘ ಕೆಲಸ ಮಾಡುವಂತೆ ಕಾರ್ಮಿಕರನ್ನು ಒತ್ತಾಯಿಸುವ ಮೂಲಕ ನಡೆಸುವ ಶೋಷಣೆಯ ಜೊತೆಗೆ, ವೇತನಕ್ಕೆ ಸಂಬಂಧಿಸಿದ ಪರಿಸ್ಥಿತಿಗಳು ಸಹ: ಭಾರತದ ಶ್ರಮಜೀವಿಗಳನ್ನು ಅಮಾನವೀಯ ಅಸ್ತಿತ್ವದ ಕೆಳಮಟ್ಟಕ್ಕಿಳಿಸಿದವು..

1892 ರಲ್ಲಿ ನಡೆದ ಸರ್ಕಾರಿ ತನಿಖೆಯ ಸಂದರ್ಭದಲ್ಲಿ, ಸೆಣಬಿನ ಗಿರಣಿಗಳ ಸಂಘದ ಕಾರ್ಯದರ್ಶಿಯ ಹೇಳಿಕೆಯಿಂದ ಬಂಗಾಳದ ಸೆಣಬಿನ ಕಾರ್ಖಾನೆಗಳಲ್ಲಿನ ವೇತನದ ದರಗಳು ಸರಳ ರೀತಿಯ ಕೆಲಸದ ಅರ್ಧಾವಧಿಯವರೆಗೆ ಕೆಲಸ ಮಾಡುವ ಮಕ್ಕಳಿಗೆ ವಾರಕ್ಕೆ ಒಂದು ರೂಪಾಯಿಯಿಂದ ಹಿಡಿದು, ನುರಿತ ಮೆಕ್ಯಾನಿಕ್‌ಗೆ ವಾರಕ್ಕೆ ಹತ್ತು ಅಥವಾ ಹನ್ನೆರಡು ರೂಪಾಯಿಗಳು. ಬ್ರಿಟಿಷ್-ಇಂಡಿಯನ್ ಅಸೋಸಿಯೇಶನ್‌ನ ಹೇಳಿಕೆಯ ಪ್ರಕಾರ, ಸೆಣಬಿನ ಕಾರ್ಖಾನೆಗಳಲ್ಲಿನ ಕೌಶಲ್ಯರಹಿತ ಕಾರ್ಮಿಕರಿಗೆ ರೂ. 0-14-6 ರಿಂದ ರೂ. ವಾರಕ್ಕೆ 3-0-0 ಮತ್ತು ಕುಶಲ ಕಾರ್ಮಿಕರಿಗೆ ವಾರಕ್ಕೆ ರೂ. 5 ರಿಂದ ರೂ. 7 .

ಹತ್ತಿ ಜವಳಿ ಉದ್ಯಮದಲ್ಲಿ ಕಾರ್ಮಿಕರ ವೇತನಕ್ಕೆ ಸಂಬಂಧಿಸಿದ ಸ್ಥಿತಿಯು ಬಹುತೇಕ ಇದನ್ನು ಹೋಲುತ್ತದೆ. 1877 ರಲ್ಲಿ, ಬಾಂಬೆ ಪ್ರೆಸಿಡೆನ್ಸಿಯ ಹತ್ತಿ ಗಿರಣಿಗಳಲ್ಲಿ, ಮಾಸಿಕ ವೇತನವು ಪುರುಷರಿಗೆ ಸರಾಸರಿ 10ರಿಂದ 20 ರೂಪಾಯಿಗಳು ಮತ್ತು ಮಹಿಳೆಯರಿಗೆ 7 ರಿಂದ 9 ರೂಪಾಯಿಗಳು. ಮತ್ತೊಂದು ಅಧಿಕೃತ ಹೇಳಿಕೆಯ ಪ್ರಕಾರ, ಬಾಂಬೆ ಹತ್ತಿ ಗಿರಣಿಗಳಲ್ಲಿ, ಪುರುಷರಿಗೆ ಸರಾಸರಿ ಮಾಸಿಕ ದರಗಳು ರೂ. 12, ಮಹಿಳೆಯರು ರೂ. 9 ಮತ್ತು ಮಕ್ಕಳು ರೂ. 5. ಇತರ ಸಣ್ಣ ಕೈಗಾರಿಕೆಗಳಲ್ಲಿ ಈ ಸ್ಥಿತಿ ಹೆಚ್ಚು ಶೋಚನೀಯವಾಗಿತ್ತು. ಭಾರತದ ಕೈಗಾರಿಕಾ ಕಾರ್ಮಿಕರ ವೇತನವು ಗ್ರಾಮೀಣ ಭಾರತದ ದುಡಿಯುವ ಜನರಿಗೆ ಲಭ್ಯವಾಗಿದ್ದಕ್ಕಿಂತ ಉತ್ತಮವಾಗಿರಲಿಲ್ಲ.

ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಹೊಸದಾಗಿ ಅಭಿವೃದ್ಧಿ ಹೊಂದುತ್ತಿದ್ದ ಕೈಗಾರಿಕಾ ಕೇಂದ್ರಗಳಲ್ಲಿ, ತಮ್ಮ ಗ್ರಾಮೀಣ ಮನೆಯಿಂದ ವಲಸೆ ಬಂದು ಉದ್ಯೋಗಗಳಿಗಾಗಿ ಅಲ್ಲಿ ಜಮಾಯಿಸಿದ ಕಾರ್ಮಿಕರಿಗೆ ಯಾವುದೇ ವಸತಿ ವ್ಯವಸ್ಥೆ ಇರಲಿಲ್ಲ.

ಶತಮಾನದ ತಿರುವಿನಲ್ಲಿ ಸಹ ಯಾವುದೇ ಗಮನಾರ್ಹ ಸುಧಾರಣೆ ಕಂಡುಬರಲಿಲ್ಲ. ಕೆಲಸಗಾರ ತನ್ನ ಕುಟುಂಬದ ಸದಸ್ಯರೊಂದಿಗೆ ಪ್ರತ್ಯೇಕವಾಗಿ ವಾಸಿಸಲು ಕೇವಲ ಒಂದು ಕೋಣೆಯನ್ನು ಸಹ ಪಡೆಯಲಾಗುತ್ತಿರಲಿಲ್ಲ. ಒಂದಕ್ಕಿಂತ ಹೆಚ್ಚು ಕುಟುಂಬಗಳನ್ನು ಒಂದೇ ಕೋಣೆಯಲ್ಲಿ ಕೂಡಿ ಹಾಕಲಾಗುತ್ತಿತ್ತು ಮತ್ತು ಅದೂ ಸಹ ಗಾಳಿ-ಬೆಳಕು ಮತ್ತು ನೈರ್ಮಲ್ಯ ವ್ಯವಸ್ಥೆ ಇಲ್ಲದೆ. ಆದ್ದರಿಂದ ಆರೋಗ್ಯ ಮತ್ತು ನೈತಿಕತೆಯ ಮೇಲೂ ವಿನಾಶಕಾರಿ ಪರಿಣಾಮ ಬೀರಿದಂತಹ ನರಕಯಾತನೆಯ ಬದುಕು ಅವರದ್ದಾಗಿತ್ತು. ಭಾರತದ ವಸಾಹತುಶಾಹಿ ಕೈಗಾರಿಕೀಕರಣ ಇಂತಹ ಬದುಕನ್ನು ಅವರ ಮೇಲೆ ಹೇರಿತ್ತು.

ಭಾರತದ 1911 ರ ಜನಗಣತಿಯ ಪ್ರಕಾರ, ಬಾಂಬೆಯ ಜನಸಂಖ್ಯೆಯ 69% ದಷ್ಟು ಜನರು ಒಂದೇ ಕೋಣೆಯ ವಸತಿ ಸೌಕರ್ಯಗಳಲ್ಲಿ ವಾಸಿಸಬೇಕಾಗಿತ್ತು, ಇದರರ್ಥ ಸರಾಸರಿ 4 1/2 ಜನರು ಒಂದು ಸಣ್ಣ ಸರಿಯಾಗಿ ಗಾಳಿಯಾಡದ ಕೋಣೆಯಲ್ಲಿ ವಾಸಿಸುತ್ತಿದ್ದರು. 1931 ರ ಜನಗಣತಿಯು ಇದು 74% ಕ್ಕೆ ಏರಿತ್ತೆಂಬ ಮತ್ತಷ್ಟು ಹದಗೆಟ್ಟ ಸ್ಥಿತಿಯನ್ನು ಬೆಳಕಿಗೆ ತಂದಿತು, ಇಂತಹ ಪರಿಸ್ಥಿತಿ ಬಾಂಬೆಗಷ್ಟೇ ಸೀಮಿತವಾಗಿರಲಿಲ್ಲ. ಕಲ್ಕತ್ತಾ, ಹೌರಾ, ಕಾನ್ಪುರ್, ಮದ್ರಾಸ್ ಮತ್ತು ಭಾರತದ ಎಲ್ಲಾ ಕೈಗಾರಿಕಾ ಕೇಂದ್ರಗಳ ಪರಿಸ್ಥಿತಿಗಳನ್ನು ಪ್ರತಿನಿಧಿಸುವ ಸಾಮಾನ್ಯ ಚಿತ್ರಣವಾಗಿತ್ತು.

ಭಾರತದ ಟ್ರೇಡ್ ಯೂನಿಯನ್ ಚಳವಳಿಯ ಆರಂಭಿಕ ಹಂತದ ಪ್ರಖ್ಯಾತ ನಾಯಕ ಬಿ.ಶಿವರಾವ್

ಪುಟ 15 ನೋಡಿ

ಸರ್ಕಾರದ 'ಅಸಲೀ ಅಸಹಾಯಕತೆ' ಮತ್ತು ಅಂಬಾನಿ-ಅದಾನಿ ಕನೆಕ್ಷನ್

ಭಾರತ್ ಬಂದ್‌ಗೆ ವ್ಯಾಪಕ ಜನಸ್ಪಂದನೆಯ ನಂತರವೂ ಮೋದಿ ಸರಕಾರ ರೈತರ ಆಗ್ರಹಗಳಿಗೆ ಕಿವಿಗೊಡದಿರುವ ಹಿನ್ನೆಲೆಯಲ್ಲಿ ರೈತ ಸಂಘಟನೆಗಳು ತಮ್ಮ ಹೋರಾಟವನ್ನು ತೀವ್ರಗೊಳಿಸುವುದರ ಭಾಗವಾಗಿ ಅಂಬಾನಿ ಮತ್ತು ಅದಾನಿ ಕಂಪನಿಗಳ ಬಹಿಷ್ಕಾರಕ್ಕೆ ಕರೆ ನೀಡಿವೆ.

ಇದು ಸಹಜವಾಗಿಯೇ ಕಳೆದ ಆರು ವರ್ಷಗಳಲ್ಲಿ 'ಅಚ್ಛೇ ದಿನ್'ಗಳನ್ನು ಕಂಡಿರುವ ಅದಾನಿ ಅಂಬಾನಿಗಳು ಕ್ರುದ್ಧರಾಗುವಂತೆ ಮಾಡಿರುವಂತೆ ಕಾಣುತ್ತದೆ-ವಿಶೇಷವಾಗಿ ಅದಾನಿ ಕಂಪನಿಗಳ ವಕ್ತಾರರನ್ನು.

ಭಾರತ ಆಹಾರ ನಿಗಮ(ಎಫ್‌ಸಿಐ)ನ ಆಧುನಿಕ ಹಗೇವುಗಳ ನಿರ್ಮಾಣದ ಮತ್ತು ನಿರ್ವಹಣೆಯ ಕಾಂಟ್ರಾಕ್ಟ್ ಪಡೆದಿರುವ ಅದಾನಿ ಗುಂಪಿನ ವಕ್ತಾರರು "ನಮ್ಮ ಕಂಪನಿಗೆ ಧಾನ್ಯ ಸಂಗ್ರಹದ ಪ್ರಮಾಣವನ್ನಾಗಲೀ, ಧಾನ್ಯ ಬೆಲೆಯನ್ನಾಗಲೀ ನಿರ್ಧರಿಸುವುದರಲ್ಲಿ ಯಾವುದೇ ಪಾತ್ರ ಇಲ್ಲ., ನಾವು ಎಫ್‌ಸಿಐ ಗೆ ಸೇವಾದಾರರು/ ಮೂಲರಚನೆ ಒದಗಿಸುವವರು ಮಾತ್ರ" ಎಂದು 'ಸ್ಪಷ್ಟೀಕರಣ' ನೀಡುತ್ತ "ನಮ್ಮಂತಹ ಜವಾಬ್ದಾರಿಯುತ ಕಾರ್ಪೊರೇಟ್‌ನ ಹೆಸರು ಕೆಡಿಸುವ ಮತ್ತು ಸಾರ್ವಜನಿಕರನ್ನು ತಪ್ಪು ದಾರಿಗೆಳೆಯುವ ಪ್ರಯತ್ನ" ಎಂದಿರುವುದಾಗಿ ವರದಿಯಾಗಿದೆ(ಇಂಡಿಯನ್ ಎಕ್ಸ್‌ಪ್ರೆಸ್, ಡಿ.9)

ಇರಬಹುದು, ಆದರೆ ಇದಕ್ಕೆ ಸಂಬಂಧಪಟ್ಟಂತೆ ಒಂದು ಮಾಹಿತಿ ಕುತೂಹಲಕಾರಿಯಾಗಿದೆ.

ಮಾರ್ಚ್ 2014ರಲ್ಲಿ ಎಫ್‌ಸಿಐಗೆ ಭಾರತ ಸರಕಾರದಿಂದ ಬರಬೇಕಾಗಿದ್ದ ಹಣ ರೂ. 45,633 ಕೋಟಿ. ಮಾರ್ಚ್ 2020ರ ವೇಳೆಗೆ ಇದು ರೂ. 2,49,000 ಕೋಟಿ ಆಗಿದೆ. ಭಾರತ ಸರಕಾರ ಮಾಡಿಕೊಂಡ ಈ ಹಣಕಾಸು ಫಜೀತಿಯಿಂದಾಗಿ ಎಫ್‌ಸಿಐ ಈಗ 3.5ಲಕ್ಷ ಕೋಟಿ ರೂ.ಗಳ ಸಾಲದಲ್ಲಿ ಮುಳುಗಿದೆ.

ಎಫ್‌ಸಿಐನ ದುರಾಡಳಿತ ಮತ್ತು ಅದನ್ನು ಶಿಥಿಲಗೊಳಿಸುವುದು ಅದಾನಿಗೆ ಆಹಾರಧಾನ್ಯಗಳ ಸಾರ್ವಜನಿಕ ದಾಸ್ತಾನಿನಲ್ಲಿ ಪ್ರಭಾವ ಬೀರಲು ಅನುವು ಮಾಡಿಕೊಡಲಿಕ್ಕಾಗಿ ಹೆಣೆದ ಮಹಾ ಕಾರ್ಯತಂತ್ರ, ಈ ಸರಕಾರದ ಕೃಷಿ ಕಾಯ್ದೆಗಳು ಈ ಪ್ರಕ್ರಿಯೆಯನ್ನು ಮುಂದೊಯ್ಯುವ, ಕ್ರೋಡೀಕರಿಸುವ ಕೆಲಸ ಮಾಡುತ್ತಿವೆ ಎಂದು ವಿಶ್ಲೇಷಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ರೈತರ **'ಸರ್ಕಾರ್ ಕೀ ಅಸ್ಲೀ ಮಜ್ಬೂರಿ- ಅಂಬಾನಿ ಅದಾನಿ ಔರ್ ಜಮಾಕೋರಿ'**(ಸರ್ಕಾರದ ಅಸಲೀ ಅಸಹಾಯಕತೆ- ಅಂಬಾನಿ ಅದಾನಿ ಮತ್ತು ಜಮಾಕೋರತೆ) ಎಂದು ಘೋಷಣೆಯನ್ನು ನೆನಪಿಸಿಕೊಳ್ಳಬಹುದು.

***

ಇನ್ನೊಂದು ಮಾಹಿತಿ-ಹರ್ಯಾಣ ಸರಕಾರದ ಪಟ್ಟಣ ಮತ್ತು ಗ್ರಾಮ ಯೋಜನಾ ನಿರ್ದೇಶನಾಲಯ ಈ ಮೂರು ಸುಗ್ರೀವಾಜ್ಞೆಗಳನ್ನು ಹೊರಡಿಸುವ ಒಂದು ತಿಂಗಳ ಮೊದಲು ಪಾಣೀಪತ ಜಿಲ್ಲೆಯಲ್ಲಿ ಅದಾನಿ ಅಗ್ರೊ ಲಾಜಿಸ್ಟಿಕ್ಸ್ ಕಂಪನಿಗೆ ಕೃಷಿ ಉತ್ಪನ್ನಗಳಿಗೆ 1000 ದಾಸ್ತಾನು ವ್ಯವಸ್ಥೆಗಳನ್ನು ನಿರ್ಮಿಸಲು ಭೂಬಳಕೆ ಬದಲಾವಣೆಗೆ ಅನುಮತಿ ಮಂಜೂರು ಮಾಡಿತು.


***

ಮತ್ತೊಂದು ಮಾಹಿತಿ- ಕಳೆದ ವರ್ಷ ಎಪ್ರಿಲ್ ಮತ್ತು ಮೇ ತಿಂಗಳ ನಡುವೆ 9 ಕೃಷಿ ಮೂಲರಚನೆ ಮತ್ತು ಸಾಗಾಣಿಕೆ ಕಂಪನಿಗಳನ್ನು ತೆರೆದಿದೆ.

***

ಮತ್ತಷ್ಟು ಸಂಬಂಧಿತ ಸುದ್ದಿಗಳು

ಅಕ್ಟೋಬರ್ 4 ರಂದು ಕೇಂದ್ರ ಕೃಷಿ ಮಂತ್ರಿಗಳು ಹೊಸ ಕೃಷಿ ಧೋರಣೆಯ ಪರಿಣಾಮಗಳ ಕುರಿತು 'ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್'ನ ಸಂಪಾದಕೀಯ ನಿರ್ದೇಶಕರೊಂದಿಗೆ ಸಂವಾದ ನಡೆಸಿದರು. **ಇದನ್ನು ಪ್ರಸ್ತುತಪಡಿಸಿದ್ದು 'ಅದಾನಿ'!**



***

ಕಳೆದ ತಿಂಗಳು ಪ್ರಧಾನಿಗಳು ತಮ್ಮ 'ಮನ್ ಕೀ ಬಾತ್' ನಲ್ಲಿ ಈ ಹೊಸ ಕಾಯ್ದೆಗಳ ಪ್ರಯೋಜನ ಪಡೆದ ಇಬ್ಬರು ರೈತರು ಜಿತೇಂದ್ರ ಭೋಯ್ ಮತ್ತು ಮಹಮ್ಮದ್ ಅಸ್ಲಾಂ ರವರ ಉದಾಹರಣೆಗಳನ್ನು ಕೊಟ್ಟರು.

ರೈತರ 'ದಿಲ್ಲಿ ಚಲೋ' ದಿಲ್ಲಿ ಸುತ್ತಮುತ್ತ ಪರಿಸ್ಥಿತಿ ಗಂಭೀರ ಗೊಳ್ಳಲಾರಂಭಿಸಿದ ಮೇಲೆ ಇಂಡಿಯ ಟುಡೇ, ನ್ಯೂಸ್ 18 ಇಂತಹ 'ಫಲಾನುಭವಿ ರೈತರ' ಬಗ್ಗೆ ದೇಶದ ವಿವಿಧ ಸ್ಥಳಗಳಿಂದ 'ಗ್ರೌಂಡ್ ರಿಪೋರ್ಟ್'ಗಳನ್ನು, ಅಂದರೆ ತಾವೇ ಆ ರೈತರ ಬಳಿ ಹೋಗಿ ಮಾಹಿತಿ ಸಂಗ್ರಹಿಸಿದಂತೆ ವರದಿಗಳನ್ನು ಪ್ರಕಟಿಸಿದವು.


ವಾಸ್ತವವಾಗಿ ಈ ಎಲ್ಲ 'ಮಾಹಿತಿ'ಗಳ ಮೂಲ ಕೇಂದ್ರ ಸುದ್ದಿ ಮಂತ್ರಿಗಳ ಕಚೇರಿ ಎಂದು ತಿಳಿದು ಬಂದಿರುವುದಾಗಿ 'ನ್ಯೂಸ್‌ಲಾಂಡ್ರಿ' ವೆಬ್ ಪತ್ರಿಕೆ ಹೇಳಿದೆ (ಡಿ.10).

***

ರೈತ ಸಂಘಟನೆಗಳು ಮೂರು ಕಾಯ್ದೆಗಳಿಗೆ ತಿದ್ದುಪಡಿಗಳ ಸರಕಾರದ 'ಪ್ರಸ್ತಾವ'ಗಳನ್ನು ಪರಿಶೀಲಿಸಿ ಮಾತುಕತೆಗಳನ್ನು ಪುನರಾರಂಭಿಸಬೇಕು ಎಂದು ಮನವಿ ಮಾಡಿಕೊಂಡ ಪತ್ರಿಕಾ ಗೋಷ್ಠಿಯಲ್ಲೂ, ಕೃಷಿ ಮಂತ್ರಿಗಳೊಂದಿಗೆ ಭಾಗವಹಿಸಿದ್ದ, ಬಳಕೆದಾರರ ವ್ಯವಹಾರಗಳ ಮಂತ್ರಿಗಳು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ, **ರೈತರನ್ನು ದಾರಿ ತಪ್ಪಿಸಲಾಗುತ್ತಿದೆಯೇ ಎಂದು ಮಾಧ್ಯಮಗಳು ತಮ್ಮ 'ತನಿಖಾ ಕೌಶಲ'ಗಳನ್ನು ಬಳಸಿಕೊಂಡು ಕಂಡುಹಿಡಿಯಬೇಕು** ಎಂದು ಸಲಹೆ ನೀಡಿದರು! (ದಿ ಹಿಂದು, ಡಿ.11)

***

ಈ ನಡುವೆ ರೈತರು ಮತ್ತು ಅವರ ಉತ್ಪನ್ನಗಳನ್ನು ಕೊಳ್ಳುವವರ ನಡುವೆ ದಲ್ಲಾಳಿಗಳ ಹಸ್ತಕ್ಷೇಪವನ್ನು ತಡೆಯಲಿಕ್ಕಾಗಿಯೇ ಈ ಕಾಯ್ದೆಗಳು ಎನ್ನುವ ಸರಕಾರದ ಮಾತನ್ನು ಕೆಲವರು ಸರಕಾರದ ವಿರುದ್ಧವೇ ತಿರುಗಿಸಿದ್ದಾರೆ, ನಾವು ಅಂಬಾನಿ-ಅದಾನಿಯವರೊಡನೇ ಮಾತುಕತೆ ನಡೆಸುತ್ತೇವೆ, ನೀವ್ಯಾಕೆ ಮಧ್ಯದಲ್ಲಿ ಎಂಬ ಗೇಲಿ ಮಾತೂ ಕೇಳಬಂದಿದೆ!



ಹೋಗಿ, ನಿಮ್ಮ ಬಾಸನ್ನು ಕರೆಯಿರಿ | ಹೇಳು | ಮಧ್ಯವರ್ತಿಗಳು ಬೇಡಾ ಅಂದೆ. ಅಂಬಾನಿ-ಅದಾನಿ ಮಾತ್ರ!

ವ್ಯಂಗ್ಯಚಿತ್ರ ಕೃಪೆ: ಅರವಿಂದ ತೆಗ್ಗಿನಮಠ, ಬಟ್‌ಸರ್.ಕಾಂ

ಗೋಹತ್ಯೆ ನಿಷೇದ ಕಾಯ್ದೆ ವಾಪಾಸಾತಿಗೆ ಆಗ್ರಹ

ಸದನದಲ್ಲಿ ಚರ್ಚೆಗೂ ಅವಕಾಶ ಕೊಡದೇ ತರಾತುರಿಯಲ್ಲಿ ಅಂಗೀಕರಿಸಲಾದ 'ಗೋಹತ್ಯೆ ನಿಷೇಧ ಮಸೂದೆ -2020' ಒಂದೆಡೆ ರೈತಾಪಿ ಸಮುದಾಯದ ಆರ್ಥಿಕತೆಗೆ ದೊಡ್ಡ ಪೆಟ್ಟು ಕೊಡಲಿದೆ ಮತ್ತು ಜನತೆಯ ಆಹಾರದ ಹಕ್ಕಿನ ಮೇಲೆ ನಡೆಸಿದ ದಾಳಿಯಾಗಿದ್ದು ಸಮಾಜದ ಸ್ವಾಸ್ಥ್ಯವನ್ನು ಹಾಳುಗೆಡಹುವ ಇಂತಹ ಅಪ್ರಜಾಸತ್ತಾತ್ಮಕ ಕಾಯ್ದೆಯನ್ನು ವಾಪಾಸು ಪಡೆಯಬೇಕೆಂದು 'ಸೌಹಾರ್ದ ಕರ್ನಾಟಕ' ವು ಆಗ್ರಹಿಸಿದೆ.

ಗೋವು ಒಳಗೊಂಡು ಜಾನುವಾರುಗಳನ್ನು ರಕ್ಷಿಸಲು ಈಗಾಗಲೇ ಕಾಯ್ದೆ ಇರುವಾಗ ಇಂತಹ ಕಾಯ್ದೆಯನ್ನು ತರುವುದರ ಅವಶ್ಯಕತೆಯಾದರೂ ಏನಿದೆ? ಭಾರತದ ಸಂವಿಧಾನವು ಪ್ರತಿಯೊಬ್ಬ ಭಾರತೀಯ ಪ್ರಜೆಗೆ ಆಹಾರ, ಉಡುಗೆ, ಮತಧರ್ಮ, ಉದ್ಯೋಗ ಮುಂತಾದ ಹಕ್ಕುಗಳ ಆಯ್ಕೆಯ ಸ್ವಾತಂತ್ರ್ಯವನ್ನು ನೀಡಿದೆ. ಈ ಮಸೂದೆ ಅಂತಹ ನಾಗರೀಕ ಹಕ್ಕನ್ನು ನಿರ್ಬಂಧಿಸುತ್ತದೆ. ಜಾನುವಾರಿಗೆ ಪ್ರಮಾಣಪತ್ರ ನೀಡುವ ಪೂರ್ಣ ಅಧಿಕಾರವನ್ನು ನೇಮಕ ಮಾಡಲಾದ ಅಧಿಕಾರಿಗೆ ನೀಡಿರುವುದು ಸನ್ನಿವೇಶದ ದುರುಪಯೋಗ ಮತ್ತು ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಡಬಹುದು. ಇದು ರೈತರಿಗೆ ಮತ್ತಷ್ಟೂ ತೊಂದರೆಗಳನ್ನು ಹುಟ್ಟು ಹಾಕಬಹುದು.

ಜಾನುವಾರುಗಳನ್ನು ಸಂರಕ್ಷಿಸಲು 'ಉತ್ತಮ ನಂಬಿಕೆ'ಯಿಂದ ಕಾರ್ಯ ನಿರ್ವಹಿಸುವ ವ್ಯಕ್ತಿಗಳ ಮೇಲೆ ಯಾವುದೇ ಕ್ರಮವನ್ನು ವಹಿಸುವಂತಿಲ್ಲ ಎನ್ನುವ ಮುಕ್ತ ಅಧಿಕಾರವು ಕಾನೂನೇತರ ಶಕ್ತಿಗಳು ಯಾರ ಮೇಲೆ, ಯಾವಾಗ ಬೇಕಾದರೂ ಧಾಳಿ ಮಾಡಿ ರಕ್ಷಣೆ ಪಡೆಯಲು ಅವಕಾಶ ನೀಡುತ್ತದೆ. ಈ ಮೂಲಕ ಕಾಯ್ದೆ ಜಾರಿಗೊಳಿಸುವ ಅಧಿಕಾರವನ್ನು ಖಾಸಗಿ ಗುಂಪಿಗೆ, ಪಡೆಗಳಿಗೆ ಅಥವಾ ವ್ಯಕ್ತಿಗಳಿಗೆ ಕೊಡುವುದು ಮತ್ತು ಜಾನುವಾರುಗಳನ್ನು ತಡೆಯುವ ಹೆಸರಿನಲ್ಲಿ ಕಾನೂನು ಅವರ ಕೈಗೆ ನೀಡಿರುವುದು, ಗೋರಕ್ಷಕರೆಂಬ ಹೆಸರಿನಲ್ಲಿ ಯಾರು ಬೇಕಾದರೂ ಧಾಳಿಗಳನ್ನು ನಡೆಸಲು ಮುಕ್ತ ಅವಕಾಶ ಕಲ್ಪಿಸುವುದು ಕಾನೂನು ಬದ್ಧ ಆಡಳಿತ, ಸುವ್ಯವಸ್ಥೆಯನ್ನೇ ಹಾಳು ಮಾಡಬಲ್ಲದು. ಶಿಕ್ಷೆಯ ಅವಧಿ, ದಂಡದ ಮೊತ್ತವೂ ಅತ್ಯಧಿಕವಾಗಿದೆ.

ಇದುವರೆಗೂ ಬಜರಂಗದಳ, ಗೋರಕ್ಷಕದಳ ಗಳಂತಹ ಸಂಘಪರಿವಾರ-ಅದರ ಅಂಗಸಂಸ್ಥೆಗಳು ರಾಜ್ಯದ ಹಲವು ಕಡೆಗಳಲ್ಲಿ ನಡೆಸುತ್ತಾ ಬಂದ ಗೂಂಡಾಗಿರಿ, ಹಿಂಸಾತ್ಮಕ ಪುಂಡಾಟಿಕೆಗಳಿಗೆ ಕಾನೂನಾತ್ಮಕ ಸಂರಕ್ಷಣೆಯನ್ನು ಕೊಡುವ ಕಾಯ್ದೆಯಾಗಿರುವುದು, ಅತ್ಯಂತ ಅಪಾಯಕಾರಿ ಕ್ರಮವಾಗಿದೆ ಎಂದು ಸೌಹಾರ್ದ ಕರ್ನಾಟಕ ಅಭಿಪ್ರಾಯಪಟ್ಟಿದೆ.

ಈ ಕಾಯ್ದೆಯು ಜಾನುವಾರುಗಳನ್ನು ರಕ್ಷಿಸುವುದಕ್ಕಿಂತ ಹೆಚ್ಚಾಗಿ ಸಮಾಜದಲ್ಲಿ ದ್ವೇಷ-ತಲ್ಲಣಗಳನ್ನು ಹುಟ್ಟು ಹಾಕಿ ಜನತೆಯನ್ನು ವಿಭಜಿಸಲು ಬಳಸುವ ವಿಪುಲ ಸಾಧ್ಯತೆಗಳಿವೆ. ಈ ಹಿಂದೆ ಗೋ ರಕ್ಷಣೆಯ ಹೆಸರಿನಲ್ಲಿ ನಡೆದಿರುವ ಹಲವಾರು ಹಿಂಸಾತ್ಮಕ ವಿದ್ಯಮಾನಗಳನ್ನು ಗಮನಿಸಿದರೆ ಈ ಸಂಗತಿಯು ಸ್ಪಷ್ಟವಾಗುತ್ತದೆ.

ಸದನ ನಡೆಯುತ್ತಿರುವಾಗ ಇಂತಹ ವಿವಾದಾತ್ಮಕ ವಿಷಯವುಳ್ಳ ಮಸೂದೆಯನ್ನು ಅಧ್ಯಯನ ಮಾಡಲು ಮತ್ತು ಅಭಿಪ್ರಾಯ ನೀಡಲು ಯಾರಿಗೂ ಅವಕಾಶವನ್ನೇ ಕೊಡದೇ ಏಕಾಏಕಿ ಅಂಗೀಕಾರಕ್ಕೆ ಮಂಡಿಸುವ ಮೂಲಕ ರಾಜ್ಯ ಸರ್ಕಾರದ ಈ ಅಪ್ರಜಾಸತ್ತಾತ್ಮಕ ನಡೆಯು ಸಂಸದೀಯ ಪ್ರಜಾಪ್ರಭುತ್ವದ ಉನ್ನತ ಪರಂಪರೆಯನ್ನು ಧಿಕ್ಕರಿಸಿದೆ. ಇದು ಆತಂಕಕಾರಿ ಬೆಳವಣಿಗೆ.

ರೈತರು, ಕಾರ್ಮಿಕರು-ದುಡಿಯುವ ಜನತೆ ಸಂಕಷ್ಟದಲ್ಲಿ ಇರುವಾಗ ಇಂತಹ ಕಾಯ್ದೆಯನ್ನು ತಂದಿರುವುದು ಜನತೆಯ ಗಮನವನ್ನು ಬೇರೆ ದಿಕ್ಕಿಗೆ ಸೆಳೆಯುವ ಪ್ರಯತ್ನವಾಗಿದೆ ಎಂದು ಸೌಹಾರ್ದ ಕರ್ನಾಟಕ ಅಭಿಪ್ರಾಯ ಪಡುತ್ತದೆ.

ಈ ಕಾಯ್ದೆ ಜಾರಿಯಾದಲ್ಲಿ ಹಾಲು ಹಾಗೂ ಚರ್ಮ, ಮಾಂಸದ ಉದ್ಯಮಗಳನ್ನು ತೀವ್ರವಾಗಿ ಬಾಧಿಸಲಿದೆ. ಈ ಉದ್ಯಮಗಳನ್ನು ಕಾರ್ಪೊರೇಟ್ ಗಳಿಗೆ ವಹಿಸಿ ಕೊಡಲು ಮಾರ್ಗ ಸೃಷ್ಟಿಸಲಿದೆ. ಉದ್ಯೋಗದ ಮೇಲೂ ಹಾನಿ ತಟ್ಟಲಿದೆ. ಸಮಾಜದ ಸ್ವಾಸ್ಥ್ಯಕ್ಕೆ, ಆರ್ಥಿಕತೆಗೂ ಹಾನಿ ತರುವ ಈ ಕಾಯ್ದೆಯನ್ನು ಕೂಡಲೇ ವಾಪಸು ಪಡೆಯ ಬೇಕೆಂದು ಸೌಹಾರ್ದ ಕರ್ನಾಟಕ ವು ಸರಕಾರಕ್ಕೆ ಆಗ್ರಹಿಸಿದೆ.

ಸಂವಿಧಾನದ ವಿಧಿ ವಿಧಾನಗಳನ್ನು ಪಾಲಿಸದೇ ಅಂಗೀಕರಿಸಿರುವ, ಸೌಹಾರ್ದ ಬದುಕಿಗೆ, ಜನತೆಯ ಹಕ್ಕುಗಳಿಗೆ ಆತಂಕ ಸೃಷ್ಟಿಸುವ ಈ ಮಸೂದೆಗೆ ಅಂಕಿತ ಹಾಕದೇ ವಾಪಾಸು ಕಳಿಸಬೇಕು ಎಂದು ಮಾನ್ಯ ರಾಜ್ಯಪಾಲರನ್ನು ವಿನಂತಿಸುತ್ತೇವೆ.

ಈ ಮಸೂದೆಯನ್ನು ವಾಪಾಸು ಪಡೆಯಲು ಸರಕಾರವನ್ನು ಒತ್ತಾಯಿಸಿ ಜನತೆ ಪ್ರತಿಭಟಿಸಬೇಕಿದೆ.

ಸಾರಿಗೆ ನೌಕರರ ಮುಷ್ಕರ ಬೇಡಿಕೆ ಈಡೇರಿಸಲು ಸಿಪಿಐ(ಎಂ) ಒತ್ತಾಯ

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ನೌಕರರು ನಡೆಸಿರುವ ಮುಷ್ಕರದ ಬೇಡಿಕೆಗಳ ಈಡೇರಿಕೆಗೆ ಅಗತ್ಯ ಕ್ರಮವಹಿಸಲು ರಾಜ್ಯ ಬಿಜೆಪಿ ಸರ್ಕಾರವು ಮುಂದಾಗಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲಾ ಸಮಿತಿಗಳು ಒತ್ತಾಯಿಸಿವೆ. ಸಾರಿಗೆ ನೌಕರರು ನಿರಂತರವಾಗಿ ತಮ್ಮ ಬೇಡಿಕೆಗಳಿಗಾಗಿ ಒತ್ತಾಯಿಸುತ್ತಾ ಬರುತ್ತಿದ್ದಾರೆ. ಆದರೆ ಸರ್ಕಾರಗಳು ಮಾತ್ರ ಅವರ ಬೇಡಿಕೆಗಳ ಪರಿಹಾರಕ್ಕೆ ಅಗತ್ಯ ಕ್ರಮವಹಿಸದೆ ಇರುವುದೇ ಸದ್ಯದ ದಿಢೀರ್ ಮುಷ್ಕರಕ್ಕೆ ಕಾರಣವಾಗಿದೆ. ಆದ ಕಾರಣ ಕೂಡಲೇ ಸಾರಿಗೆ ನೌಕರರ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸಿ ಬೇಡಿಕೆ ಈಡೇರಿಕೆಗೆ ಅಗತ್ಯ ಕ್ರಮವನ್ನು ಹೊಣೆಗಾರಿಕೆಯಿಂದ ನಿರ್ವಹಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಸಾರಿಗೆ ನೌಕರರು ನಡೆಸಿದ ಪಾದಯಾತ್ರೆ ವಿಧಾನಸೌಧ ಚಲೋ ಸ್ಥಳಕ್ಕೆ ರಾಜ್ಯ ಸರ್ಕಾರದ ಸಾರಿಗೆ ಸಚಿವರು ಅಥವಾ ಪ್ರತಿನಿಧಿಗಳು ಹೋಗಿ ಮನವಿ ಪತ್ರ ಸ್ವೀಕರಿಸಿ ಬೇಡಿಕೆ ಪರಿಶೀಲನೆಗೆ ಕ್ರಮವಹಿಸುವ ಬದಲು ಸಾರಿಗೆ ನೌಕರರನ್ನು ಬಂಧಿಸಿ ಹೋರಾಟದ ಧ್ವನಿಯನ್ನು ಅಡಗಿಸಲು ಮುಂದಾದ ಬಿಜೆಪಿ ಸರ್ಕಾರದ ಹೊಣೆಗೇಡಿ ಕ್ರಮವೇ ಇಂತಹ ಮುಷ್ಕರಕ್ಕೆ ನೇರ ಕಾರಣವಾಗಿದೆ. ರಾಜ್ಯ ಬಿಜೆಪಿ ಸರ್ಕಾರವು ತನ್ನ ರಾಜಕೀಯ ಹಿತಾಸಕ್ತಿಗಾಗಿ ಶಾಸನ ರೂಪಿಸುವಲ್ಲಿ ಮತ್ತು ಕಾರ್ಪೊರೇಟ್ ಬಂಡವಾಳಗಾರರ ಹಿತ ಕಾಯುವಲ್ಲಿ ತಲ್ಲೀನವಾಗಿದ್ದು ಜನತೆಯ ಸಂಕಷ್ಟಗಳಿಗೆ ಸ್ಪಂದಿಸುವಲ್ಲಿ ಪೂರ್ಣವಾಗಿ ವಿಫಲವಾಗಿದೆ. ಅದರ ಭಾಗವಾಗಿ ಸಾರಿಗೆ ನೌಕರರ ಹೋರಾಟವನ್ನು ನಿರ್ಲಕ್ಷಿಸಿ ಮನವಿ ಸ್ವೀಕರಿಸದೆ ಉದ್ಧಟತನ ತೋರಿದ ಬೇಜವಾಬ್ದಾರಿ ಕ್ರಮದಿಂದಾಗಿ ಪ್ರಸ್ತುತ ಸಾರಿಗೆ ನೌಕರರ ಮುಷ್ಕರದ ಬಿಸಿಯನ್ನು ಮಹಾನಗರದ ಜನತೆ ಅನುಭವಿಸುವಂತಾಗಿದೆ.

ಬಿಜೆಪಿ ಸರ್ಕಾರದ ಜನದ್ರೋಹಿ ವಂಚಕ ಕ್ರಮಗಳಿಂದಾಗಿ ನಿರಂತರವಾಗಿ ರೈತರು, ಕಾರ್ಮಿಕರು ಇದೀಗ ಸಾರಿಗೆ ನೌಕರರು ಹೋರಾಟ, ಮುಷ್ಕರ ನಿರತರಾಗಬೇಕಾಗಿ ಬಂದಿದೆ. ಜನತೆಯ ಸಂಕಷ್ಟವನ್ನು ಮನಗಾಣುವಲ್ಲಿ ಪೂರ್ಣವಾಗಿ ವಿಫಲವಾಗಿದೆ. ಕೋವಿಡ್-19 ಲಾಕ್ಡೌನ್ ಸಂದರ್ಭದಲ್ಲಿ ಮತ್ತು ಮುಂದುವರೆದ ಕಾಲಾವಧಿಯಲ್ಲಿ ಸರ್ಕಾರವು ನಡೆದುಕೊಂಡು ಬಂದ ರೀತಿಯು ಜನತೆಯಲ್ಲಿ ಅಪಾರ ಪ್ರಮಾಣದ ಅಸಂತೃಪ್ತಿಯನ್ನು ಉಂಟುಮಾಡಿದೆ. ಅದು ಆಕ್ರೋಶವಾಗಿ ಇದೀಗ ಹೊರಹೊಮ್ಮಲು ಮುಂದಾಗಿದೆ. ಅದರ ಪ್ರತೀಕವಾಗಿ ಸಾರಿಗೆ ನೌಕರರ ದಿಢೀರ್ ಮುಷ್ಕರವನ್ನು ಮಹಾನಗರದ ಜನತೆಯು ಸಹಾನುಭೂತಿಯಿಂದ ಬೆಂಬಲಿಸಿ ಸಹಕರಿಸಬೇಕೆಂದು ಸಿಪಿಐ(ಎಂ) ಮನವಿ.

ಎರಡನೇ ತ್ರೈಮಾಸಿಕದ ಜಿಡಿಪಿಯ ಬಗ್ಗೆ ಹಿಗ್ಗುವಂತಿಲ್ಲ



ಲಾಕ್‌ಡೌನಿನಿಂದ ಉಂಟಾದ ಕಂದಕದಿಂದ ಚೇತರಿಕೆಯ ವಿಧಾನವು ಹಲವು ಕಾರಣಗಳಿಂದ ನೆಮ್ಮದಿಗೆಡಿಸುತ್ತದೆ. ಬಳಕೆ/ಅನುಭೋಗ ಕಡಿತವಾಗಿರುವುದಂತೂ ಸ್ವಯಂವೇದ್ಯ. ಆದ್ದರಿಂದ ಈ 'ಚೇತರಿಕೆಯು' ಸಂಶಯಾಸ್ಪದವಾಗಿಯೂ ಮತ್ತು ಅಸ್ಥಿರವಾಗಿಯೂ ಕಾಣುತ್ತದೆ. ಅರ್ಥ ವ್ಯವಸ್ಥೆಯು ಉಸುಬಿನಲ್ಲಿ ಸಿಕ್ಕಿಕೊಂಡಿದೆ ಎಂಬುದನ್ನು ತೋರಿಸುವ ಎರಡನೇ ತ್ರೈಮಾಸಿಕದ (ಜುಲೈ-ಸೆಪ್ಟೆಂಬರ್) ಜಿಡಿಪಿಯ ಅಂದಾಜುಗಳ ಬಗ್ಗೆ ಸಂಭ್ರಮಿಸುವಂಥದ್ದು ಏನೂ ಇಲ್ಲ. ಇದರಿಂದ ಹೊರಬರಲು ಇರುವ ಒಂದೇ ದಾರಿ ಎಂದರೆ, ಜಾಗತಿಕ ಹಣಕಾಸು ಬಂಡವಾಳದ ಹುಕುಂಗಳನ್ನು ಧಿಕ್ಕರಿಸಿ, ಜನರ ಕೈಯಲ್ಲಿ ಕೊಳ್ಳುವ ಶಕ್ತಿಯನ್ನು ತುಂಬುವುದು. ಆದರೆ, ಮೋದಿ ಸರ್ಕಾರಕ್ಕೆ ಈ ಮಾರ್ಗವನ್ನು ಅನುಸರಿಸುವ ದಮ್ ಇಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಈ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದ (ಜುಲೈ-ಸೆಪ್ಟೆಂಬರ್) ಜಿಡಿಪಿಯ ಅಂದಾಜು ಅಂಕಿ-ಅಂಶಗಳ ಬಗ್ಗೆ ಸರ್ಕಾರದ ವಕ್ತಾರರು, ನಿರೀಕ್ಷೆಗಿಂತ "ಬಲವಾದ ಚೇತರಿಕೆ" ಆಗುತ್ತಿದೆ ಎಂದು ಹಿರಿ ಹಿರಿ ಹಿಗ್ಗುತ್ತಾ ಹೇಳಿರುವುದು ಒಂದು ವಿಡಂಬನೆಯಾಗಿ ಕಾಣುತ್ತದೆ. ಹಿಂದಿನ ಸಾಲಿನ (2019-20) ಇದೇ ಎರಡನೇ ತ್ರೈಮಾಸಿಕದೊಂದಿಗೆ ಹೋಲಿಕೆ ಮಾಡಿದಾಗ, 'ಕೇವಲ' 7.5ಶೇ. ಕುಸಿತವನ್ನು ಇವು ತೋರಿಸುತ್ತವೆ; 8ರಿಂದ 9ಶೇ.ದಷ್ಟು ಕುಸಿತವಾಗಬಹುದೆಂದು ಭಾವಿಸಲಾಗಿತ್ತು. ಆದರೆ ಈ 'ಚೇತರಿಕೆಯು' ಸಂಶಯಾಸ್ಪದವಾಗಿಯೂ ಮತ್ತು ಸಂಕಟಗಳನ್ನು ಹೆಚ್ಚಿಸುವಂತದ್ದೂ, ಅದರಿಂದಾಗಿ ಅಸ್ಥಿರವಾಗಿಯೂ ಕಾಣುತ್ತದೆ.

ಸಂಶಯಾಸ್ಪದ ಏಕೆಂದರೆ, ಜಿಡಿಪಿ ಅಂದಾಜಿನಲ್ಲಿನ ಲೋಪ-ದೋಷಗಳನ್ನು ಹೇಳುವ "ಅಸಾಂಗತ್ಯಗಳು" ಶೀರ್ಷಿಕೆಯ ಅಡಿಯಲ್ಲಿ ಗಣನೀಯ ಹೆಚ್ಚಳ ಆಗಿದೆ. ಹಿಂದಿನ ವರ್ಷದ ಎರಡನೇ ತ್ರೈಮಾಸಿಕದ "ಅಸಾಂಗತ್ಯಗಳು" ಶೀರ್ಷಿಕೆಯ ಅಡಿಯಲ್ಲಿ ತೋರಿಸಿದ್ದ ಶೇಕಡಾ ಅಂಶದ ಪ್ರಕಾರ ಲೆಕ್ಕಹಾಕಿದರೆ, ಈ ತ್ರೈಮಾಸಿಕದ ಜಿಡಿಪಿಯ ಅಂದಾಜು, -7.5% ಬದಲಾಗಿ -8.7% ಆಗುತ್ತದೆ. ಹಾಗಾಗಿ, "ಬಲವಾದ ಚೇತರಿಕೆ" ಎಂಬ ದಾವೆಯು ಸಂಖ್ಯಾಶಾಸ್ತ್ರೀಯವಾಗಿ ಹೇಳುವುದಾದರೆ, ನಿಜಕ್ಕೂ ಸಂಶಯಾಸ್ಪದವೇ.

ಜಿಡಿಪಿ ಅಂಕಿ-ಅಂಶಗಳು ಸರಿ ಇವೆ ಎಂದೇ ಸದ್ಯಕ್ಕೆ ಭಾವಿಸಿ, ವಿಷಯವನ್ನು ಪರಿಶೀಲಿಸೋಣ. ಲಾಕ್‌ಡೌನ್ ಕಾರಣದಿಂದಾಗಿ ಉತ್ಪಾದನೆಯು ಗಣನೀಯವಾಗಿ ಇಳಿದದ್ದರಿಂದ, ಲಾಕ್‌ಡೌನ್ ತೆರವಿನ ನಂತರ ಉತ್ಪಾದನೆಯಲ್ಲಿ ಚೇತರಿಕೆಯಾಗುವುದು ಅನಿವಾರ್ಯ ಮತ್ತು ಸ್ವಾಭಾವಿಕ. ಆದರೆ, ಈ ಚೇತರಿಕೆಯನ್ನು ಯಾವ ಅಂಶಗಳು ಪ್ರಭಾವಿಸಿವೆ ಎಂಬುದು ಒಂದು ಮುಖ್ಯವಾದ ಪ್ರಶ್ನೆ.

ಉದ್ಯೋಗಗಳು ಜಿಡಿಪಿಯೊಂದಿಗೆ ಸಂಬಂಧ ಹೊಂದಿರುವ ಕಾರಣದಿಂದ, ಜಿಡಿಪಿಯ ಅಂಕಿ ಅಂಶಗಳನ್ನು ಕಾಲ ಕಾಲಕ್ಕೆ ಗಮನಿಸುವುದು ಒಂದು ಮುಖ್ಯವೂ ಮತ್ತು ಪ್ರಸ್ತುತವೂ ಆದ ಕೆಲಸ. ಭಾರತದಂತಹ ಅರ್ಥವ್ಯವಸ್ಥೆಯಲ್ಲಿ ನಿರುದ್ಯೋಗವು ಸ್ಪಷ್ಟವಾಗಿ ಗುರುತಿಸುವ ರೀತಿಯದ್ದಲ್ಲ (open kind). ಬದಲಿಗೆ, ಸಾಂದರ್ಭಿಕ ಉದ್ಯೋಗ, ಬಿಟ್ಟು ಬಿಟ್ಟು ದೊರೆಯುವ ಉದ್ಯೋಗ ಮತ್ತು ಅರೆಕಾಲಿಕ ಉದ್ಯೋಗ ಮುಂತಾದ ರೀತಿಯಲ್ಲಿ ಅದು ವ್ಯಕ್ತವಾಗುತ್ತದೆ. ಆದ್ದರಿಂದ, ಜಿಡಿಪಿಯು ಏರುತ್ತಿದೆಯೋ ಅಥವಾ ಇಳಿಯುತ್ತಿದೆಯೋ ಎಂಬುದನ್ನು ಕಾರ್ಮಿಕರ ಆದಾಯದ ಏರಿಕೆ-ಇಳಿಕೆಯ ಮಟ್ಟವನ್ನು ನೋಡುವ ಮೂಲಕವೂ ತಿಳಿಯಬಹುದು. ಕಾರ್ಮಿಕರ ಆದಾಯವನ್ನು ತಿಳಿಯುವ ಒಂದು ಬದಲಿ (PROXY) ವಿಧಾನವೆಂದರೆ, ದುಡಿಯುವ ಜನರ ಬಳಕೆಯ (consumption) ಖರ್ಚುಗಳು. ಅವರ ಬಳಕೆಯ ಖರ್ಚುಗಳು ಏರಿಕೆಯಾಗದ ಜಿಡಿಪಿಯ ಬೆಳವಣಿಗೆಯನ್ನು ಅಥವಾ ಅಲ್ಪ ಪ್ರಮಾಣದ ಹೆಚ್ಚಳದೊಂದಿಗೆ ಏರಿಕೆಯಾದ ಜಿಡಿಪಿಯ ಬೆಳವಣಿಗೆಯನ್ನು ಒಂದು ಅಸಲಿ ಚೇತರಿಕೆ ಎನ್ನುವಂತಿಲ್ಲ.



ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್ ಪ್ರೆಸ್

ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಜಿಡಿಪಿ ಬೆಳವಣಿಗೆ ಹೇಗಿದೆ ಎಂಬುದನ್ನು ನೋಡೋಣ. ದುಡಿಯುವ ಜನರ ಬಳಕೆಯ ಖರ್ಚುಗಳ ಬಗ್ಗೆ ನಮಗೆ ಯಾವುದೇ ಮಾಹಿತಿ ಲಭ್ಯವಿಲ್ಲ. ಆದರೆ, ಉಪಭೋಗದ (consumption) ಬಗ್ಗೆ ಸಿಗುವ ಸಮಗ್ರ ಮಾಹಿತಿಯ ವಿಶ್ಲೇಷಣೆಯ ಮೂಲಕ ನಾವು ದುಡಿಯುವ ಜನರ ಉಪಭೋಗದ ಪ್ರಮಾಣದ ಬಗ್ಗೆ ಸ್ವಲ್ಪ ಮಟ್ಟಿಗಾದರೂ ಊಹಿಸಬಹುದು. ಎರಡನೇ ತ್ರೈಮಾಸಿಕದ ಜಿಡಿಪಿಯು 7.5% ಕಡಿಮೆಯಾಗಿದ್ದರೆ, ಖಾಸಗಿ ಬಳಕೆಯ ವೆಚ್ಚಗಳು 11.32% ಕಡಿಮೆಯಾಗಿವೆ. ಅಂದರೆ, 2019-20 ಮತ್ತು 2020-21ರ ಎರಡನೇ ತ್ರೈಮಾಸಿಕಗಳ ನಡುವಿನ ಅವಧಿಯಲ್ಲಿ, ಜಿಡಿಪಿಯಲ್ಲಿ ಖಾಸಗಿ ಬಳಕೆ ವೆಚ್ಚಗಳ (private consumption expenditure) ಪಾಲು ಕಡಿಮೆಯಾಗಿದೆ. ವಾಸ್ತವವಾಗಿ, 2019-20ನೇ ಸಾಲಿನ ಎರಡನೇ ತ್ರೈಮಾಸಿಕದಲ್ಲಿ 56.5% ಇದ್ದ ಬಳಕೆಯ ಪಾಲು 2020-21ರ ಎರಡನೇ ತ್ರೈಮಾಸಿಕದಲ್ಲಿ 54.2%ಗೆ ಇಳಿಯಿತು ಎಂಬುದನ್ನು ಅಂಕಿ-ಅಂಶಗಳು ಹೇಳುತ್ತವೆ.

ಲಾಕ್‌ಡೌನ್ ತೆರವಿನ ನಂತರ, ಅನುಕೂಲಸ್ಥ ಜನರ ಬಳಕೆಯು ಲಾಕ್‌ಡೌನ್-ಪೂರ್ವ ಮಟ್ಟಕ್ಕೆ ಮರಳಿರುವ ಸಾಧ್ಯತೆಯಿದೆ. ಏಕೆಂದರೆ, ಅವರ ಕೊಳ್ಳುವ ಶಕ್ತಿಯು ಯಾವತ್ತೂ ಕುಂದುವುದಿಲ್ಲ. ಅವರ ಆದಾಯ ಇಳಿದಾಗಲೂ ಸಹ ಅವರ ಬಳಿ ಸಾಕಷ್ಟು ಹಣ ಇದ್ದೇ ಇರುತ್ತದೆ. ಹಾಗಾಗಿ ಅವರ ಬೇಡಿಕೆಯು, ತುಲನಾತ್ಮಕವಾಗಿ, ಸ್ಥಿರವಾಗಿಯೇ ಇರುವಂಥದ್ದು. ಲಾಕ್‌ಡೌನ್ ನಿರ್ಬಂಧಗಳು ಸಡಿಲವಾದಂತೆಯೇ, ತಕ್ಷಣವೇ, ಅವರ ಬೇಡಿಕೆಯು ಪೂರೈಸಲ್ಪಡುತ್ತದೆ. ಹಾಗಾಗಿ, ಜಿಡಿಪಿಯಲ್ಲಿ ಅವರ ಖರ್ಚಿನ ಪಾಲು ಹೆಚ್ಚಲೇಬೇಕು, ಹೆಚ್ಚುವರಿ ಉತ್ಪಾದನೆಯ ಮೂಲಕ ಅಲ್ಲದಿದ್ದರೂ, ಇದ್ದ ದಾಸ್ತಾನಿನ ಬಳಕೆಯ ಮೂಲಕವಾಗಿಯಾದರೂ. ಈ ಪ್ರಕಾರವಾಗಿ, ಜಿಡಿಪಿಯಲ್ಲಿ ಸ್ವಂತ/ಖಾಸಗಿ ಬಳಕೆ (private consumption) ವೆಚ್ಚಗಳ ಪಾಲು 11.32% ಕುಸಿತವಾಗಿದ್ದರೆ, ದುಡಿಯುವ ಜನರ ಬಳಕೆಯ ಕುಸಿತವು ಎರಡು ತ್ರೈಮಾಸಿಕಗಳ ನಡುವೆ 11.32%ಗಿಂತ ಹೆಚ್ಚಿನ ಪ್ರಮಾಣದಲ್ಲಿ ಕುಸಿದಿರಲೇಬೇಕಾಗುತ್ತದೆ. ಈ ಕುಸಿತಕ್ಕೆ ಅವರ ಕೊಳ್ಳುವ ಸಾಮರ್ಥ್ಯವು ಕಡಿಮೆಯಾಗಿರುವುದೇ ಕಾರಣವಾಗುತ್ತದೆ.

ಚೇತರಿಕೆಯು ಸ್ವಂತ/ಖಾಸಗಿ ಬಳಕೆಯ ವೆಚ್ಚಗಳ ಇಳಿಕೆಯ ಮೂಲಕ ಆಗಿದೆ ಎಂಬ ಸಂಗತಿಯನ್ನು ಗಣನೆಗೆ ತಗೊಂಡರೆ, ಅಂತಹ ಚೇತರಿಕೆಯು ದುಡಿಯುವ ಜನರ ಬಳಕೆಯ ಖರ್ಚುಗಳ ಇಳಿಕೆಯ ಮೂಲಕವೊ ಅಥವಾ ಜಿಡಿಪಿಯಲ್ಲಿ ಮಿಗುತಾಯದ ಪಾಲು ಹೆಚ್ಚಿದ ಕಾರಣದಿಂದಲೊ ಉಂಟಾಗಿದೆ ಎಂದು ಸಲೀಸಾಗಿ ಹೇಳಬಹುದು.

ಒಟ್ಟಾರೆಯಾಗಿ ಹೇಳುವುದಾದರೆ, ಸಂಕಟಗಳನ್ನು ಉಂಟು ಮಾಡುವ ಎರಡು ವಿಭಿನ್ನ ಪ್ರಕ್ರಿಯೆಗಳು ಜರುಗುತ್ತಿವೆ. ಮೊದಲನೆಯದು, ಕೊರೊನಾ ಸಾಂಕ್ರಾಮಿಕ ಉಂಟು ಮಾಡಿದ ಪರಿಣಾಮ. ಕೊರೊನಾ ಕಾರಣದಿಂದ ಹೇರಿದ ಲಾಕ್‌ಡೌನ್‌ನಿಂದಾಗಿ, ಜನರ ತಲಾ ಆದಾಯ ಮತ್ತು ತಲಾ ಬಳಕೆ ಇಳಿಕೆಯಾಗಿವೆ ಮತ್ತು ಜನರ ಜೀವನ ಮಟ್ಟವೇ ಇಳಿದಿದೆ. ಎರಡನೆಯದು, ತಲಾ ಆದಾಯ ಮತ್ತು ತಲಾ ಬಳಕೆಗಳ ಇಳಿಕೆಯಾಗುವಾಗ ಅದರ ಹೆಚ್ಚಿನ ಹೊಡೆತವು ದುಡಿಯುವ ಜನರ ಮೇಲೆ ಬಿದ್ದಿರುತ್ತದೆ. ಲಾಕ್‌ಡೌನ್ ತೆರವುಗೊಂಡ ನಂತರವೂ ಅವರ ದುಸ್ಥಿತಿ ಮುಂದುವರೆಯುತ್ತಿದೆ. ವರಮಾನಗಳು ಕಡಿಮೆಯಾಗುತ್ತಿರುವಾಗಲೂ ಹೆಚ್ಚುತ್ತಿರುವ ಮಿಗುತಾಯದ ಪರಿಣಾಮವಾಗಿ ಅವರ ದುಸ್ಥಿತಿ ಮುಂದುವರೆಯುತ್ತಿದೆ.

ಈ ಚೇತರಿಕೆಯ ಬಗ್ಗೆ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ಜಿಡಿಪಿಯಲ್ಲಿ ಸರ್ಕಾರದ ಖರ್ಚು-ವೆಚ್ಚಗಳ ಪಾಲು ಗಮನಾರ್ಹವಾಗಿ ಇಳಿಕೆಯಾಗಿದೆ. 2019-20ರ ಎರಡನೇ ತ್ರೈಮಾಸಿಕದಲ್ಲಿ 13% ಮಟ್ಟದಲ್ಲಿದ್ದ ಸರ್ಕಾರದ ಖರ್ಚು-ವೆಚ್ಚಗಳ ಪಾಲು, 2020-21ರ ಎರಡನೇ ತ್ರೈಮಾಸಿಕದಲ್ಲಿ 10.9%ಗೆ ಇಳಿದಿದೆ. ಅಂದರೆ, 2019-20 ಮತ್ತು 2020-21ರ ಎರಡನೇ ತ್ರೈಮಾಸಿಕಗಳ ನಡುವಿನ ಅವಧಿಯಲ್ಲಿ ಸರ್ಕಾರದ ಖರ್ಚು-ವೆಚ್ಚಗಳಲ್ಲಿ 22.2% ಕುಸಿತವಾಗಿದೆ. ಜಿಡಿಪಿಯ -7.5% ಕುಸಿತಕ್ಕೆ ಹೋಲಿಸಿದರೆ, ಇದು(-22.2%) ನಿಜಕ್ಕೂ ಒಂದು ಬೃಹತ್ ಕುಸಿತವೇ.

ಸಾಮಾನ್ಯವಾಗಿ, ಜಿಡಿಪಿ ಕುಸಿದರೆ ಸರ್ಕಾರದ ಆದಾಯವೂ ಕುಸಿಯುತ್ತದೆ. ಆದರೆ, ನೌಕರರ ವೇತನಗಳನ್ನು ಒಳಗೊಂಡ ಸರ್ಕಾರದ ದಿನನಿತ್ಯದ ಖರ್ಚು-ವೆಚ್ಚಗಳು (ಚಾಲ್ತಿ ವೆಚ್ಚಗಳು) ಇಳಿಯುವುದಿಲ್ಲ. ಹಾಗಾಗಿ, ಜಿಡಿಪಿಯಲ್ಲಿ ಸರ್ಕಾರದ ಖರ್ಚು-ವೆಚ್ಚಗಳ ಅನುಪಾತವು ಏರಬೇಕಾಗುತ್ತದೆ. ವಾಸ್ತವವಾಗಿ, ಖರ್ಚುಗಳನ್ನು ಪ್ರಜ್ಞಾಪೂರ್ವಕವಾಗಿ ಇಳಿಸುವ ಪ್ರಯತ್ನಗಳು ಇಲ್ಲದಿದ್ದರೆ, ಸರ್ಕಾರದ ಖರ್ಚುಗಳು "ಆವರ್ತಕ-ಪರ"ಕ್ಕಿಂತ "ಆವರ್ತಕ-ವಿರೋಧ"ವಾಗಿಯೇ ಇರುತ್ತವೆ. ಆದರೆ, ಮೋದಿ ಸರಕಾರವು ತನ್ನ ಚಾಲ್ತಿ ವೆಚ್ಚಗಳ ಗಾತ್ರವನ್ನು ಕಡಿತಗೊಳಿಸಿದೆ. ಆದಾಯ ಎಷ್ಟು ಕಡಿಮೆಯಾಗಿದೆಯೊ ಅದಕ್ಕಿಂತಲೂ ಹೆಚ್ಚಿನ ಅನುಪಾತದಲ್ಲಿ ತನ್ನ ವೆಚ್ಚಗಳನ್ನು ಕಡಿತಗೊಳಿಸಿದೆ. ಸಾಂಕ್ರಾಮಿಕದ ಸಂದರ್ಭದಲ್ಲಿ, ರೋಗ ಪರೀಕ್ಷೆ, ಚಿಕಿತ್ಸೆ, ಔಷದೋಪಚಾರ ಮುಂತಾದ ಕಾರ್ಯಗಳಿಗೆ ಖರ್ಚುಗಳನ್ನು ಗಣನೀಯವಾಗಿ ಹೆಚ್ಚಿಸಬೇಕಾದ ಸಮಯದಲ್ಲಿ ಮೋದಿ ಸರ್ಕಾರದ ಈ ಕ್ರಮವು, ಜಾಗತೀಕರಣಗೊಂಡ ಹಣಕಾಸು ಬಂಡವಾಳಕ್ಕೆ ಅದು ಎಷ್ಟರ ಮಟ್ಟಿಗೆ ಶರಣಾಗಲು ಬಯಸುತ್ತದೆ ಎಂಬುದನ್ನು ತೋರಿಸುತ್ತದೆ.

ಜಿಡಿಪಿಯಲ್ಲಿ ಖಾಸಗಿ/ಸ್ವಂತ ಬಳಕೆಯ ಖರ್ಚುಗಳು ಮತ್ತು ಸರ್ಕಾರದ ಖರ್ಚು-ವೆಚ್ಚಗಳು ಇಳಿಕೆಯಾದಾಗಲೂ ಕಾಣಿಸಿಕೊಳ್ಳುತ್ತಿರುವ ಈ ಚೇತರಿಕೆಯು, ಬಂಡವಾಳ ಹೂಡಿಕೆಯ (ಅದರಲ್ಲೂ ನಿರ್ದಿಷ್ಟವಾಗಿ ಸ್ಥಿರ ಬಂಡವಾಳದ) ಹೆಚ್ಚಳಕ್ಕೆ ಸಂಬಂಧಿಸುತ್ತದೆ. 2019-20ರ ಎರಡನೇ ತ್ರೈಮಾಸಿಕದೊಂದಿಗೆ ಹೋಲಿಸಿದರೆ ಬಂಡವಾಳ ಹೂಡಿಕೆಯೂ ಸಹ ಕಡಿಮೆಯೇ. ಆದರೆ, ಅರ್ಥವ್ಯವಸ್ಥೆಯು ಕುಸಿದು ಬಿದ್ದಿರುವ ಕಂದಕದ ಆಳಕ್ಕೆ ಹೋಲಿಸಿದರೆ, ಚೇತರಿಕೆಯು ಗಮನಾರ್ಹವಾಗಿದೆ ಎನ್ನಬಹುದು. ಈ ವರ್ಷದ ಮೊದಲನೆಯ ಮತ್ತು ಎರಡನೆಯ ತ್ರೈಮಾಸಿಕದ ಅಂಕಿಗಳನ್ನು ಹೋಲಿಸಿ ನೋಡಿದಾಗ, ಈ ಎರಡು ತ್ರೈಮಾಸಿಕಗಳ ನಡುವೆ ಜಿಡಿಪಿಯು 58% ಏರಿಕೆಯಾಗಿದೆ ಮತ್ತು ಈ ಏರಿಕೆಯು, ಸರ್ಕಾರಿ ಮತ್ತು ಖಾಸಗಿ ವಲಯದ ಸ್ಥಿರ ಬಂಡವಾಳ ಹೂಡಿಕೆಯ ಕಾರಣದಿಂದ ಸಾಧ್ಯವಾಗಿದೆ.

ಈ ಸ್ಥಿರ ಬಂಡವಾಳ ಹೂಡಿಕೆಯ ಹೆಚ್ಚಳವು ತಾಳಿಕೆ ಇಲ್ಲ. (unsustainable). ಒಂದು ವೇಳೆ ಹೂಡಿಕೆಯನ್ನು ಒತ್ತಾಯದ ಮೂಲಕ ಮಾಡಿಸಿದರೂ ಅದು ಹೆಚ್ಚು ಕಾಲ ಮುಂದುವರೆಯಲಾರದು. ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಮುನಿಸನ್ನು ಇಷ್ಟಪಡದ ಭಾಜಪ ಸರ್ಕಾರವು, ತನ್ನ ಖರ್ಚು ವೆಚ್ಚಗಳನ್ನು ಕಡಿತಗೊಳಿಸಿದರೂ ಸಹ, ಇಡೀ ವರ್ಷದ ವಿತ್ತೀಯ ಕೊರತೆಗೆ ಹಾಕಿಕೊಂಡಿದ್ದ ಮಿತಿಯನ್ನು ಅಕ್ಟೋಬರ್ ಅಂತ್ಯದೊಳಗೇ ಮೀರಿರುವ ವಾಸ್ತವವನ್ನು ಗಮನಿಸಿದರೆ, ಅದು ತನ್ನ ಹೂಡಿಕೆಯನ್ನು ನಿರ್ಬಂಧಿಸುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಇನ್ನೊಂದು ಕಡೆಯಲ್ಲಿ, ತಡೆ ಹಿಡಿದ ಈ ಹೂಡಿಕೆಯನ್ನು ಖಾಸಗಿ ವಲಯವು ಕೈಗೆತ್ತಿಕೊಳ್ಳುತ್ತದೆ ಎನ್ನುವಂತಿಲ್ಲ, ಏಕೆಂದರೆ, ಖಾಸಗಿ ಹೂಡಿಕೆಯು ಅನುಭೋಗದ ಹೆಚ್ಚಳವನ್ನು ಅವಲಂಬಿಸಿರುತ್ತದೆ.

ರಫ್ತುಗಳ ಬೆಳವಣಿಗೆಯು ಒಂದು ಹಂತದವರೆಗೆ ಖಾಸಗಿ ಬಂಡವಾಳ ಹೂಡಿಕೆಗೆ ಸ್ವಲ್ಪ ಮಟ್ಟಿನ ಉತ್ತೇಜನವನ್ನು ಒದಗಿಸುತ್ತದೆ, ನಿಜ. ಆದರೆ, ನಮ್ಮ ಒಟ್ಟು ಜಿಡಿಪಿಯಲ್ಲಿ ರಫ್ತಿನ ಪಾಲು ಬಹಳ ಸಣ್ಣದು. ಅಲ್ಲದೆ, ಕೊರೊನಾ ಸಾಂಕ್ರಾಮಿಕವು ಇಡೀ ವಿಶ್ವವನ್ನೇ ಆವರಿಸಿರುವ ಸನ್ನಿವೇಶದಲ್ಲಿ, ರಫ್ತುಗಳು ಹೆಚ್ಚುವ ಭರವಸೆ ಇಲ್ಲದ ಕಾರಣದಿಂದ ರಫ್ತು ವಲಯದಲ್ಲಿ ಖಾಸಗಿ ಬಂಡವಾಳ ಹೂಡಿಕೆಯಾಗುವುದಿಲ್ಲ. ಹಾಗಾಗಿ, ಖಾಸಗಿ ಬಂಡವಾಳ ಹೂಡಿಕೆಗೆ ಉತ್ತೇಜನವು ಆಂತರಿಕ ಬಳಕೆಯ ಹೆಚ್ಚಳದಿಂದಲೇ ಬರಬೇಕಾಗುತ್ತದೆ.

ಬಳಕೆಯು/ಅನುಭೋಗವು (consumption) ಸಾಂಕ್ರಾಮಿಕ-ಪೂರ್ವದ ಮಟ್ಟವನ್ನು ತಲುಪುವ ವರೆಗೂ, ಅರ್ಥವ್ಯವಸ್ಥೆಯಲ್ಲಿ ಈಗಾಗಲೇ ಸ್ಥಾಪಿತವಾದ ಸಾಮರ್ಥ್ಯದ ಬಳಕೆಯು ಅಪೂರ್ಣವಾಗಿಯೇ ಉಳಿಯುತ್ತದೆ. ಆದ್ದರಿಂದ, ಈ ಸ್ಥಾಪಿತ ಸಾಮರ್ಥ್ಯಕ್ಕೆ ಸೇರ್ಪಡೆಯಾಗುವ ಭಾಗವು ನಗಣ್ಯವೇ. ಹಾಗಾಗಿ, ಬಳಕೆಯು/ಅನುಭೋಗವು ಸಾಂಕ್ರಾಮಿಕ-ಪೂರ್ವದ ಮಟ್ಟವನ್ನು ತಲುಪಿದ ನಂತರವೇ ಖಾಸಗಿ ಬಂಡವಾಳ ಹೂಡಿಕೆಯು ಒಂದು ಗಮನಾರ್ಹ ಮಟ್ಟಕ್ಕೆ ಏರಬಲ್ಲದು. ಆದರೆ, ಬಳಕೆಯು/ಅನುಭೋಗವು ಈಗಿರುವಂತೆ ನೀರಸವಾಗಿಯೇ ಮುಂದುವರಿದರೆ, ಅರ್ಥವ್ಯವಸ್ಥೆಯ ಚೇತರಿಕೆಯು ಮೃತಸ್ಥಿತಿಯಲ್ಲಿ ಹುಟ್ಟಿದ ಮಗುವಾಗುತ್ತದೆ.

ಲಾಕ್‌ಡೌನಿನಿಂದ ಉಂಟಾದ ಕಂದಕದಿಂದ ಚೇತರಿಕೆಯ ವಿಧಾನವು ಹಲವು ಕಾರಣಗಳಿಂದ ನೆಮ್ಮದಿಗೆಡಿಸುತ್ತದೆ. ಬಳಕೆ/ಅನುಭೋಗ ಕಡಿತವಾಗಿರುವುದಂತೂ ಸ್ವಯಂವೇದ್ಯ. 2020-21ರ ಸಾಲಿನ ಮೊದಲ ಅರ್ಧ ಭಾಗದ ಅವಧಿಯ ಖಾಸಗಿ/ಸ್ವಂತ ಬಳಕೆಯ ಖರ್ಚುಗಳನ್ನು ಕಳೆದ ವರ್ಷದ ಅದೇ ಅವಧಿಗೆ ಹೋಲಿಸಿದರೆ, ಸುಮಾರು 20% ಇಳಿಕೆ ಕಂಡುಬರುತ್ತದೆ. ಇದು, ಲಕ್ಷಾಂತರ ಮಂದಿಯು ಕೇವಲ ಹೊಟ್ಟೆ-ಬಟ್ಟೆ (subsistence) ಮಟ್ಟದಲ್ಲೇ ಬದುಕುತ್ತಿರುವ ಅರ್ಥವ್ಯವಸ್ಥೆಯಲ್ಲಿ ಒಂದು ಗಂಭೀರ ವಿಷಯವೇ. ಕಂದಕದಿಂದ ಚೇತರಿಕೆಯು ಅಷ್ಟರಮಟ್ಟಿಗೆ ಕಷ್ಟಕರವೇ.

ಅರ್ಥ ವ್ಯವಸ್ಥೆಯು ಉಸುಬಿನಲ್ಲಿ ಸಿಕ್ಕಿಕೊಂಡಿದೆ ಎಂಬುದನ್ನು ತೋರಿಸುವ ಎರಡನೇ ತ್ರೈಮಾಸಿಕದ (ಜುಲೈ-ಸೆಪ್ಟೆಂಬರ್) ಜಿಡಿಪಿಯ ಅಂದಾಜುಗಳ ಬಗ್ಗೆ ಸಂಭ್ರಮಿಸುವಂಥದ್ದು ಏನೂ ಇಲ್ಲ. ಇದರಿಂದ ಹೊರಬರಲು ಇರುವ ಒಂದೇ ದಾರಿ ಎಂದರೆ, ಜಾಗತಿಕ ಹಣಕಾಸು ಬಂಡವಾಳದ ಹುಕುಂಗಳನ್ನು ಧಿಕ್ಕರಿಸಿ, ಜನರ ಕೈಯಲ್ಲಿ ಕೊಳ್ಳುವ ಶಕ್ತಿಯನ್ನು ತುಂಬುವುದು. ಆದರೆ, ಮೋದಿ ಸರ್ಕಾರಕ್ಕೆ ಈ ಮಾರ್ಗವನ್ನು ಅನುಸರಿಸುವ ದಮ್ ಇಲ್ಲ.

ಕೋವಿಡ್–19 ಲಸಿಕೆಯ ಸುತ್ತ ಪ್ರಶ್ನೆಗಳ ಹುತ್ತ ಏಕೆ? ಏನು? ಎಷ್ಟು? ಯಾವಾಗ? ಹೇಗೆ?

ಭಾಗ–2 ಲಸಿಕೆಯ ಲಭ್ಯತೆ, ಅಗತ್ಯ, –ಡಾ| ಕೆ. ಸುಶೀಲಾ

ಬ್ರಿಟನಿನಲ್ಲಿ ಈಗಾಗಲೇ ಕೋವಿಡ್–19 ಲಸಿಕೆ ಒಂದರ ಬಳಕೆಗೆ ಅನುಮತಿ ಕೊಡಲಾಗಿದೆ. ಮುಂದಿನ ತಿಂಗಳೇ ಇನ್ನೂ ಹಲವು ಲಭ್ಯವಾಗುತ್ತದೆ ಎಂಬುದು ಸುದ್ದಿಯಲ್ಲಿದೆ. ಕೋವಿಡ್–19 ಕುರಿತು ವಾಸ್ತವಕ್ಕೆ ದೂರವಾದ ಅತಿರಂಜಿತ ನಿಲುವುಗಳನ್ನು ತಾಳಿರುವ ಸರಕಾರ ಮತ್ತು ಮಾಧ್ಯಮಗಳು ಲಸಿಕೆ ಕುರಿತು ಸಹ ಎಲ್ಲ ಸಮಸ್ಯೆಗಳು ಪರಿಹಾರವಾದವು ಎಂಬಂತೆ ವರ್ತಿಸುತ್ತಿವೆ. ಆದರೆ ಲಸಿಕೆಯ ಸುತ್ತ ಪ್ರಶ್ನೆಗಳ ಹುತ್ತವೇ ಇದೆ. ಈ ಕುರಿತು ವಾಸ್ತವವನ್ನು ವಿಶ್ಲೇಷಿಸುವ ಲೇಖನ ಸರಣಿ ಇದು. ಲಸಿಕೆ ಎಂದರೆ ಏನು? ಅದು ಹೇಗೆ ಕೆಲಸ ಮಾಡುತ್ತದೆ? ಕೋವಿಡ್ ಲಸಿಕಾ ಕಾರ್ಯಕ್ರಮದ ಸಮಸ್ಯೆಗಳೇನು? ಲಸಿಕೆ ಅಭಿವೃದ್ಧಿಯ ಈಗಿನ ಪರಿಸ್ಥಿತಿ ಏನು? ಭಾರತಕ್ಕೆ ಲಸಿಕೆಯ ಒಟ್ಟು ಅಗತ್ಯ ಎಷ್ಟು? ಲಸಿಕೆಯ ವೆಚ್ಚ ಎಷ್ಟು, ಸಾಗಾಣಿಕೆ ಹೇಗೆ? ಲಸಿಕೆ ಆದ್ಯತೆಯ ಸರಣಿ ಹೇಗಿರಬೇಕು? ಲಸಿಕೆಯನ್ನು ಆದ್ಯತೆಯ ಪ್ರಕಾರ ಹೇಗೆ ತಲುಪಿಸುವುದು? ಲಸಿಕೆ ಕಾರ್ಯಕ್ರಮಕ್ಕೆ ಎಷ್ಟು ಸಿಬ್ಬಂದಿ, ಮೂಲಸೌಕರ್ಯ ಬೇಕು ? ಅದನ್ನು ಹೊಂದಿಸುವುದು ಹೇಗೆ? ಈ ಪ್ರಶ್ನೆಗಳಿಗೆ ವಾಸ್ತವ ನೆಲೆಯಲ್ಲಿ ಉತ್ತರ ಕೊಡುವ ಪ್ರಯತ್ನವಿದು. ಹಿಂದಿನ ಹಲವಾರು ರಾಷ್ಟ್ರೀಯ ಲಸಿಕಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅನುಭವವಿರುವ, ಆ ದೃಷ್ಟಿಯಿಂದ ಕೋವಿಡ್–19 ಲಸಿಕಾ ಕಾರ್ಯಕ್ರಮದ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ – ಡಾ| ಕೆ. ಸುಶೀಲಾ ಅವರು ಇದನ್ನು ಬರೆದಿದ್ದಾರೆ.

ಭಾಗ–1 ರಲ್ಲಿ ದೇಹ ರಕ್ಷಣಾ ವ್ಯವಸ್ಥೆಯ ಕುರಿತು ತಿಳಿಸಿ, ಅದರ ಆಧಾರದ ಮೇಲೆ ಲಸಿಕೆಯ ವಿಜ್ಞಾನವನ್ನು ಈಗಾಗಲೇ ವಿವರಿಸಿದ್ದಾರೆ. ಈ ಭಾಗ 2 ರಲ್ಲಿ ಲಸಿಕೆಯ ಅಭಿವೃದ್ಧಿಯ ಪ್ರಸಕ್ತ ಸ್ಥಿತಿ, ಲಸಿಕೆಯ ಒಟ್ಟು ಅಗತ್ಯ ಎಷ್ಟು?, ಸದ್ಯಕ್ಕೆ ಲಭ್ಯವಾಗಬಹುದಾದ ಲಸಿಕೆ ಎಷ್ಟು – ಎಂಬುದರ ಬಗ್ಗೆ ವಿವರಿಸಿದ್ದಾರೆ.

ಈಗ ಲಭ್ಯವಾಗಿರುವ ಗುಣಗಳ ಲಸಿಕೆಗಳ ಹೋಲಿಕೆ

ಗುಣಗಳು	ಮೊಡರ್ನಾ (ಎಂಆರ್‌ಎನ್‌ಎ–1273)	ಫೈಝರ್ (ಬಿಎನ್‌ಟಿ 162ಬಿ2)	ಆಕ್ಸ್‌ಫರ್ಡ್ – ಆಸ್ಟ್ರಾಜೆನೆಕಾ (AZD122, ಕೊವಿಶೀಲ್ಡ್)
ಗುಣಮಟ್ಟ ಕಾಪಾಡಲು ಬೇಕಾಗುವ ಉಷ್ಣತೆ	–20 ಡಿಗ್ರಿ ಸೆಂ. (ಶೂನ್ಯಕ್ಕಿಂತ 20 ಡಿಗ್ರಿ ಸೆ. ಕೆಳಗೆ)	–70 ಡಿಗ್ರಿ ಸೆಂ. (ಶೂನ್ಯಕ್ಕಿಂತ 70 ಡಿಗ್ರಿ ಸೆಂ. ಕೆಳಗಿನ ತಾಪಮಾನ)	2 ಡಿಗ್ರಿ ಯಿಂದ 8 ಸೆಂ. ತಾಪಮಾನದಲ್ಲಿ ಸಾಧಿಸಬಹುದು, ಕಾಪಾಡಬಹುದು
ಸುರಕ್ಷತೆ	ಕೆಲವರಲ್ಲಿ ಚಿಕ್ಕ ಪುಟ್ಟ ತೊಂದರೆಗಳಾದ ಇಂಜಕ್ಸ್‌ನ್ ನೀಡಿದಲ್ಲಿ ನೋವು, ಮೈಕೈನೋವು, ಚಿಕ್ಕ ಜ್ವರ, ಅಲ್ಪಾವಧಿಕಾಲ ಕಾಣಿಸಿಕೊಳ್ಳಬಹುದು. ಗಂಭೀರ ತೊಂದರೆಗಳಿಲ್ಲ. ಸುರಕ್ಷಿತ.	ಸುರಕ್ಷಿತ. ಚಿಕ್ಕಪುಟ್ಟ ತೊಂದರೆಗಳು ದೊಡ್ಡದಾದ ಲಸಿಕೆ ನೀಡಿದಾಗ ಕಾಣಿಸಿಕೊಂಡಂತೆ ಕಾಣಿಸಿಕೊಳ್ಳಬಹುದು.	ಸುರಕ್ಷಿತ. ಉಳಿದೆರಡು ಲಸಿಕೆಗಳು ತೋರಿಸಿದ ಚಿಕ್ಕಪುಟ್ಟ ತೊಂದರೆ ಕೆಲವರಲ್ಲಿ ಕಾಣಿಸಿಕೊಳ್ಳಬಹುದು.
ನೀಡುವ ವಿಧಾನ	ಚುಚ್ಚು ಮದ್ದು	ಚುಚ್ಚು ಮದ್ದು	ಚುಚ್ಚು ಮದ್ದು
ರೋಗ ತಡೆಗಟ್ಟುವ ಸಾಮರ್ಥ್ಯದ ಪ್ರಮಾಣ	95%	90%	62% ತಿಂಗಳ ಅಂತರದಲ್ಲಿ 1 ಎಂ.ಎಲ್. ನ 2 ಇಂಜಕ್ಸ್‌ನ್ ನೀಡಿದಾಗ 90% ಮೊದಲು 1/2 ಎಂ.ಎಲ್ ನೀಡಿ ತಿಂಗಳ ನಂತರ 1 ಎಂ.ಎಲ್. ನೀಡಿದಾಗ
ಲಸಿಕೆ ನೀಡುವ ಪ್ರಮಾಣ	ಒಂದು ತಿಂಗಳ ಅಂತರದಲ್ಲಿ 1 ಎಮ್.ಎಲ್. ನ ಎರಡು ಇಂಜಕ್ಸ್‌ನ್	ಒಂದು ತಿಂಗಳ ಅಂತರದಲ್ಲಿ 1 ಎಮ್. ಎಲ್. ನ ಎರಡು ಇಂಜಕ್ಸ್‌ನ್	ಒಂದು ತಿಂಗಳ ಅಂತರದಲ್ಲಿ 1 ಎಮ್.ಎಲ್. ನ ಎರಡು ಇಂಜಕ್ಸ್‌ನ್ ಪ್ರಥಮ ½ ಪ್ರಮಾಣ ಹಾಗೂ ತಿಂಗಳ ನಂತರ ಪೂರ್ಣ ಪ್ರಮಾಣದ ಇನ್ನೊಂದು ಇಂಜಕ್ಷನ್
ಬೆಲೆ	25 ಡಾಲರ್ ಪ್ರತೀ ಇಂಜಕ್ಸ್‌ನ್‌ಗೆ (ಒಟ್ಟು 50 ಡಾಲರ್)	20 ಡಾಲರ್ / ಪ್ರತೀ ಇಂಜಕ್ಸ್‌ನ್‌ಗೆ (ಒಟ್ಟು 40 ಡಾಲರ್)	2.5 ಡಾಲರ್/ ಇಂಜಕ್ಸ್‌ನ್‌ಗೆ (ಒಟ್ಟು 5 ಡಾಲರ್) ಪೂನಾದ ಕೊವಿರೇಲ್ಡ್ – ಸರ್ಕಾರಕ್ಕೆ 2 ಇಂಜೆಕ್ಸ್‌ನ್‌ಗೆ 250 ರೂ. ಗೆ ಪೂರೈಕೆ. ಖಾಸಗಿಯವರಿಗೆ 2 ಇಂಜಕ್ಸ್‌ನ್‌ಗೆ 1000 ಗೆ ಪೂರೈಸುವುದಾಗಿ ಹೇಳಿದೆ
ಲಸಿಕೆಯ ಉತ್ಪಾದನೆಯ ಉದ್ದೇಶ	ವ್ಯಾಪಾರಕ್ಕಾಗಿ	ಲಾಭಕ್ಕಾಗಿ	ಲಾಭಕ್ಕಾಗಿ ಅಲ್ಲ
ಈಗ ತಿಳಿದಂತೆ ಪಡೆದ ವ್ಯಕ್ತಿಗಳಲ್ಲಿ ರೋಗ ತಡೆಗಟ್ಟುವ ಕಾಲಾವಧಿ	ಸಾಧಾರಣ 9 ರಿಂದ 12 ತಿಂಗಳು	ಸಾಧಾರಣ 9 ರಿಂದ 12 ತಿಂಗಳು	ಸಾಧಾರಣ 9 ರಿಂದ 12 ತಿಂಗಳು









ಲಸಿಕೆಯ ಅಭಿವೃದ್ಧಿಯ ಪ್ರಸಕ್ತ ಸ್ಥಿತಿ

ಏಳು ಕಂಪನಿಗಳು ಅದಾಗಲೇ ಲಸಿಕೆ ತಯಾರಿಸುವ ಈ ಕಾರ್ಯದಲ್ಲಿ ತೊಡಗಿಸಿಕೊಂಡಿವೆ. ಈ ಕಾರ್ಯದಲ್ಲಿ ಕೆಲವು ಕಂಪನಿಗಳು ಕೆಲವು ಲಸಿಕೆ ತಯಾರಿಕೆಯಲ್ಲಿ ಸಫಲವಾಗಿವೆ. ಇವುಗಳು 1) ಮೊಡರ್ನದ (Moderna) ಎಂಆರ್‌ಎನ್‌ಎ–1273. 2) ಬಯೋಎನ್‌ಟೆಕ್(Biontech) / ಫೈಝರ್(Pfizer) ಸಹಯೋಗದಲ್ಲಿ ತಯಾರಾದ – ಬಿಎನ್‌ಟಿ 162ಬಿ2 (BNT162b2). 3) ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಮತ್ತು ಆಸ್ಟ್ರಾಜೆನೆಕಾ (Oxford University and Astrazeneca) ದ AZD122. ಹಾಗೂ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಸೀರಂ ಇನ್‌ಸ್ಟಿಇಟ್ಯೂಟ್ ಆಫ್ ಇಂಡಿಯಾ (ಎಸ್.ಐ.ಐ.) ಪೂನಾ–ದಿಂದ ತಯಾರಾದ ಕೊವಿಶೀಲ್ಡ್ (Covishield).

1. ಒಂದು ಉತ್ತಮ ಲಸಿಕೆಗಿರುವ ಗುಣಲಕ್ಷಣಗಳೆಂದರೆ:–
2. ಅದು ಉಪಯೋಗಿಸುವವರಿಗೆ ಸುರಕ್ಷಿತವಾಗಿರಬೇಕು.
3. ಬೆಲೆ ದುಬಾರಿಯಾಗಿರಬಾರದು.
4. ಪ್ರತಿಶತ 50 ಕ್ಕೂ ಹೆಚ್ಚು ಯಶಸ್ಸಿನ ಸಾಮರ್ಥ್ಯವನ್ನು ಹೊಂದಿರಬೇಕು.
5. ದೀರ್ಘಾವಧಿ ರೋಗನಿರೋಧಕ ಸಾಮಥ್ಯವನ್ನು ಫಲಾನುಭವಿಗಳ ದೇಹಕ್ಕೆ ನೀಡಬೇಕು.
6. ಯಾವುದೇ ಉಷ್ಣತೆಯಲ್ಲಿ ತಮ್ಮ ಗುಣಲಕ್ಷಣ ಕಾಪಾಡಿಕೊಂಡಿರಬೇಕು.

ವಿವಿಧೆಡೆ ಸಾಗಿಸಲು, ಉಪಯೋಗಿಸಲು ಸುಲಭವಾಗಿರಬೇಕು.

ಹಾಗಾದರೆ ಈಗ ತಯಾರಾಗಿ ಜನಸಾಮಾನ್ಯರಲ್ಲಿ ಉಪಯೋಗಿಸುವ ಪರವಾನಿಗೆ ಪಡೆದ ಅಥವಾ ತುರ್ತು ಅನುಮತಿಗೆ ಕಾಯುತ್ತಿರುವ ಮೇಲೆ ಹೇಳಿದ ಲಸಿಕೆಗಳ ಗುಣಾವಗುಣಗಳನ್ನು ಪರಿಶೀಲಿಸೋಣ.

ಮೊಡರ್ನಾ ಮತ್ತು ಫೈಝರ್ ಕಂಪನಿಗಳ ಲಸಿಕೆ ಆಕ್ಸ್‌ಫರ್ಡ್ ಲಸಿಕೆಗಿಂತಲೂ ಹೆಚ್ಚು ಪ್ರಮಾಣದಲ್ಲಿ ರೋಗತಡೆಗಟ್ಟುವ ಸಾಮರ್ಥ್ಯವನ್ನು ತೋರಿಸುತ್ತಿದ್ದರೂ ಇವುಗಳ ಬೆಲೆ ದುಬಾರಿ ಹಾಗೂ ಇವುಗಳ ಗುಣಮಟ್ಟ ಕಾಪಾಡಲು ಬೇಕಾದ ಉಷ್ಣತೆ ಅತೀ ಕನಿಷ್ಠ. ಹೀಗಾಗಿ ಪ್ರಪಂಚದ ವಿವಿಧ ದೇಶಗಳಿಗೆ ಇವುಗಳ ಸಾಗಾಣಿಕೆ ಹಾಗೂ ಅಲ್ಲಿ ಅವುಗಳ ಗುಣಮಟ್ಟ ಕಾಪಾಡುವಿಕೆ ಅತ್ಯಂತ ಕಷ್ಟಕರವಾದ ಕಾರ್ಯ. ಹಾಗೂ ಇವುಗಳ ಗಗನಕ್ಕೇರಿದ ಬೆಲೆ ವಿಶ್ವದ ಹೆಚ್ಚಿನ ದೇಶಗಳಿಗೆ ಕೈಗೆಟಕದ ಕುಸುಮ. ಅದರಲ್ಲೂ ಬಡದೇಶಗಳಿಗೆ ಇವುಗಳು ಅಪ್ರಯೋಜಕ.

ಆಕ್ಸ್‌ಫರ್ಡ್ ಲಸಿಕೆ ಪೂರ್ಣ ಪ್ರಮಾಣದಲ್ಲಿ ಒಂದು ತಿಂಗಳ ಅಂತರದಲ್ಲಿ 2 ಬಾರಿ ನೀಡಿದಾಗ ಅದರ ರೋಗ ತಡೆಗಟ್ಟುವ ಪ್ರಮಾಣ 62% ಆದರೆ ಈ ಸಾಮರ್ಥ್ಯ ಪ್ರತಿಶತ 50% ಕ್ಕೂ ಅದಕ್ಕಿಂತ ಅಧಿಕವಿದ್ದರೆ ಆ ಲಸಿಕೆ ಫಲಪ್ರದ ಎಂದು ಬಾವಿಸಲಾಗಿದೆ. ಹಾಗಾಗಿ ಆಕ್ಸ್‌ಫರ್ಡ್ ಲಸಿಕೆ ಹಾಗೂ ಅದರ ಸಹಕಾರದೊಂದಿಗೆ ಪೂನಾದ ಸೀರಂ ಇನ್‌ಸ್ಟಿಟ್ಯೂಟ್ ತಯಾರಿಸಿದ ಕೋವಿಶೀಲ್ಡ್ ಉಪಯೋಗಕ್ಕೆ ಸಂಪೂರ್ಣ ಯೋಗ್ಯ.

ಆಕ್ಸ್‌ಫರ್ಡ್ ಲಸಿಕೆಯಲ್ಲಿ ತಿಂಗಳಂತರದಲ್ಲಿ ಕೊಟ್ಟ ಪ್ರಥಮ ಅರ್ಧಾಂಶ ಹಾಗೂ ದ್ವಿತಿಯ ಪೂರ್ಣಾಂಶ ಇಂಜಕ್ಸ್‌ನ್‌ನ ಸಫಲತೆ 90% ಎಂದು ಹೇಳಲಾಗಿತ್ತು. ಆದರೆ ತಪ್ಪಾಗಿ ಈ ಬಳಕೆ ಮಾಡಲಾಗಿತ್ತು. ಇದು ಕೇವಲ 55 ವಯಸ್ಸಿನ ಕೆಳಗಿನವರಿಗೆ ಹಾಗೂ ಕಡಿಮೆ ಸಂಖ್ಯೆಯ ವೊಲಂಟಿಯರ್ (ಸ್ವಯಂ ಸೇವಕ) ಗಳಿಗೆ ನೀಡಲಾಗಿತ್ತು. ಹಿರಿಯ ನಾಗರಿಕರಲ್ಲಿ ಇದರ ಪರಿಣಾಮ ಹಾಗೂ ಸಾಮರ್ಥ್ಯದ ಪ್ರಮಾಣ ಎಷ್ಟು ಎನ್ನುವುದು ತಿಳಿಯದೆನ್ನುವ ಮಾಹಿತಿ ನೀಡಲಾಗಿದೆ. ಹೀಗಾಗಿ ಈ ಕಡಿಮೆ ಪ್ರಮಾಣದ ಲಸಿಕಾ ಪ್ರಯೋಗ ಹೆಚ್ಚಿನ ವಯಸ್ಕರಲ್ಲಿ ಹಾಗೂ ಅಧಿಕ ಸಂಖ್ಯೆಯ ಸ್ವಯಂ ಸೇವಕರಲ್ಲಿ ಮುಂದುವರಿಸಲಾಗುತ್ತದೆ.

ಲಸಿಕೆಯ ಒಟ್ಟು ಅಗತ್ಯ ಎಷ್ಟು?

130 ಕೋಟಿ ಜನಸಂಖ್ಯೆ ಇರುವ ನಮ್ಮ ದೇಶದಲ್ಲಿ ಎಲ್ಲರಿಗೂ 2 ಕೋವಿಡ್ ಲಸಿಕೆ ನೀಡಬೇಕಾದರೆ ಬೇಕಾಗುವ ಲಸಿಕೆಯ ಡೋಸಿನ ಸಂಖ್ಯೆ 260 ಕೋಟಿ. ಹಾಗೂ ಸಾಗಾಟದಲ್ಲಿ ಕಾಪಾಡುವಿಕೆಯಲ್ಲಿ, ವ್ಯಕ್ತಿಗಳಿಗೆ ನೀಡುವಾಗ ಸಹಜವಾಗಿಯೇ ವ್ಯರ್ಥವಾಗುವ ಸಂಖ್ಯೆಯನ್ನು ಸೇರಿಸಿದರೆ ಬೇಕಾಗುವ ಲಸಿಕೆ ಸಾಧಾರಣ 275 ಕೋಟಿ.

ಯಾವುದೇ ದೇಶದಲ್ಲಿ ಯಾವುದೇ ಕಾಲ ಸಂದರ್ಭದಲ್ಲಿ ಪ್ರತಿಶತ 100 ಲಸಿಕಾ ಪ್ರಯೋಗ ಕಷ್ಟಸಾಧ್ಯ. ಯಾವುದೇ ಸಾಂಕ್ರಾಮಿಕ ರೋಗ ತಡೆಗಟ್ಟುವ ಕ್ರಮಗಳೆಂದರೆ – ಸೋಂಕು ಹರಡುವ ಸರಪಳಿಯನ್ನು ತುಂಡರಿಸಿ ಸೋಂಕು ಹರಡುವ ಪ್ರಮಾಣವನ್ನು ಕಡಿತಗೊಳಿಸುವುದು ಮತ್ತು ಸೋಂಕು ತಗಲಿದವರಲ್ಲಿ ರೋಗ ಗಂಭೀರ ಸ್ಥಿತಿಗೆ ತಲಪಿ ಅಧಿಕ ನೋವು, ಸಾವು ಸಂಭವಿಸುವುದನ್ನು ತಡೆಗಟ್ಟುವುದು. ಹೀಗೆ ಈ ಸೋಂಕಿನಿಂದಾಗಿ ಸಮಾಜದಲ್ಲಿ ಜನರ ಸಹಜ ಜೀವನದಲ್ಲಿ ಕುಂದುಂಟಾಗದಂತೆ ಜಾಗ್ರತೆ ವಹಿಸುವುದು. ಇದನ್ನು ಸಾಧಿಸಲು ಸಮಾಜದಲ್ಲಿ ಅಧಿಕ ಪ್ರಮಾಣದ ಜನರಿಗೆ ಉತ್ತಮ ಲಸಿಕೆ ನೀಡಿ ಅವರ ದೇಹದಲ್ಲಿ ರೋಗ ನಿರೋಧಕ ಶಕ್ತಿ ಬರುವಂತೆ ನೋಡಿಕೊಳ್ಳುವುದು ಅಗತ್ಯ. ಆದರೆ ಇದಕ್ಕಾಗಿ ಪ್ರತಿಶತ ನೂರು ಜನರಿಗೆ ಲಸಿಕೆ ನೀಡುವ ಅಗತ್ಯವಿಲ್ಲ. ಅಂದರೆ ನಮಗೆ ಸಾಧಾರಣ 200 ಕೋಟಿ ಸಂಖ್ಯೆಯ ಲಸಿಕೆಗಳಾದರೂ ಬೇಕಾಗಬಹುದು.

ಎನ್.ಆರ್.ಐ.ಗಳಿಗೆ ಮತದಾನದ ಅವಕಾಶ ನೀಡುವ ಮೊದಲು ಸರ್ವಪಕ್ಷ ಸಮಾಲೋಚನೆ ಅಗತ್ಯ–ಚುನಾವಣಾ ಆಯೋಗಕ್ಕೆ ಯೆಚುರಿ ಪತ್ರ

ಭಾರತದ ಚುನಾವಣಾ ಆಯೋಗ ಅನಿವಾಸಿ ಭಾರತೀಯರಿಗೆ ಭಾರತದ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವ ಪ್ರಶ್ನೆಯನ್ನು ಕುರಿತಂತೆ ನವಂಬರ್ 25 ರಂದು ಒಂದು ಪತ್ರವನ್ನು ಕಳಿಸಿದ್ದು, ಅದರಲ್ಲಿ ಈ ಕುರಿತ ಕಾನೂನು ಚೌಕಟ್ಟಿನ ಪ್ರಸ್ತಾವವನ್ನು ಇಟ್ಟಿದೆ ಎಂದು ವರದಿಯಾಗಿದೆ. ಈ ವರದಿಗಳ ಪ್ರಕಾರ ಇದನ್ನು ಸರಕಾರ 1961ರ ಚುನಾವಣಾ ನಿರ್ವಹಣೆ ನಿಯಮಗಳಿಗೆ ತಿದ್ದುಪಡಿಯ ಮೂಲಕವಷ್ಟೇ ತರಬಹುದು, ಇದಕ್ಕೆ ಸಂಸತ್ತಿನ ಅನುಮೋದನೆಯ ಅಗತ್ಯವಿಲ್ಲ ಎನ್ನಲಾಗಿದೆ.

ಈ ಸುದ್ದಿ ಆಶ್ಚರ್ಯವನ್ನೂ, ಆಘಾತವನ್ನೂ ಉಂಟು ಮಾಡಿದೆ ಎಂದು ಈ ಕುರಿತಂತೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ ಬರೆದಿದ್ದಾರೆ. ಆಶ್ಚರ್ಯ ಮತ್ತು ಆಘಾತ ಏಕೆಂದರೆ ಇಂತಹ ಒಂದು ಬಹು ಮಹತ್ವದ, ಕ್ಲಿಷ್ಟ ಸಮಸ್ಯೆಗಳಿರುವ ವಿಷಯದಲ್ಲಿ ಆಯೋಗ ಸರ್ವಪಕ್ಷ ಸಮಾಲೋಚನೆಯನ್ನು ನಡೆಸುವ ತನ್ನ ಪರಂಪರೆಯನ್ನು ಬದಿಗೊತ್ತಿದೆ ಎಂದು ಯೆಚುರಿ ತಮ್ಮ ಪತ್ರದಲ್ಲಿ ಖೇದ ವ್ಯಕ್ತ ಪಡಿಸಿದ್ದಾರೆ.

ಸಿಪಿಐ(ಎಂ) ಕೂಡ ಹೊರದೇಶಗಳ ಭಾರತೀಯರು/ಅನಿವಾಸಿ ಭಾರತೀಯರಿಗೆ ದೇಶದ ಚುನಾವಣಾ ಪ್ರಕ್ರಿಯೆಯಲ್ಲಿ ಹೆಚ್ಚು ಪರಿಣಾಮಕಾರಿಯಾದ ಮತದಾನದ ಹಕ್ಕನ್ನು ನೀಡುವುದರ ಪರವಾಗಿದೆ ಎಂದು ಪುನರುಚ್ಚರಿಸುತ್ತಲೇ ಯೆಚುರಿಯವರು, ಈ ಬಗ್ಗೆ 2014ರಿಂದಲೇ ಪ್ರಯತ್ನಗಳು ನಡೆಯುತ್ತಿದ್ದರೂ, ಇದುವರೆಗೂ ಒಂದು ದೋಷರಹಿತ ವ್ಯವಸ್ಥೆಯನ್ನು ರೂಪಿಸುವುದು ಸಾಧ್ಯವಾಗಿಲ್ಲ ಎಂಬ ಸಂಗತಿಯತ್ತ ಗಮನ ಸೆಳೆದಿದ್ದಾರೆ.

ಈಗ ಚುನಾವಣಾ ಆಯೋಗ ಮುಂದಿಟ್ಟಿರುವ ಅಂಚೆ ಮತದಾನದ ಪ್ರಸ್ತಾವ, ಅದರಲ್ಲಿ ಮತಪತ್ರವನ್ನು ಇಲೆಕ್ಟ್ರಾನಿಕ್ ವ್ಯವಸ್ಥೆಯ ಮೂಲಕ ಕಳಿಸುವುದರಲ್ಲಿ ಹಲವು ಕ್ಲಿಷ್ಟ ಸವಾಲುಗಳಿವೆ, ಇದರಲ್ಲಿ ಕೈಚಳಕ ನಡೆಸಲು ಅವಕಾಶವಿದ್ದು, ಇದು ಮತದಾನದಲ್ಲಿ 'ಮತದಾರರ ದೈಹಿಕ ರುಜುವಾತು ಅತ್ಯಗತ್ಯ' ಎಂಬ ನೀತಿಯ ಉಲ್ಲಂಘನೆಯ ಅಪಾಯವಿದೆ. ಆದ್ದರಿಂದ ಈ ಬಗ್ಗೆ ವಿವರವಾದ ಚರ್ಚೆಗಳ ಅಗತ್ಯವಿದೆ, ಚುನಾವಣಾ ಆಯೋಗ ತನ್ನ ಇದುವರೆಗಿನ ಪರಂಪರೆಯಂತೆ ಈ ಬಗ್ಗೆ ಒಂದು ಸರ್ವಪಕ್ಷ ಸಮಾಲೋಚನೆ ನಡೆಸದೆ ಮುಂದುವರೆಯಬಾರದು ಎಂದು ಮುಖ್ಯ ಚುನಾವಣಾ ಆಯುಕ್ತರಿಗೆ ಬರೆದ ಪತ್ರದಲ್ಲಿ ಯೆಚುರಿ ಆಗ್ರಹಿಸಿದ್ದಾರೆ.

ಮುಖ್ಯ ಚುನಾವಣಾ ಆಯುಕ್ತರಿಗೆ ಬರೆದ ಅವರ ಪತ್ರದ ಪೂರ್ಣ ಪಾಠವನ್ನು ಈ ಮುಂದೆ ಕೊಡಲಾಗಿದೆ:

ಪ್ರಿಯ ಶ್ರೀ ಅರೋರಾ ಜಿ,

ಚುನಾವಣಾ ಆಯೋಗ ಹೊರದೇಶಗಳ ಭಾರತೀಯರು/ಅನಿವಾಸಿ ಭಾರತೀಯರು ಮುಂಬರುವ ಅಸ್ಸಾಂ, ಪಶ್ಚಿಮ ಬಂಗಾಲ, ಕೇರಳ ಮತ್ತು ಪಾಂಡಿಚೇರಿಯ ವಿಧಾನಸಭಾ ಚುನಾವಣೆಗಳಲ್ಲಿ ತಮ್ಮ ಮತ ಚಲಾವಣೆ ನಡೆಸಲು ಅನುಕೂಲ ಮಾಡಿಕೊಡುವ ಒಂದು ಕಾನೂನು ಚೌಕಟ್ಟನ್ನು ಕಳಿಸಿದೆ ಎಂಬ ಮಾಧ್ಯಮ ವರದಿಗಳನ್ನು ನೋಡಿ ನಮಗೆ ಆಶ್ಚರ್ಯ ಮತ್ತು ಆಘಾತವಾಗಿದೆ.

ಆರಂಭದಲ್ಲಿಯೇ, ಸಿಪಿಐ(ಎಂ), ಹೊರದೇಶಗಳ ಭಾರತೀಯರು/ಅನಿವಾಸಿ ಭಾರತೀಯರಿಗೆ ದೇಶದ ಚುನಾವಣಾ ಪ್ರಕ್ರಿಯೆಯಲ್ಲಿ ಹೆಚ್ಚು ಪರಿಣಾಮಕಾರಿಯಾದ ಮತದಾನದ ಹಕ್ಕನ್ನು ನೀಡುವುದರ ಪರವಾಗಿದೆ ಎಂದು ದೃಢವಾಗಿ ಹೇಳಬಯಸುತ್ತೇವೆ. ವಿವಿಧ ದೇಶಗಳಲ್ಲಿ ಭಾರತೀಯ ನಾಗರಿಕರಿಗೆ ಅವರು ನೆಲೆಸಿರುವ ದೇಶದಲ್ಲಿ ತಮ್ಮ ಮತಗಳನ್ನು ನೀಡಲು ಅವಕಾಶ ನೀಡಲು ನಮ್ಮ ರಾಯಭಾರ/ಮಿಷನ್ ಕಚೇರಿಗಳಲ್ಲಿ ಮತಗಟ್ಟೆಗಳನ್ನು ರಚಿಸಬೇಕು ಮತ್ತು ಇತರ ಅನುಕೂಲಗಳನ್ನು ಕಲ್ಪಿಸಬೇಕು ಎಂದು ಸಿಪಿಐ(ಎಂ) ಸೂಚಿಸಿತ್ತು. ಜಗತ್ತಿನ ಹಲವು ಪ್ರಜಾಪ್ರಭುತ್ವಗಳು ಇದನ್ನು ಅನುಸರಿಸುತ್ತಿವೆ, ಮತ್ತು ಮತದಾರರ ದೈಹಿಕ ರುಜುವಾತಿನ ಆವಶ್ಯಕತೆಯನ್ನು ಪೂರೈಸುತ್ತಿವೆ.

ನಮಗೆ ಆಘಾತದ ಭಾವನೆ ಉಂಟಾಗಿರುವುದು ಇಂತಹ ಬಹು ಮಹತ್ವದ ವಿಷಯಗಳನ್ನು ಅಂತಿಮಗೊಳಿಸುವ ಮೊದಲು ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸುವ ವಿಧಿ–ವಿಧಾನವನ್ನು ಅಂಗೀಕರಿಸಿರುವ ಚುನಾವಣಾ ಆಯೋಗ ತನ್ನ ಈ ಎಂದಿನ ನಡೆಯಿಂದ ನಾಚಿಕೆಯಿಲ್ಲದೆ ದೂರ ಸರಿದಿದೆ ಎಂಬುದು. ಚುನಾವಣಾ ಆಯೋಗ ಎನ್.ಆರ್.ಐ.ಗಳಿಗೆ ಮತ ಚಲಾಯಿಸುವ ಅನುಮತಿ ಕೊಡುವ ಪ್ರಸ್ತಾವವನ್ನು ಮೊದಲು ಕೈಗೆತ್ತಿಕೊಂಡದ್ದು 2014ರಲ್ಲಿ. ಆಗ ಆಯೋಗ ಎನ್.ಆರ್.ಐ.ಗಳಿಗೆ ಸಂಬಂಧಪಟ್ಟಂತೆ ಒಂದು 'ಮುಕ್ತ ಮತ್ತು ನ್ಯಾಯಯುತ' ಚುನಾವಣೆಯನ್ನು ಖಾತ್ರಿಪಡಿಸುವ ಒಂದು ದೋಷರಹಿತ ವ್ಯವಸ್ಥೆಯನ್ನು ವಾಸ್ತವಗೊಳಿಸಲು ಸಾಧ್ಯವಾಗಬಹುದಾದ ವಿಧಾನಗಳನ್ನು ಚರ್ಚಿಸಲು ಒಂದು ಸರ್ವ ಪಕ್ಷ ಸಮಾಲೋಚನೆಯನ್ನು ಏರ್ಪಡಿಸಿತ್ತು. ನಂತರ, ಸುಪ್ರಿಂ ಕೋರ್ಟ್ ಕೂಡ ಭಾರತದ ಪಾಸ್‌ಪೋರ್ಟ್ ಹೊಂದಿರುವವರು ಪ್ರಜಾಸತ್ತಾತ್ಮಕ ಚುನಾವಣಾ ಪ್ರಕ್ರಿಯೆಯಲ್ಲಿ ಅರ್ಥಪೂರ್ಣವಾಗಿ ಭಾಗವಹಿಸಲು ಸಾಧ್ಯವಾಗಿಸುವ ಅನಿವಾಸಿ ಭಾರತೀಯರ ಹಕ್ಕುಗಳನ್ನು ಎತ್ತಿ ಹಿಡಿಯಿತು.

ಹೊರದೇಶಗಳಲ್ಲಿರುವ ಭಾರತೀಯರಿಗೆ ತಾವು ಹೆಸರಿಸಿದ ವ್ಯಕ್ತಿಯ(ಪ್ರಾಕ್ಸಿ) ಮೂಲಕ ಮತದಾನ ಮಾಡುವ ಅನುಕೂಲವನ್ನು ಒದಗಿಸುವ ಒಂದು ಮಸೂದೆ 16ನೇ ಲೋಕಸಭೆಯ ವಿಸರ್ಜನೆಯೊಂದಿಗೆ ಲುಪ್ತಗೊಂಡಿತು. ಈಗ ಭಾರತದ ಚುನಾವಣಾ ಆಯೋಗ ಕಾನೂನು ಮಂತ್ರಾಲಯಕ್ಕೆ ಬರೆದ ಪತ್ರ ಎನ್. ಆರ್.ಐ.ಗಳಿಗೆ ಪ್ರಾಕ್ಸಿ ಮತದಾನದ ಬದಲು ಅಂಚೆ ಮತದಾನದ ಹಕ್ಕನ್ನು ಕೊಡುವ ಪ್ರಸ್ತಾವವನ್ನು ಇಟ್ಟಿದೆ. ಇದರ ಅರ್ಥ ಸರಕಾರ ಚುನಾವಣಾ ನಿರ್ವಹಣೆಯ ನಿಯಮಗಳು, 1961 ನ್ನು ತಿದ್ದುಪಡಿ ಮಾಡಬೇಕಷ್ಟೇ, ಇದಕ್ಕೆ ಸಂಸತ್ತಿನ ಅನುಮೋದನೆಯ ಅಗತ್ಯವಿಲ್ಲ.

ಭಾರತದ ಚುನಾವಣಾ ಆಯೋಗದ ಪ್ರಸಕ್ತ ಪ್ರಸ್ತಾವವನ್ನು, ಇದುವರೆಗಿನ ಸ್ಥಾಪಿತ ನಡವಳಿಕೆಯಂತೆ ಒಂದು ಸರ್ವಪಕ್ಷ ಸಮಾಲೋಚನೆಯಲ್ಲಿ ಎಂದೂ ಚರ್ಚಿಸಿಲ್ಲ. 2015ರಲ್ಲಿ ಚುನಾವಣಾ ಆಯೋಗ ನೇಮಿಸಿದ ಪರಿಣಿತರ ಗುಂಪಿನ ಅಧ್ಯಯನದ ಭಾಗವಾದ ಯಾವುದೇ ಪರ್ಯಾಯಗಳು ಒಂದು ದೋಷರಹಿತ ವ್ಯವಸ್ಥೆಯ ಬಗ್ಗೆ ಮೂರ್ತ ಪ್ರಸ್ತಾವನ್ನೇನೂ ಕೊಟ್ಟಿಲ್ಲ ಎಂಬುದು ಸ್ಪಷ್ಟ.

ಆದರೆ ಮಾಧ್ಯಮ ವರದಿಗಳು ಸೂಚಿಸುವ ಪ್ರಕಾರ, ಕಾನೂನು ಮಂತ್ರಾಲಯ ನವಂಬರ್ 25ರಂದು ಪಡೆದ ಚುನಾವಣಾ ಆಯೋಗದ ಪ್ರಸ್ತಾವ ಅಂಚೆ ಮತಪತ್ರದ ಮೂಲಕ ಮತದಾನ ಮಾಡಬಯಸುವ ಯಾವುದೇ ಎನ್.ಆರ್.ಐ. ಚುನಾವಣಾ ಅಧಿಸೂಚನೆ ಪ್ರಕಟಿಸಿದ ಕನಿಷ್ಠ ಐದು ದಿನಗಳ ನಂತರ ರಿಟರ್ನಿಂಗ್ ಆಫೀಸರ್(ಆರ್.ಓ.) ಗೆ ತಳಿಸಬೇಕು. ಇಂತಹ ಮಾಹಿತಿ ಸಿಕ್ಕಿದ ಮೇಲೆ ಆರ್.ಓ. ಮತಪತ್ರವನ್ನು ಇಲೆಕ್ಟ್ರಾನಿಕ್ ವ್ಯವಸ್ಥೆಯ ಮೂಲಕ ಕಳಿಸುತ್ತಾರೆ. ಎನ್.ಆರ್.ಐ. ಮತದಾರರು ಇದರ ಪ್ರತಿಯನ್ನು ಮುದ್ರಿಸಿಕೊಂಡು ಅದರಲ್ಲಿ ತಮ್ಮ ಆಯ್ಕೆಯನ್ನು ಗುರುತಿಸಿ ಅದನ್ನು ಆ ಎನ್.ಆರ್.ಐ. ವಾಸಿಸುವ ದೇಶದಲ್ಲಿ ಭಾರತದ ರಾಯಭಾರ ಅಥವ ಕಾನ್ಸುಲರ್ ಪ್ರತಿನಿಧಿ ನೇಮಿಸಿದ ಒಬ್ಬ ಅಧಿಕಾರಿ ಪ್ರಮಾಣೀಕರಿಸಿದ ಒಂದು ಘೋಷಣೆಯೊಂದಿಗೆ ವಾಪಾಸು ಕಳಿಸಬೇಕು.

ಮತದಾರ ತಾನೆ ಮತಪತ್ರವನ್ನು ಅಂಚೆ ಮೂಲಕ ಹಿಂದಿರುಗಿಸಬೇಕೋ, ಅಥವ ಭಾರತೀಯ ರಾಯಭಾರ ಕಚೇರಿಯಲ್ಲಿ ಅದಕ್ಕೆಂದು ಇಟ್ಟಿರುವ ಪೆಟ್ಟಿಗೆಯಲ್ಲಿ ಹಾಕಬೇಕೋ, ಅದನ್ನು ಚುನಾವಣಾ ಕ್ಷೇತ್ರವಾರು ವಿಂಗಡಿಸಲಾಗುತ್ತದೆಯೋ ಈ ವೇಳೆಗೆ ಸ್ಪಷ್ಟವಿಲ್ಲ.

ಆದರೆ ಮತಪತ್ರವನ್ನು "ಇಲೆಕ್ಟ್ರಾನಿಕ್ ವ್ಯವಸ್ಥೆಯ ಮೂಲಕ ಕಳಿಸುವ' ಪ್ರಸ್ತಾವದಲ್ಲಿ ಕೈಚಳಕ ನಡೆಸುವ ಸವಾಲು ಇದೆ. ಮತದಾನದಲ್ಲಿ 'ಮತದಾರರ ದೈಹಿಕ ರುಜುವಾತು ಒಂದು ಅನುಲ್ಲಂಘನೀಯ ನೀತಿ' ಆಗಿರುವುದರಿಂದ, ಆ ನೆಲೆಯಲ್ಲಿ ನೋಡಿದಾಗ, ಹೊರದೇಶದ/ಎನ್.ಆರ್.ಐ. ಮತದಾರರ ಸಂದರ್ಭದಲ್ಲಿ ಮತಪತ್ರದ ಇಲೆಕ್ಟ್ರಾನಿಕ್ ಪ್ರಸರಣದಲ್ಲಿ ಇದನ್ನು ಖಾತ್ರಿ ಪಡಿಸುವುದರಲ್ಲಿ ಸಮಸ್ಯೆಗಳಿವೆ ಎಂಬುದು ಸ್ಪಷ್ಟ. ಚುನಾವಣಾ ಕ್ಷೇತ್ರ ಮಟ್ಟದ ಚುನಾವಣಾ ಅಧಿಕಾರಿಯ ಮೂಲಕ ಗುರುತು ಮಾಡಿದ ಮತಪತ್ರವನ್ನು ಕಳಿಸುವುದು ಕೂಡ ಇನ್ನೊಂದು ಕ್ಲಿಷ್ಟ ಸವಾಲು. ಮತದಾರರು ಪಡೆಯುವ ಮತಪತ್ರದ ಗೋಪ್ಯತೆ ಮತ್ತು ಸಮಗ್ರತೆಯನ್ನು ರಕ್ಷಿಸುವುದು ಹೇಗೆ ಎಂಬುದೇ ಇಲ್ಲಿರುವ ಪ್ರಶ್ನೆ ಎಂಬುದು ಸ್ಪಷ್ಟ. ಈ ಮತದಾರರು ಹೊರಗಿನ ಪ್ರಭಾವಗಳಿಂದ, ಅವರ ವಿದೇಶಿ ಉದ್ಯೋಗದಾತರ ಪ್ರಭಾವಗಳಿಂದಲೂ ಹೊರತಾಗಲಾರದ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬುದು ಕಳವಳ ಉಂಟು ಮಾಡುವ ಸಂಗತಿ.

ಆದ್ದರಿಂದ ಚುನಾವಣಾ ಆಯೋಗ ಎನ್.ಆರ್.ಐ.ಗಳಿಗೆ ಮತದಾನದ ಹಕ್ಕನ್ನು ನೀಡುವುದಕ್ಕೆ ಮುಂದುವರೆಯುವ ಮೊದಲು, ಇದಕ್ಕೆ ಸಂಬಂಧಪಟ್ಟ ಕ್ಲಿಷ್ಟ ಪ್ರಶ್ನೆಗಳನ್ನು ವಿಶದವಾಗಿ ಚರ್ಚಿಸಲು ತಕ್ಷಣವೇ ಒಂದು ಸರ್ವ ಪಕ್ಷ ಸಭೆಯನ್ನು ಕರೆಯಬೇಕು ಎಂಬುದು ಸಿಪಿಐ(ಎಂ)ನ ಅಭಿಪ್ರಾಯ. ■

ಸದ್ಯಕ್ಕೆ ಲಭ್ಯವಾಗಬಹುದಾದ ಲಸಿಕೆ ಎಷ್ಟು?

ಪೂನಾದ ಸೀರಂ ಇನ್ಸ್ಟಿಟ್ಯೂಟ್ (ಎಸ್.ಐ.ಐ) ನ 4 ಕೋಟಿ ಕೋವಿಶೀಲ್ಡ್ ಲಸಿಕೆ ಲಭ್ಯವಿದೆ. ಆದರೆ ಜನಸಾಮಾನ್ಯರ ಉಪಯೋಗಕ್ಕಾಗಿ ತುರ್ತು ಅನುಮತಿಗೆ ಕಾಯುತ್ತಿದೆ. ಮುಂದಿನ ವರ್ಷದ ಫೆಬ್ರವರಿ ತಿಂಗಳೊಳಗೆ ಪ್ರತೀ ತಿಂಗಳೂ 5 ರಿಂದ 10 ಕೋಟಿ ಲಸಿಕೆ ತಯಾರಿಸುವ ಭರವಸೆ ನೀಡಿದೆ. ಅಂದರೆ ಮುಂದಿನ ವರ್ಷದೊಳಗೆ 75 ರಿಂದ 80 ಕೋಟಿ ಲಸಿಕೆ ಸರಬರಾಜು ಮಾಡಬಹುದು. ಆದರೆ ಅದರಲ್ಲಿ ನಮ್ಮ ದೇಶದ ಪಾಲೆಷ್ಟು, ಬೇರೆ ದೇಶಕ್ಕೆ ರಫ್ತಾಗುವ ಪ್ರಮಾಣವೆಷ್ಟು?

ಇನ್ನು ಲಸಿಕಾ ತಯಾರಿಕೆ ಫಲಪ್ರದವಾದರೆ 'ಭಾರತ್ ಬಯೋಟೆಕ್' ಹಾಗೂ 'ಕ್ಯಾಡಿಲ್ಲಾ' ಕಂಪೆನಿಗಳು ಮುಂದಿನ ವರ್ಷದೊಳಗೆ 50 ಕೋಟಿ ಲಸಿಕೆ ಪೂರೈಸುವುದಾಗಿ ಹೇಳಿದೆ.

ಇತ್ತೀಚೆಗೆ ದೊರೆತ ಮಾಹಿತಿಯಂತೆ ರಷ್ಯ 10 ಕೋಟಿ ಹೈದಾರಬಾದಿನ 'ಹೆಟೆರೋ ಲ್ಯಾಬೊರೇಟರಿಗೆ' ಮುಂದಿನ ವರ್ಷದಲ್ಲಿ ಹತ್ತು ಕೋಟಿ ತನ್ನ ಸ್ಪುಟ್ನಿಕ್ ವಿ ವ್ಯಾಕ್ಸೀನ್ ತಯಾರಿಕೆಗೆ ಅನುಮತಿ ನೀಡಿದೆ. ಹಾಗೂ ಈಗಾಗಲೆ ತನ್ನ ಸ್ಪುಟ್ನಿಕ್ ವಿ ಲಸಿಕೆಯ 2 ಮತ್ತು 3ನೇ ಹಂತದ ಪ್ರಯೋಗಕ್ಕೆ ಹಾಗೂ 10 ಕೋಟಿ ಲಸಿಕೆ ತಯಾರಿಸಲು ಭಾರತದಲ್ಲಿ ಮಾರಲು ರೆಡ್ಡೀಸ್ ಲ್ಯಾಬ್‌ಗೆ ಅನುಮತಿ ನೀಡಿದೆ. ಅದು ತನ್ನ ಲಸಿಕೆ 95% ಸಾಮರ್ಥ್ಯ ಹೊಂದಿರುವುದಾಗಿಯೂ ಪ್ರತೀ ಲಸಿಕೆಗೆ 10 ಡಾಲರ್ ಬೆಲೆಯಲ್ಲಿ ಮಾರುವುದಾಗಿಯೂ ಹೇಳಿಕೊಂಡಿದೆ. ಲಸಿಕೆಯ ತಯಾರಿಯ ಜೊತೆಗೆ ಈ ಲಸಿಕೆಗಳನ್ನು ತುಂಬಿಡುವ ಬಾಟ್ಲಿಗಳು, ಬಾಟ್ಲಿ ಮುಚ್ಚುವ ರಬ್ಬರ್ ಮುಚ್ಚಳ, ಆ ಮುಚ್ಚಳವನ್ನು ಭದ್ರವಾಗಿಡಲು ಅಲ್ಯುಮಿನಿಯಂ ಹಾಳೆಯ ಕವಚ ಹಾಗೂ ಬಾಟ್ಲಿಯ ಉಷ್ಣಾಂಶ ಸೂಚಿಸುವ 'ವ್ಯಾಕ್ಸೀನ್ ವಯಲ್ ಮೊನಿಟರ್ ಲೇಬಲ್‌ಗಳೂ ಸಾಕಷ್ಟು ಲಭ್ಯವಿರುವುದು ಅಗತ್ಯ. ■



ಕಾರ್ಮಿಕರ ಕೆಲಸ ಮತ್ತು ಜೀವನದ ಪರಿಸ್ಥಿತಿಗಳು ಪುಟ 11 ರಿಂದ

ಅವರು ಕಾರ್ಮಿಕರ ಕೊಳೆಗೇರಿ ವಸತಿಗಳ ಬಗ್ಗೆ ಹೀಗೆ ಬರೆಯುತ್ತಾರೆ:

"ಕೊಳಕು ಮತ್ತು ಹೊಲಸು ಮತ್ತು ದುರ್ವಾಸನೆಗೆ, ಹೌರಾ ಮತ್ತು ಕಲ್ಕತ್ತಾದ ಉತ್ತರದ ಉಪನಗರಗಳಲ್ಲಿನ ಬಸ್ತಿಗಳಿಗೆ (ಕಾರ್ಮಿಕರ ಕ್ವಾರ್ಟರ್ಸ್).. ಯಾವುದೂ ಸಮನಾಗಿರಲು ಸಾಧ್ಯವಿಲ್ಲ.. ಬಂಗಾಳ ಪುರಸಭೆಗಳ ಆಕ್ಟ್ ಅಡಿಯಲ್ಲಿಯ ಸೆಣಬಿನ ಗಿರಣಿಗಳಲ್ಲಿನ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಖಾಸಗಿ ಬಸ್ತಿಗಳಲ್ಲಿ ವಾಸಿಸುವ ಬಲವಂತಕ್ಕೆ ಒಳಗಾಗಿದ್ದಾರೆ. ಕೊಳೆಗೇರಿ ಪ್ರದೇಶಗಳನ್ನು ಸುಧಾರಿಸುವ ಕರ್ತವ್ಯವನ್ನು ಬಡ ನಿವಾಸಿಗಳಿಂದ ಬಹಳ ಸುಂದರವಾದ ಆದಾಯವನ್ನು ಗಳಿಸುವ ಮಾಲೀಕರ ಮೇಲೆ ಹಾಕಲಾಗುತ್ತದೆ. ಆದರೆ ಪಟ್ಟಭದ್ರ ಹಿತಾಸಕ್ತಿಗಳು ಈ ಕಾಯಿದೆಯಡಿಯಿರುವ ಅಧಿಕಾರಗಳನ್ನು ಎಂದಿಗೂ ಕಾರ್ಯರೂಪಕ್ಕೆ ತರುವುದಿಲ್ಲ. ಕಿಟಕಿಗಳು, ಚಿಮಣಿಗಳು ಅಥವಾ ಬೆಂಕಿಗೂಡುಗಳು ಇಲ್ಲದೆ, ಮತ್ತು ದ್ವಾರಗಳು ತುಂಬಾ ಕೆಳಮಟ್ಟದಲ್ಲಿರುವ ಕಾರಣ ಮೊಣಕಾಲುಗಳ ಮೇಲೆ ಬಾಗಿ ಪ್ರವೇಶಿಸಬೇಕು. ಈ ಬಸ್ತಿಗಳ ಸ್ಥಿತಿಯನ್ನು ವಿವರಿಸಲು ಅಸಾಧ್ಯ, ಬೆಳಕು ಅಥವಾ ನೀರು ಸರಬರಾಜು ಇಲ್ಲ, ಮತ್ತು ನೈರ್ಮಲ್ಯ ವ್ಯವಸ್ಥೆಗಳಿಲ್ಲ. ಬಸ್ತಿಗಳ ಗುಂಪುಗಳಿಗೆ ಪ್ರವೇಶವು ಸಾಮಾನ್ಯವಾಗಿ ಕಿರಿದಾದ ಉದ್ದಕ್ಕೂ ವರ್ಷಪೂರ್ತಿ ನಾರುತ್ತಿರುವ ಕೊಳೆಯ ಕೂಪವಾದ ಸುರಂಗದ ಮೂಲಕ ಇರುತ್ತದೆ, ಬಂಗಾಳದ ಎರಡನೇ ಅತಿದೊಡ್ಡ ಪುರಸಭೆಯಾದ ಹೌರಾದ ಕೆಲವು ಭಾಗಗಳಲ್ಲಿನ ಪರಿಸ್ಥಿತಿ ಕಲ್ಕತ್ತಾದ ಉತ್ತರ ಉಪನಗರಗಳಿಗಿಂತ ಕೆಟ್ಟದಾಗಿದೆ."

ನಗರದ ಮಹಿಳಾ ಕಾರ್ಮಿಕರ ಪರಿಸ್ಥಿತಿಗಳ ಬಗ್ಗೆ ತನಿಖೆ ನಡೆಸುತ್ತಿದ್ದ ಮಹಿಳಾ ವೈದ್ಯರೊಬ್ಬರು ತಮ್ಮ ಅನುಭವಗಳನ್ನು ಈ ಕೆಳಗಿನಂತೆ ಉಲ್ಲೇಖಿಸಿದ್ದಾರೆ:

"ಕ್ಲೈವ್‌ನ ಎರಡನೇ ಮಹಡಿಯಲ್ಲಿರುವ 15 ಅಡಿ 12 ಅಡಿ ಅಳತೆಯ ಒಂದು ಕೋಣೆಯಲ್ಲಿ (ಹೆಚ್ಚಿನ ಸಂಖ್ಯೆಯ ಕುಟುಂಬಗಳ ವಸತಿಗಾಗಿ ನಿರ್ಮಿಸಲಾದ ಫ್ಲಾಟ್‌ಗಳ ಮನೆಗಳ ಗುಂಪುಗಳು–ಲೇಖಕ), ಆರು ಕುಟುಂಬಗಳು ವಾಸಿಸುತ್ತಿರುವುದನ್ನು ನಾನು ಕಂಡೆ.. ನೆಲದ ಮೇಲಿನ ಆರು ಪ್ರತ್ಯೇಕ ಒಲೆಗಳು ಈ ಹೇಳಿಕೆಯನ್ನು ಸಾಬೀತುಪಡಿಸಿದವು. ವಿಚಾರಿಸಿದಾಗ, ಈ ಕೋಣೆಯಲ್ಲಿ ವಾಸಿಸುವ ವಯಸ್ಕರು ಮತ್ತು ಮಕ್ಕಳ ನಿಜವಾದ ಸಂಖ್ಯೆ ಮೂವತ್ತು ಎಂದು ನಾನು ಖಚಿತಪಡಿಸಿಕೊಂಡೆ. ಪ್ರತಿ ಕುಟುಂಬದ ಹಂಚಿಕೆಯನ್ನು ವಿಭಜಿಸಲು ಬಿದಿರುಗಳನ್ನು ಸೀಲಿಂಗ್‌ನಿಂದ ನೇತುಹಾಕಲಾಗಿತ್ತು, ಮತ್ತು ಅದರ ಮೇಲೆ ರಾತ್ರಿಯ ಬಟ್ಟೆಗಳನ್ನು ತೂಗಿಹಾಕಲಾಗಿತ್ತು . ಆರು ಮಹಿಳೆಯರಲ್ಲಿ ಮೂವರು ಶೀಘ್ರದಲ್ಲೇ ಹೆರಿಗೆಯಾಗುವ ನಿರೀಕ್ಷೆಯಲ್ಲಿದ್ದರು. ಈ ಕೋಣೆಯಲ್ಲಿ ಗೌಪ್ಯತೆಗಾಗಿ ಅವಳು ಹೇಗೆ ವ್ಯವಸ್ಥೆ ಮಾಡುತ್ತಾಳೆ ಎಂದು ನನ್ನ ಜೊತೆಯಲ್ಲಿ ಬಂದ ದಾದಿಯನ್ನು ನಾನು ಪ್ರಶ್ನಿಸಿದಾಗ, ನನಗೆ 4 ಅಡಿ 3 ಅಡಿಗಳಷ್ಟು ಸಣ್ಣ ಜಾಗವನ್ನು ತೋರಿಸಲಾಯಿತು, ಇದನ್ನು ಸಾಮಾನ್ಯವಾಗಿ ಈ ಉದ್ದೇಶಕ್ಕಾಗಿ ಪರದೆಯಿಂದ ಮುಚ್ಚಲಾಗುತ್ತಿತ್ತು.. ರಾತ್ರಿಯಲ್ಲಿ ಆ ಕೋಣೆಯ ವಾತಾವರಣವು ಆರು ಒಲೆಗಳು ಮತ್ತು ಇತರ ಕಲ್ಮಶಗಳಿಂದ, ಹೊಗೆಯಿಂದ ತುಂಬಿರುತ್ತದೆ, ಇದು ಹೆರಿಗೆಯ ಮೊದಲು ಯಾವುದೇ ಮಹಿಳೆಯನ್ನು ಮತ್ತು ನಂತರ ಶಿಶುವನ್ನು ದೈಹಿಕವಾಗಿ ಅಂಗವಿಕಲಗೊಳಿಸುತ್ತದೆ. ನಾನು ನೋಡಿದ ಅಂತಹ ಹಲವು ಕೋಣೆಗಳಲ್ಲಿ ಇದು ಒಂದು."

ಹೀಗಿತ್ತು ಭಾರತದ ಇತಿಹಾಸದಲ್ಲಿ ಮುಂದೆ ಅತ್ಯಂತ ದೊಡ್ಡ ಕ್ರಾಂತಿಕಾರಿ ಸಾಮರ್ಥ್ಯವನ್ನು ಹೊಂದಲಿದ್ದ ಹೊಸ ಸಾಮಾಜಿಕ ಶಕ್ತಿಯಾದ ಭಾರತದ ಶ್ರಮಜೀವಿಗಳ ಅಸಹನೀಯ ಬದುಕಿನ ಮತ್ತು ಕೆಲಸದ ಪರಿಸ್ಥಿತಿ. ■

JANASHAKTHI KANNADA VARA PATRIKE December 14-20, 2020 Price: Rs. 10/- Date of Publication: 11 December 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21


ಚಿಕ್ಕಬಳ್ಳಾಪುರ


ಮೈಸೂರು


ಉ. ಕನ್ನಡ


ರಾಯಚೂರು


ಕೋಲಾರ

ಭಾರತ್ ಬಂದ್ ಗೆ ಜನ ಬೆಂಬಲ :
ಮೋದಿ ಪ್ರತಿಕೃತಿ ದಹಿಸಿ ಆಕ್ರೋಶ ಹೊರಹಾಕಿದ ರೈತರು


ದ. ಕನ್ನಡ


ಹಾಸನ


ಮಂಡ್ಯ


ಕಲಬುರಗಿ



ಕೊಪ್ಪಳ



ಹ. ಬೊಮ್ಮನಹಳ್ಳಿ


ಚಿತ್ರದುರ್ಗ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**